ಶ್ರೀಮದ್ವಾದಿರಾಜತೀರ್ಥ ಪೂಜ್ಯಚರಣ ವಿರಚಿತ

ಲಕ್ಷ್ಮೀಶೋಭನ ಹಾಡು

(ವ್ಯಾಖ್ಯಾನ ಸಹಿತ)

ಮತ್ತು

ಶ್ರೀಜಗನ್ನಾಥದಾಸಾರ್ಯ ವಿರಚಿತ

ಭಾರತೀ ಮಜ್ಜನನೀ

(ವ್ಯಾಖ್ಯಾನ ಸಹಿತ)



ವ್ಯಾಖ್ಯಾನ:

ಕೀರ್ತಿಶೇಷ ಮಾಧ್ವಭೂಷಣ ದಿ|| ಶ್ರೀ ಬಿ. ಭೀಮರಾವ್

ಪ್ರಕಾಶಕರು:

ಶ್ರೀ ಸರ್ವಜ್ಞಾಚಾರ್ಯ ಸೇವಾ ಸಂಘ, ದಾವಣಗೆರೆ - 577 002

ಶ್ರೀಸರ್ವಜ್ಞಾಚಾರ್ಯ ಸೇವಾ ಸಂಘ, ದಾವಣಗೆರೆ.

ಸುಮಾರು 77 ವರ್ಷಗಳಿಂದ ಮಾಧ್ವಸಮಾಜದಲ್ಲಿ ತತ್ವಜ್ಞಾನ ಪ್ರಚಾರ ಮಾಡುತ್ತಿರುವ ಧಾರ್ಮಿಕ ಸಂಸ್ಥೆ

ಸಂಘದ ಸ್ಥಾಪನೆ	: 08 / 07 / 1934
ಶ್ರೀಶ್ರೀ1008 ಸತ್ಯಧ್ಯಾನತೀರ್ಥರವರಿಂದ ಅಡಿಗಲ್ಲನ್ನಿಡುವ ಮೂಲಕ ಅನುಗ್ರಹಿಸಲ್ಪಟ್ಟ ಸಂಘದ ಕಟ್ಟಡದ ಉದ್ಘಾಟನೆ	: 01 / 06 / 1945
ರಜತ ಮಹೋತ್ಸವ ಆಚರಣೆ	: 12 / 02 / 1959
ಸುವರ್ಣ ಮಹೋತ್ಸವ ಆಚರಣೆ	: 09 / 04 / 1984
ವಜ್ರ(ಅಮೃತ)ಮಹೋತ್ಸವ ಆಚರಣೆ	: 10 / 04 / 2012

ಶ್ರೀಮದ್ವಾದಿರಾಜತೀರ್ಥ ಪೂಜ್ಯಚರಣ ವಿರಚಿತ

ಲಕ್ಷ್ಮೀಶೋಭನ ಹಾಡು

(ವ್ಯಾಖ್ಯಾನಸಹಿತ)

ಮತ್ತು

ಶ್ರೀಜಗನ್ನಾಥದಾಸಾರ್ಯ ವಿರಚಿತ

ಭಾರತೀ ಮಜ್ಜನನಿ (ದೇವರ ನಾಮ)

(ವ್ಯಾಖ್ಯಾನಸಹಿತ)

ವ್ಯಾಖ್ಯಾನ ಬರೆದವರು :

ಕೀರ್ತಿಶೇಷ ಮಾಧ್ವಭೂಷಣ ಶ್ರೀ ಬಿ. ಭೀಮರಾವ್

ದಾವಣಗೆರೆ

ಪ್ರಕಾಶಕರು:

ಶ್ರೀಸರ್ವಜ್ಞಾಚಾರ್ಯ ಸೇವಾ ಸಂಘ

ಕೆ.ಬಿ. ಬಡಾವಣೆ, ದಾವಣಗೆರೆ - ೫೭೭ ೦೦೨

ಪ್ರಥಮ ಮುದ್ರಣ : ೧೯೭೦ (ಕೀರ್ತಿಶೇಷ ಶ್ರೀಹರಿದಾಸರತ್ನಂ ಗೋಪಾಲದಾಸರಿಂದ)

ಶ್ರೀಸರ್ವಜ್ಞಾಚಾರ್ಯ ಸೇವಾ ಸಂಘ, ದಾವಣಗೆರೆ ಈ ಸಂಸ್ಥೆಯ ವತಿಯಿಂದ (ಮೂರು ಕೃತಿಗಳನ್ನು ಒಟ್ಟುಗೂಡಿಸಿ)

ಪ್ರಥಮ ಮುದ್ರಣ : ೨೦೧೨

ವ್ಯಾಖ್ಯಾನಕಾರರು : ಕೀರ್ತಿಶೇಷ ಶ್ರೀ ಭಿ. ಭೀಮರಾವ್, ದಾವಣಗೆರೆ

ಪುಟ :

ಬೆಲೆ :

ಪುಸ್ತಕಗಳು ದೊರೆಯುವ ಸ್ಥಳ:

1) ಸಂಘದ ಕಾರ್ಯಾಲಯ, ದಾವಣಗೆರೆ, 08192-230340

2) ಬಿ.ವಿ. ಪ್ರಹ್ಲಾದ, ರಾಜಾಜಿನಗರ, ಬೆಂ., 080-28370093(ಮನೆ) 9341038586

3) ವೇದಾಂತ ಬುಕ್ ಹೌಸ್, ಚಾಮರಾಜಪೇಟೆ, ಬೆಂಗಳೂರು. 080-26507590

4) ವಂದನಾಬುಕ್ ಹೌಸ್, ಎನ್.ಆರ್. ಕಾಲೋನಿ, ಬೆಂಗಳೂರು. 080-26770826

ಮುದ್ರಕರು:

ಶ್ರೀ ಚಾಮುಂಡೇಶ್ವರಿ ಪ್ರಿಂಟರ್ಸ್

ಶ್ರೀನಿವಾಸನಗರ, ಬೆಂಗಳೂರು - 560 050

ಫೋನ್: 080-26696388, 26791827

ಶ್ರೀಸರ್ವಜ್ಞಾಚಾರ್ಯಸೇವಾ ಸಂಘ, ದಾವಣಗೆರೆ

ಪ್ರಕಾಶಕರ ಅರಿಕೆ

''ನ ಮಾಧವಸಮೋ ದೇವಃ ನ ಚ ಮಧ್ವಸಮೋ ಗುರುಃ।
ನ ತದ್ವಾಕ್ಯಸಮಂ ಶಾಸ್ತ್ರಂ ನ ಚ ತಜ್ಜ್ಞಸಮಃ ಪುಮಾನ್ ॥

ಸಂಘದ ಅಮೃತಮಹೋತ್ಸವವನ್ನು - ಈ ವರ್ಷ (೨೦೧೨) ದ ಏಪ್ರಿಲ್ ತಾ॥ ೯, ೧೦ ರಂದು ಆಚರಿಸಲಾಯಿತು. ಈ ಶುಭ ದಿನಕ್ಕೆ ಹತ್ತಿರವಾಗಿರುವ ಮಾಸದಲ್ಲಿಯೇ ಶ್ರೀ ಟೀಕಾಚಾರ್ಯರ ಆರಾಧನೆಯ ದಿನದಂದು ಸಂಘದ ವತಿಯಿಂದ ಈ ಪುಸ್ತಕವನ್ನು ಪ್ರಪ್ರಥಮ ಬಾರಿಗೆ ಪ್ರಕಟಿಸುತ್ತಿರುವುದು ಸಂತೋಷವಾಗಿದೆ.

ಶ್ರೀವಾದಿರಾಜತೀರ್ಥಯತಿಪುಂಗವರು ಮಾಧ್ವ ವಾಙ್ಮಯವನ್ನು ಶ್ರೀಮಂತಗೊಳಿಸಿರುವ ರೆಂದು ಜ್ಞಾನಿಗಳು ಅವರನ್ನು ಕೊಂಡಾಡಿದ್ದಾರೆ. ಶ್ರೀ ಶ್ರೀ ಶ್ರೀಪಾದರಾಜರು, ಶ್ರೀಶ್ರೀ ವ್ಯಾಸರಾಜರಂತೆ ಇವರೂ ಸಹ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿ, ಸಾಧಕರಿಗೆ ಉಪಯೋಗವಾಗುವಂತೆ ಮಾಡಿ ಆಶೀರ್ವದಿಸಿದ್ದಾರೆ. ಇವರ ಕೃತಿಗಳೆಲ್ಲವೂ ಅತ್ಯಂತ ರಸಭರಿತವುಳ್ಳದ್ದಾಗಿವೆ. ಪ್ರಮೇಯಗಳನ್ನೊಳಗೊಂಡಿರುವುದಾಗಿವೆ. ಸಾಹಿತ್ಯ ಪ್ರಪಂಚದಲ್ಲಿ ಶ್ರೀ ರುಕ್ಮಿಣೀಶವಿಜಯ ಮತ್ತು ಶಾಸ್ತ್ರಗ್ರಂಥಗಳ ಪೈಕಿ ಗುರ್ವರ್ಥದೀಪಿಕಾ ಮತ್ತು ಯುಕ್ತಿ-ಮಲ್ಲಿಕಾ ಈ ಗ್ರಂಥಗಳನ್ನು ಜ್ಞಾನಿಗಳೆಲ್ಲರೂ ಒಕ್ಕೊರಳಿಂದ ಪ್ರಶಂಶೆಮಾಡಿದ್ದಾರೆ. ಈ ವರ್ಗದಲ್ಲಿಯೇ ಸೇರಿಸಬಹುದಾದ ಕನ್ನಡ ಭಾಷೆಯಲ್ಲಿರುವ 'ಶ್ರೀಲಕ್ಷ್ಮೀ ಶೋಭನ ಪದ' ಕೃತಿಯಾಗಿದೆ. ವ್ಯಾಖ್ಯಾನಕಾರರು ಮತ್ತು ಹಿಂದಿನ ಪ್ರಕಾಶಕರು ಈ ಕೃತಿಯಲ್ಲಿರುವ ಮಹತ್ವವನ್ನು ತಿಳಿಸಿದ್ದಾರೆ. ವಾಯುದೇವರ ದ್ವಿತೀಯಾವತಾರರಾದ ಶ್ರೀಭೀಮಸೇನದೇವರ ಜ್ಞಾನ ಮತ್ತು ಶಕ್ತಿ-ಸಾಮರ್ಥ್ಯದ ಉತ್ಕೃಷ್ಟತೆಯನ್ನು ಕೀಚಕವಧೆ (ಶ್ರೀಭೀಮಸೇನ ವಿಜಯ) ತಿಳಿಸುತ್ತದೆ.

ಶ್ರೀಜಗನ್ನಾಥದಾಸರ ಕೃತಿ 'ಭಾರತೀ ಮಜ್ಜನನಿ' ಕೃತಿಯು ವಾಯು-ಭಾರತೀ ದೇವಿಯರ ಗುಣಗಳ ಮಹತ್ವವನ್ನು ಚೆನ್ನಾಗಿ ಅರಿವು ಮಾಡಿಕೊಡುತ್ತದೆ. ಈ ಮೂರು ಕೃತಿಗಳಿಗೂ ಕೀರ್ತಿಶೇಷ ಶ್ರೀ ಬಿ. ಭೀಮರಾವ್, ದಾವಣಗೆರೆ - ಇವರು ವ್ಯಾಖ್ಯಾನಗಳನ್ನು ಸುಮಾರು ೪೫ ವರ್ಷಗಳ ಪೂರ್ವದಲ್ಲಿ ರಚಿಸಿ, 'ಶ್ರೀಹರಿದಾಸಭಾರತೀ' ಸಂಪಾದಕರಾದ ಕೀರ್ತಿಶೇಷ ಹರಿದಾಸರತ್ನಂ ಗೋಪಾಲದಾಸರಿಗೆ ಕೊಟ್ಟಿದ್ದರು. ಅವರು ಮುದ್ರಣ ಮಾಡಿ ವಿತರಿಸಿದ್ದರು. ಆ ಪ್ರತಿಗಳು ಈಗ ದೊರಕುತ್ತಿಲ್ಲ. ಅವರ ಪುತ್ರರು ನಮ್ಮ ಸಂಘದ ಮೇಲಿನ ಅಭಿಮಾನದಿಂದ, ಅದರ ಮೇಲಿನ ಹಕ್ಕನ್ನು ಸಂಘಕ್ಕೆ ಕೊಟ್ಟು ಒಮ್ಮೆ ಪ್ರಕಟಣೆ ಮಾಡಲು ಅನುಮತಿ ನೀಡಿ ಉಪಕರಿಸಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಈಗ ಪ್ರಕಟಿಸುತ್ತಿದ್ದೇವೆ. ಅವರಿಗೆ ಈ ಮೂಲಕ ಕೃತಜ್ಞತೆಗಳನ್ನು ತಿಳಿಸುತ್ತಿದ್ದೇವೆ.

ಮೇಲ್ಕಂಡ ಮೂಲ ಕೃತಿಗಳು ಬಹಳ ಅರ್ಥಗರ್ಭಿತವಾಗಿರುವುದಾಗಿದೆ. ಸಾಮಾನ್ಯ ತಿಳಿವಳಿಕೆಯುಳ್ಳವರಿಗೆ ಒಳಾರ್ಥ ತಿಳಿಯುವುದು ಅಶಕ್ಯ. ವ್ಯಾಖ್ಯಾನಕಾರರು ಸುಲಭರೀತಿಯಲ್ಲಿ

ಅರ್ಥ, ವಿಶೇಷ ವಿಷಯಗಳನ್ನು ಬರೆದುಕೊಟ್ಟು ಸಜ್ಜನರಿಗೆ ಉಪಕಾರ ಮಾಡಿದ್ದಾರೆ. 'ವಿಷ್ಣು ರಹಸ್ಯ, ಯುಕ್ತಿಮಲ್ಲಿಕಾ ಮುಂತಾದ ಸಂಸ್ಕೃತ ಭಾಷೆಯಲ್ಲಿರುವ ಗ್ರಂಥಗಳನ್ನು ಇದೇ ವ್ಯಾಖ್ಯಾನಕಾರರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ರೀತಿಯಾಗಿ ದಿ|| ಬಿ. ಭೀಮರಾಯರ ಪರಿಚಯ ಓದುಗರಿಗೆ ಸಾಕಷ್ಟು ಆಗಿದೆ. ವ್ಯಾಖ್ಯಾನಸಹಿತವಾದ ಈ ಪುಸ್ತಕವನ್ನು ಮಾಧ್ವ ಸಮಾಜದವರು ಆದರದಿಂದ ಸ್ವೀಕರಿಸುತ್ತಾರೆ ಎಂಬ ಭರವಸೆ ಇದೆ. ಈ ಪುಸ್ತಕ ಮತ್ತು "ತತ್ತ್ವಸುವ್ವಾಲಿ" ಪುಸ್ತಕ ಒಂದೇ ಮಾಸದಲ್ಲಿ ಬಿಡುಗಡೆ ಮಾಡಲ್ಪಡುತ್ತಿದೆ. ಹೆಚ್ಚಿನ ಭಜನಾಮಂಡಳಿಗಳು ಈ ಎರಡೂ ಗ್ರಂಥಗಳಲ್ಲಿರುವುದನ್ನು ಬಾಯಿಪಾಠ ಮಾಡಿಕೊಂಡಿರುತ್ತಾರೆ. ಅರ್ಥ ತಿಳಿದು ನುಡಿಗಳನ್ನು ಹೇಳಿಕೊಳ್ಳುವ ಪರಿಪಾಠ ಅಧಿಕ ಫಲ ದೊರಕಿಸಿಕೊಡುತ್ತದೆ.

ಈ ಪುಸ್ತಕಕ್ಕೆ ಮುನ್ನುಡಿಯನ್ನು ನೀಡಿರುವ ಬೆಂಗಳೂರಿನ ಡಾ|| ಆನಂದತೀರ್ಥಾಚಾರ್ಯ ನಾಗಸಂಪಿಗೆಯವರು ಉತ್ತಮ ಶ್ರೇಣಿಯ ವಿದ್ವಾಂಸರ ಸಮೂಹದಲ್ಲಿದ್ದು, ಚರ್ಚಾಗೋಷ್ಠಿಗಳನ್ನು ಆಗಾಗ್ಗೆ ಏರ್ಪಡಿಸಿ ಜಿಜ್ಞಾಸುಗಳಿಗೆ ಬಹಳ ಉಪಕಾರ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿರುವ 'ಪೂರ್ಣಪ್ರಜ್ಞಾ ಸಂಶೋಧನ ಮಂದಿರ'ದ ಡೈರೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಾ, ಅನೇಕ ಉತ್ತಮ ದರ್ಜೆಯ ಪುಸ್ತಕಗಳನ್ನು ಪ್ರಕಟಿಸಿದ್ದಾರೆ ಅವರು ಸಂಘದ ಮೇಲಿನ ಅಭಿಮಾನವುಳ್ಳವರಾಗಿ, ಸಂಘದ ತತ್ವಪ್ರಚಾರಕ್ಕೆ ಸಲಹೆಯನ್ನೂ ನೀಡಿದ್ದಾರೆ. ಅವರಿಗೆ ಗೌರವ ಪೂರ್ವಕ ನಮಸ್ಕಾರಗಳನ್ನು ಅರ್ಪಿಸುತ್ತಿದ್ದೇವೆ.

ನಮ್ಮ ಸಂಘದಲ್ಲಿ ೧೫-೧೬ ವರ್ಷಗಳ ಹಿಂದೆ, ಕಡೂರು ಕೃಷ್ಣಮೂರ್ತಿ ಆಚಾರ್ಯರೆಂಬ ವಿದ್ವಾಂಸರು ಹಲವಾರು ತಿಂಗಳುಗಳ ಕಾಲ ನಿತ್ಯದಲ್ಲಿ ಪಾಠ, ಉಪನ್ಯಾಸಗಳನ್ನು ಮಾಡುತ್ತಿದ್ದರು. ಅವರ ಕಿರಿಯ ಸಹೋದರರಾದ ಶ್ರೀರಾಮಚಂದ್ರಮೂರ್ತಿಗಳ ಪುತ್ರ ಶ್ರೀಸಿಂಹರವರು ಈ ಹೊತ್ತಿಗೆಯ ಪ್ರಕಟಣೆಗೆ ಬಹಳ ಸಹಕರಿಸಿದ್ದಾರೆ. ಜೊತೆಗೆ ಬೆಂಗಳೂರಿನ ಶ್ರೀ ಬಿ.ಎನ್. ನಾಗರಾಜ್‌ರವರೂ ಸಹಕಾರ ನೀಡಿದ್ದಾರೆ. ಅವರುಗಳ ಕುಟುಂಬಕ್ಕೆ ಭಗವಂತನು ಕಲ್ಯಾಣವನ್ನುಂಟುಮಾಡಲಿ ಎಂದು ಲಕ್ಷ್ಮೀನಾರಾಯಣರನ್ನು ಪ್ರಾರ್ಥಿಸುತ್ತೇವೆ ಅವರಿಗೆ ಕೃತಜ್ಞತೆಗಳು.

ಈ ಪುಸ್ತಕದ ರಕ್ಷಾಕವಚವನ್ನು ಅಂದವಾಗಿ ತಯಾರು ಮಾಡಿರುವ ಶ್ರೀಯುತ ಕೆ.ಎಂ. ಶೇಷಗಿರಿರವರಿಗೆ ಕೃತಜ್ಞತೆಗಳು ಡಿ.ಟಿ.ಪಿ. ಮಾಡಿ ಸಹಕರಿಸಿದ ಶ್ರೀಮತಿ ದೇವಿಕಾರವರಿಗೆ ಮತ್ತು ಸಕಾಲದಲ್ಲಿ ಮುದ್ರಣ ಮಾಡಿಕೊಟ್ಟಿರುವ ಚಾಮುಂಡೇಶ್ವರಿ ಪ್ರಿಂಟರ್ಸ್‌ರವರಿಗೂ ಕೃತಜ್ಞತೆಗಳು.

ಕರಡು ಪ್ರತಿಗಳನ್ನು ತಿದ್ದಿ - ಶುದ್ಧಮಾಡಿಕೊಟ್ಟಿರುವ ಮತ್ತು ಹಿರಿಯರಾಗಿರು ಬೆಂಗಳೂರಿನಲ್ಲಿರುವ ಮಾನ್ಯ ಶ್ರೀಶಮೂರ್ತಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಜುಲೈ ೨೦೧೨
ನಂದನ ಸಂ|| ಆಷಾಡಮಾಸ

ಆರ್. ಜಗನ್ನಾಥರಾವ್
ಸಂಘದ ಕಾರ್ಯಕಾರಿ ಸಮಿತಿ ಪರವಾಗಿ

ಡಾ॥ ಆನಂತತೀರ್ಥಾಚಾರ್ಯ ನಾಗಸಂಪಿಗೆ
ಡೈರೆಕ್ಟರ್, ಪೂರ್ಣಪ್ರಜ್ಞ ಸಂಶೋಧನಾ ಮಂದಿರಮ್
ಬೆಂಗಳೂರು

ನಲ್ನುಡಿ

ದಾವಣಗೆರೆಯ, ಸರ್ವಜ್ಞಾಚಾರ್ಯಸೇವಾಸಂಘದಿಂದ, ದಿ. ಬಿ.ಭೀಮರಾಯರ ಲಕ್ಷ್ಮೀಶೋಭಾನ ಪದ - ಕೀಚಕವಧೆ - ಭಾರತಿ ಮಜ್ಜನನೀ ಎಂಬ ಕೃತಿ ರತ್ನಗಳು ಪ್ರಕಾಶನಗೊಳ್ಳುತ್ತಿರುವುದು ಸಂತಸದ ಸಂಗತಿ. ದಿ. ಶ್ರೀಭೀಮರಾಯರು ನಾಸ್ತಿಕ್ಯನಿರಾಸ - ಆಗಮಪ್ರಾಮಾಣ್ಯ ಮೊದಲಾದ ಪ್ರಜ್ಞಾವಂತರನ್ನು ತಣಿಸುವ ಕೃತಿಗಳನ್ನು ರಚಿಸಿದ್ದಾರೆ. ರಾಯರ ಪ್ರಾತಃಸಂಕಲ್ಪಗದ್ಯ ಮತ್ತು ಶ್ರೀವಾದಿರಾಜರ ವೈಕುಂಠವರ್ಣನೆಗೆ ಇವರು ರಚಿಸಿದ ಕನ್ನಡವ್ಯಾಖ್ಯಾನಗಳು ಜನಪ್ರಿಯವಾಗಿವೆ. ವೃತ್ತಿಯಿಂದ ವಕೀಲರಾದರೂ ಪ್ರವೃತ್ತಿಯಿಂದ ವೇದಾಂತಿಗಳಾದ ಅವರ ಶಾಸ್ತ್ರಸೇವೆ ಸಮಾಜಕ್ಕೆ ಅನುಕರಣೀಯ ಸಂಗತಿ.

ಲಕ್ಷ್ಮೀಶೋಭಾನೆಯು, ಲಕ್ಷ್ಮೀನಾರಾಯಣರಿಗೆ ಸಮಪ್ರಾಧಾನ್ಯವನ್ನು ನಿರಾಕರಿಸಿ, ಶ್ರೀಹರಿಯ ಪಾರಮ್ಯವನ್ನು ಬೋಧಿಸುತ್ತದೆ. ವೇದಾಂತದ ಪ್ರಧಾನ ತತ್ತ್ವಗಳ ವಿವೇಚನೆ ಇಲ್ಲಿದೆ. ಶ್ರೀವಾದಿರಾಜರು, ಇಲ್ಲಿ ಹೃದ್ಯ-ಅನವದ್ಯ ಪದ್ಯಗಳಿಂದ ಶ್ರೀಹರಿಯ ವಿಶಿಷ್ಟವಾದ ಹಿರಿಮೆ-ಗರಿಮೆಗಳನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ.

'ಕೀಚಕವಧೆ' ಕೃತಿ ಜೀವೋತ್ತಮರಾದ ಶ್ರೀಮುಖ್ಯಪ್ರಾಣನ ಭೂಮಾವ್ಯಕ್ತಿತ್ವವನ್ನು ಬಲಿ-ವಿಕ್ರಮ-ವಿಜ್ಞಾನಗಳ ಮಹತಿಯನ್ನು ಸುಂದರವಾಗಿ ಬಣ್ಣಿಸಿದೆ. ಯೋಗ್ಯತೆ ಮೀರಿದ ಬಯಕೆ ಇರುವ ತಾಮಸನಿಗೆ ನಿತ್ಯನರಕವೇ ಫಲವೆಂಬ ಪ್ರಧಾನತತ್ತ್ವ ಈ ಕಥೆಯಲ್ಲಿ ರೂಪಿತವಾಗಿದೆ.

'ಭಾರತಿ ಮಜ್ಜನನಿ' ಎಂಬ ಕೃತಿ, ಪಿಂಡಾಂಡ-ಬ್ರಹ್ಮಾಂಡಗಳಲ್ಲಿ ಭಾರತೀದೇವಿಯ ವ್ಯಾಪ್ತಿ-ಕಾರ್ಯ ವೈಖರಿಗಳನ್ನು ಪರಿಚಯಿಸುತ್ತಿದೆ. 'ಲಕ್ಷ್ಮೀಶೋಭಾನೆ' ಹಾಗೂ 'ಕೀಚಕವಧೆ' ಎಪ್ಪತ್ತರದಶಕದಲ್ಲಿ ಮುದ್ರಣಗೊಂಡಿದ್ದು, 'ಭಾರತಿ ಮಜ್ಜನನಿ' ಎಂಬ ಕೃತಿಯೊಂದಿಗೆ ಒಂದೇ ಸಂಪುಟದಲ್ಲಿ ಈಗ ಮುದ್ರಣಗೊಳ್ಳುತ್ತಿದೆ. ಈ ಮೂರು ಕೃತಿರತ್ನಗಳು ಸಾಧಕರಿಗೆ ಉತ್ತಮ ಬೆಳಕು ನೀಡುವುದರಲ್ಲಿ ಸಂದೇಹವಿಲ್ಲ. ಈ ಹೊತ್ತಗೆಗಳನ್ನು ಪ್ರಕಾಶನಮಾಡುತ್ತಿರುವ ದಾವಣಗೆರೆಯ ಸರ್ವಜ್ಞ ಸೇವಾಸಂಘವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

-ಆನಂದತೀರ್ಥಾಚಾರ್ಯ ನಾಗಸಂಪಿಗೆ,

ಬೆಂಗಳೂರು

ಗ್ರಂಥಪ್ರಸ್ತಾವಃ

''ನ ಮಾಧವಸಮೋ ದೇವಃ ನ ಚ ಮಧ್ವಸಮೋ ಗುರುಃ ।
ನ ತದ್ವಾಕ್ಯಸಮಂ ಶಾಸ್ತ್ರಂ ನ ಚ ತಜ್ಞಸಮಃ ಪುಮಾನ್ ॥
ಕಾಮಧೇನುರ್ಯಥಾ ಪೂರ್ವಂ ಸರ್ವಾಭೀಷ್ಟಫಲಪ್ರದಾ ।
ತಥಾ ಕಲೌ ವಾದಿರಾಜ ಶ್ರೀಪಾದೋಽಭೀಷ್ಟದಃ ಸತಾಮ್ ॥''

ಓದುಗರಲ್ಲಿ ವಿಜ್ಞಾಪನೆ :—

ಮಹಾತ್ಮರಾದ ಶ್ರೀವಾದಿರಾಜೇಂದ್ರಯತಿಗಳು ಸಕಲ ಮಾಧ್ವರಿಂದ ಸಂಸೇವ್ಯರಾದ ಉತ್ತಮ ದೇವಾಂಶರು. ಮುಂದಿನ ಕಲ್ಪದಲ್ಲಿ ವಾಯುಪಟ್ಟಕ್ಕೆ ಬರಲಿರುವ ಋಜುಗಣದ ಲಾತವ್ಯರೆಂಬ ನಂಬಿಕೆಯೂ ಇದೆ. ಶ್ರೀವಾಯುದೇವರ ತೃತೀಯಾವತಾರರಾದ ಶ್ರೀಮನ್ಮಧ್ವಾಚಾರ್ಯರಿಂದ ಉಡುಪಿಯಲ್ಲಿ ಪ್ರತಿಷ್ಠಿತನಾದ ಶ್ರೀಕೃಷ್ಣನನ್ನು ಒಂದು ಶತಮಾನದಷ್ಟು ದೀರ್ಘಕಾಲ ಸೇವಿಸಿ **ಶಿರ್ಶಿ** ಬಳಿಯಿರುವ **ಸೋದೆ** (ಸೋಂದಾ) ಗ್ರಾಮದಲ್ಲಿ ವೃಂದಾವನಸ್ಥರಾಗಿ ಭಕ್ತರ ಅಭೀಷ್ಟಗಳನ್ನು ಪೂರೈಸುತ್ತ ವಿರಾಜಮಾನರಾಗಿದ್ದಾರೆ. ಈ ಮಹಾತ್ಮರ ಜ್ಞಾನಾದಿ ಗುಣಮಹಿಮೆಗಳನ್ನು ಪಾಮರನಾದ ನಾನು, ವರ್ಣಿಸಲು ಅಸಮರ್ಥನೂ ಅನಧಿಕಾರಿಯೂ ಆಗಿರುವೆನು. ಪಂಡಿತಶ್ರೇಷ್ಠರೂ, ಅಪರೋಕ್ಷಜ್ಞಾನಿಗಳಾದ ಹರಿದಾಸವರ್ಯರುಗಳೂ, ಇವರ ಮಹಿಮೆಗಳನ್ನು ನಿರೂಪಿಸಿರುವ, ಶ್ರೀವಾದಿರಾಜಗುರು- ವರಚರಿತಾಮೃತವೆಂಬ ಸಂಸ್ಕೃತಕಾವ್ಯ ಹಾಗೂ ಕನ್ನಡ ಪದಪದ್ಯಗಳನ್ನೂ ಓದಿ ಆನಂದಿಸಬಹುದೆಂದು ಸೂಚಿಸುತ್ತೇನೆ.

ಶ್ರೀವಾದಿರಾಜರು ಸಂಸ್ಕೃತದಲ್ಲಿ ಉದ್ದಾಮಪಂಡಿತರು – ಚತುಃಷಷ್ಟಿವಿದ್ಯಾಪಾರಂ- ಗತರು. ಅವರಿಂದ ರಚಿತವಾದ **ಗುರ್ವರ್ಥದೀಪಿಕಾ, ಭಾವಪ್ರಕಾಶಿಕಾ,** ಮೊದಲಾದವುಗಳು ವ್ಯಾಖ್ಯಾನಗ್ರಂಥಗಳು, **ಯುಕ್ತಿಮಲ್ಲಿಕಾ,** ಮೊದಲಾದ ಶ್ರೇಷ್ಠತರಗತಿಯ ಸ್ವತಂತ್ರಗ್ರಂಥಗಳೂ ಇವೆ. ಮುದ್ರಣಗೊಂಡು ಪ್ರಕಟವಾಗಲಿರುವ ಇನ್ನೂ ಅನೇಕ ಗ್ರಂಥಗಳೂ ಇವೆ. ಅವರ **'ರುಕ್ಮಿಣೀಶ ವಿಜಯ'** ಕಾವ್ಯವು ಮಹಾಕಾವ್ಯಗಳಲ್ಲಿ ಶ್ರೇಷ್ಠವಾದುದೆಂಬ ಕೀರ್ತಿಯನ್ನು ಪಡೆದಿದೆ. ಅವರ ಒಂದೊಂದು ಗ್ರಂಥವೂ ಅವರ ಅಗಾಧಪಾಂಡಿತ್ಯ, ಕವಿತಾಶಕ್ತಿ ಮತ್ತು ಚಾತುರ್ಯಗಳನ್ನು ಸಾರುತ್ತದೆ. ಮಧ್ವಸಿದ್ಧಾಂತತತ್ವಗಳನ್ನು ಶಾಸ್ತ್ರಾನುಸಾರಿಗಳಾದ ಸದ್ಯುಕ್ತಿಗಳಿಂದ ಸಾಧಿಸಿಕೊಡುವುದು ಇವರ ಎಲ್ಲ ಗ್ರಂಥಗಳ ವೈಶಿಷ್ಟ್ಯ. ಯುಕ್ತಿಗಳ ನಿರೂಪಣೆಯು ರಸಭೋಜನದಂತೆ ಮನೋಹರವಾಗಿದ್ದು, ತಾತ್ವಿಕಪ್ರಮೇಯಗಳನ್ನು ನಿಸ್ಸಂಶಯವಾಗಿ ಸಾಧಿಸಿಕೊಡುತ್ತವೆ.

ಸಂಸ್ಕೃತವನ್ನರಿಯದ ಸಾಮಾನ್ಯರಿಗೆ ಸಹ ಇಹಪರಶ್ರೇಯಸ್ಸಿಗೆ ಏಕೈಕಸಾಧನವಾದ **ವಿಷ್ಣುಸರ್ವೋತ್ತಮತ್ವಾದಿ** ಮಧ್ವಸಿದ್ಧಾಂತತತ್ವಗಳ ಜ್ಞಾನವನ್ನು ದೊರಕಿಸಲು, ಕೃಪಾಳುಗಳಾದ ಈ ಯತೀಂದ್ರರು, ಕನ್ನಡದಲ್ಲಿಯೂ ಅನೇಕ ಗ್ರಂಥಗಳನ್ನು ರಚಿಸಿರುವರು. ಅವುಗಳಲ್ಲಿ **'ಲಕ್ಷ್ಮೀಶೋಭನ'** ವೆಂಬುದು ಬಹು ಪ್ರಭಾವವುಳ್ಳ ಶ್ರೇಯಸ್ಸಾಧಕ ಕಾವ್ಯವಾಗಿದೆ. ಇದು, ಜಗನ್ಮಾತೆಯಾದ ಶ್ರೀಮನ್ಮಹಾಲಕ್ಷ್ಮೀದೇವಿಯ ಅಗಮ್ಯಮಹಿಮೆಗಳನ್ನು ನಿರೂಪಿಸುವ ಸುಂದರಕಾವ್ಯ. ಶ್ರೀಲಕ್ಷ್ಮೀದೇವಿಗಿಂತ ಅನಂತಗುಣಗಳಿಂದ ಶ್ರೇಷ್ಠನಾದ ಜಗಜ್ಜನಕನಾದ ಶ್ರೀಮನ್ನಾರಾಯಣನ ಮಹಿಮೆಯೂ ಇದರಲ್ಲಿ ಅನುಸ್ಯೂತವಾಗಿ ಸೇರಿಕೊಂಡಿದೆ. ಉಭಯರೂ ನಿತ್ಯ ಅವಿಯೋಗಿಗಳಲ್ಲವೇ !

ಅದ್ಯಾಪಿ, ಸಂಪ್ರದಾಯಸ್ಥರ ಕುಟುಂಬಗಳಲ್ಲಿ, ವಿಶೇಷವಾಗಿ ಸ್ತ್ರೀಯರು, 'ಲಕ್ಷ್ಮೀಶೋಭನ' ಹಾಡನ್ನು ಹೇಳಿಕೊಂಡು ಆನಂದಿಸುತ್ತ, ಸುಖಸೌಭಾಗ್ಯಗಳನ್ನು ಹೊಂದುತ್ತಲಿರುವರು. ಶ್ರುತಿಸಿದ್ಧ ರಮಾನಾರಾಯಣರ ಮಹಿಮೆಗಳನ್ನು ಸುಲಭವಾಗಿ ಗ್ರಹಿಸಲು, ಅನುಕೂಲವಾದ ಮನೆಮಾತಿನ ಕನ್ನಡ ಶಬ್ದಗಳಿಂದ ರಚಿತವಾಗಿರುವ ಈ ಚಿಕ್ಕಕಾವ್ಯ ಬಾಯಿಪಾಠಮಾಡಿ ಹತ್ತು ನಿಮಿಷಗಳಲ್ಲಿ ಹೇಳಿಕೊಂಡು, ಸ್ತ್ರೀಪುರುಷರೆಲ್ಲರೂ, ಮೋಕ್ಷಸಾಧನ, ಜ್ಞಾನಭಕ್ತಿಗಳನ್ನು ವೃದ್ಧಿಗೊಳಿಸಿಕೊಳ್ಳಲು, ಬಹು ಉಪಯುಕ್ತವಾದ ಗ್ರಂಥವಾಗಿದೆ.

ಈ ಕಾವ್ಯದ ಕಥಾವಿಷಯವು ಶ್ರೀಮಹಾಲಕ್ಷ್ಮೀಸ್ವಯಂವರ, ದೇವದೈತ್ಯರು ಸೇರಿ ಅಮೃತಕ್ಕಾಗಿ ಕ್ಷೀರಸಮುದ್ರವನ್ನು ಮಥನಮಾಡಿದಾಗ, ಶ್ರೀಲಕ್ಷ್ಮೀದೇವಿಯೂ ಸಮುದ್ರದಿಂದ ಉದ್ಭವಿಸಿದಳು. ಅತ ಏವ, ಸಮುದ್ರಾಧಿಪತಿಯಾದ ವರುಣದೇವನ ಪುತ್ರಿಯೆಂದೂ ಪ್ರಸಿದ್ಧಳಾದಳು. ತನ್ನ ಪತಿಯು **ಅಜಿತ ನಾಮಕನಾಗಿ** ದೇವತೆಗಳ ಮಧ್ಯದಲ್ಲಿದ್ದವನನ್ನು ಗುರ್ತಿಸಿ, ಆತನ ಕೊರಳಲ್ಲಿ ಪುಷ್ಪಮಾಲೆಯನ್ನರ್ಪಿಸಿ ವರಿಸಿದಳು ; ನಂತರ ವರುಣದೇವನು ಮಹಾವೈಭವದಿಂದ ವಿವಾಹಮಹೋತ್ಸವವನ್ನೂ ನೆರವೇರಿಸಿದನು. ಬ್ರಹ್ಮಾದಿ ದೇವತೆಗಳೂ ಉತ್ಸವಗಳಲ್ಲಿ ಭಾಗವಹಿಸಿ ಆನಂದಿಸಿದರು.

ನಿತ್ಯದಂಪತಿಗಳಾದ ರಮಾನಾರಾಯಣರು, ತಮ್ಮ ನಾನಾ ಅವತಾರಗಳಲ್ಲಿ, ತಮ್ಮ ಅವತಾರರೂಪಗಳೊಂದಿಗೆ ಪರಸ್ಪರ ವಿವಾಹಮಹೋತ್ಸವಗಳನ್ನು ಏರ್ಪಡಿಸಿಕೊಂಡು ತಮ್ಮ ಭಕ್ತರಿಗೆ ಆನಂದವನ್ನಿತ್ತು, ತಮ್ಮ ಗುಣಪೂರ್ಣತ್ವಾದಿ ಮಹಾಮಹಿಮೆಗಳ ಜ್ಞಾನದಾರ್ಢ್ಯವನ್ನು ಉಂಟುಮಾಡುತ್ತಾರೆ. ಶ್ರೀಮಹಾಲಕ್ಷ್ಮೀದೇವಿಯು, ವಿಶ್ವದ ಸೃಷ್ಟಿ ಸ್ಥಿತಿ, ಲಯಾದಿಗಳನ್ನು ಲೀಲೆಯಿಂದ ನಿರ್ವಹಿಸುವ ಅಚಿಂತ್ಯಸಾಮರ್ಥ್ಯವುಳ್ಳವಳು. ಈ ಸಾಮರ್ಥ್ಯವು ತನ್ನ ರಮಣನಾದ ನಾರಾಯಣನ ಕೃಪಾಕಟಾಕ್ಷಲೇಶಮಾತ್ರದಿಂದೆಂದು ಸ್ಪಷ್ಟಗೊಳಿಸಿ, ಬ್ರಹ್ಮಾದಿ ಇತರರೆಲ್ಲರೂ ಅಪೂರ್ಣರೂ, ದೋಷಿಗಳು ಎಂದು ನಿಶ್ಚಯಿಸಿ, **'ಅಜಿತ'** ನನ್ನು ವರಿಸಿದ್ದರಿಂದ, ಮಹಾಪ್ರಧಾನಪ್ರಮೇಯವಾದ ಶ್ರೀವಿಷ್ಣುಸರ್ವೋ-

ತ್ತಮತ್ವವು ಸಿದ್ಧವಾಗುವುದಷ್ಟೆ ಈ ಜ್ಞಾನನಿಶ್ಚಯರೂಪದ ಪರಮಲಾಭವನ್ನು ಭಕ್ತರಿಗೆ ದೊರಕಿಸುವುದೇ, ನಿತ್ಯದಂಪತಿಗಳಾದ ರಮಾನಾರಾಯಣರು ಅವತಾರರೂಪಗಳಲ್ಲಿ ತಮ್ಮ ವಿವಾಹವನ್ನೇರ್ಪಡಿಸಿಕೊಳ್ಳುವ ಮುಖ್ಯ ಉದ್ದೇಶವಾಗಿದೆ. **'ಸೀತಾ ಕಲ್ಯಾಣ' 'ರುಕ್ಮಿಣೀ ಕಲ್ಯಾಣ'** ಮೊದಲಾದ ಕಲ್ಯಾಣಕಥೆ ಕೇಳುವುದು, ಕಲ್ಯಾಣಮಹೋತ್ಸವಗಳನ್ನು ನೆರವೇರಿಸುವುದೂ ಮಹಾಫಲಕ್ಕಾಗಿಯೇ.

ವಿವಾಹಮಹೋತ್ಸವದ ವರ್ಣನೆಯು ಮನೋರಂಜಕವಾಗಿದೆ - ಲೋಕ ಶಿಕ್ಷಾರೂಪವೂ ಆಗಿದೆ. ಹಸೆಗೆ ಕರೆಯುವುದು, ದಂಪತಿಗಳಿಗೆ ಆರತಿ ಬೆಳಗುವುದು, ಆಶೀರ್ವದಿಸುವುದು, ಉಡುಗೊರೆಗಳ ವಿತರಣೆ, ಬಂಧುಜನರ ಆದರಣೆ, ಭೋಜನ ವ್ಯವಸ್ಥೆ ಮೊದಲಾದ ಸಂಭ್ರಮಗಳ ವರ್ಣನೆಗಳು, ಲೌಕಿಕವಧೂವರರಲ್ಲಿ ಲಕ್ಷ್ಮೀಸನ್ನಿಧಾನವನ್ನೇ ಚಿಂತಿಸಿ, ಆಚರಿಸಬೇಕಾದ ವಿವಾಹಕಾರ್ಯಕ್ರಮಗಳಲ್ಲಿ ಮಾರ್ಗದರ್ಶಕವಾಗಿದ್ದು, ಹರ್ಷೋತ್ಸಾಹಜನಕವಾಗಿವೆ.

ಪೂಜ್ಯ ಹರಿದಾಸರತ್ನಂ ಗೋಪಾಲದಾಸರು, ಈ **'ಲಕ್ಷ್ಮೀಶೋಭನಹಾಡು'** ಗ್ರಂಥದ ಅರ್ಥವಿವರಣೆರೂಪದ ವ್ಯಾಖ್ಯಾನವನ್ನು ರಚಿಸಲು ನನ್ನನ್ನು ಆಜ್ಞಾಪಿಸಿ, ತಮಗೆ ನನ್ನಲ್ಲಿರುವ ವಿಶೇಷ ಅಭಿಮಾನವನ್ನು ವ್ಯಕ್ತಗೊಳಿಸಿದ್ದಾರೆ. ನನ್ನ ಅಲ್ಪಮತಿಗೆ ಗೋಚರಿಸಿದಷ್ಟು ಗ್ರಂಥಾಂತರಂಗವನ್ನು ಹೊರಗೆಡಹಲು ಯತ್ನಿಸಿದ್ದೇನೆ. ಬರೆಯುವಾಗಲೆಲ್ಲ ಶ್ರೀಹರಿವಾಯುಗಳ ಹಾಗೂ ಶ್ರೀವಾದಿರಾಜರ ಪಾದಸ್ಮರಣಪೂರ್ವಕ ಲೇಖನಿಯನ್ನು ಎತ್ತಿದ್ದೇನೆ. ನನ್ನ ಬರವಣಿಗೆಯಲ್ಲಿರಬಹುದಾದ ದೋಷಗಳು ನನ್ನ ಅಜ್ಞಾನ ಮೂಲಕವಾದವು. ಸಜ್ಜನರಿಗೆ ಉಪಯುಕ್ತವಾದ ಗುಣಭಾಗವು ಮಹಾತ್ಮರಿಗೆ ಸೇರಿದುದು. ಗುಣಗ್ರಾಹಿಗಳೇ ಆದ ಸಜ್ಜನರು ಈ ನನ್ನ ಸೇವೆಯನ್ನು ಆದರಿಸಿ ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇನೆ. ಶ್ರೀಕೃಷ್ಣನ ಸೇವಾರೂಪದ ಈ ಕೃತಿಯನ್ನು ರಚಿಸಲು ಅವಕಾಶಕೊಟ್ಟು ತಮ್ಮ ಶ್ರೀಹರಿ **ದಾಸಭಾರತೀಗ್ರಂಥರತ್ನಮಾಲೆಯಲ್ಲಿ** ಸ್ಥಾನವಿತ್ತು ಅನುಗ್ರಹಿಸಿದ ಶ್ರೀಗೋಪಾಲದಾಸಾರ್ಯರಿಗೆ ಅನಂತವಂದನೆಗಳನ್ನರ್ಪಿಸಿ ಅವರ ಆಶೀರ್ವಾದವನ್ನು ಯಾಚಿಸುತ್ತೇನೆ.

'ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ'

ಶ್ರೀಕೃಷ್ಣಾರ್ಪಣಮಸ್ತು

ಶ್ರೀಹರಿಭಕ್ತರ ಸೇವಕ
ಬಿ. ಭೀಮರಾವ್
ದಾವಣಗೆರೆ

''ಶ್ರೀಪತಿರ್ಮಾನದೋ ನಃ''

ಪ್ರಥಮಬಾರಿ ಪ್ರಕಟಣೆಯ

ಪ್ರಕಾಶಕರ ನುಡಿ

''ಸಮಸ್ತಸುಜನಾಧಾರಂ ದೋಷದೂರಂ ಗುಣಾಕರಮ್ ।
ಶ್ರೀವೇಂಕಟಾಚಲಾವಾಸಂ ಶ್ರೀನಿವಾಸಂ ಭಜೇಽನಿಶಮ್ ॥''

ವಾಜಿವಕ್ತ್ರಪದದ್ವಂದ್ವಂ ಸದಾ ಸಂಸೇವ್ಯ ರಾಜತೇ ।
ವಾದಿರಾಜೋಡುರಾಜೋ ಮೇ ಭೂಯಾತ್ ಸಂತಾಪಹಾರಕಃ ॥

ಪುರಂದರಗುರೋಃಪೂರ್ಣಕರುಣಾರಸಭಾಜನಮ್ ।
ಶ್ರೀಮದ್ವಿಜಯದಾಸಾರ್ಯೋ ವರ್ತತಾಂ ಮಾನಸೇ ಮಮ ॥

ಮಹಾನುಭಾವಮಧ್ವಾರ್ಯಸದ್ಗ್ರಂಥವರಚಾತುರೀಮ್ ।
ಬೋಧಯಾಮಾಸ ಮೇ ಸಮ್ಯಙ್ನೌಮಿ ಪ್ರೇಕ್ಷಾನಿಧಿಂ ಗುರುಮ್ ॥

''ಮಾಧ್ವಸಮಾಜಭೂಷಣ'' **ಶ್ರೀ ಬಿ. ಭೀಮರಾಯರವರು** ಸದ್ಗುರುಗಳಲ್ಲಿ ಸಚ್ಛಾಸ್ತ್ರ ವ್ಯಾಸಂಗಮಾಡಿದ ಸರಿಯಾದ ಜ್ಞಾನವಂತರೆಂದು ಸದ್ವೈಷ್ಣವರೆಲ್ಲ ಬಲ್ಲರು.

ತುಂಬಕಾಲದಿಂದ ಪರಸ್ಪರ ಪ್ರೇಮಿಗಳು ನಾವು. ಚೆನ್ನಾದ ತಿಳಿವಿಲ್ಲದ ಜನ, ಅಪರೋಕ್ಷಜ್ಞಾನಿಗಳ ಗ್ರಂಥಗಳ ವ್ಯಾಖ್ಯಾನಮಾಡಲಾರರೆಂಬುದನ್ನು ಬಲ್ಲ ನಾನು ಶ್ರೀಹರಿದಾಸರ ಮಾತುಗಳನ್ನು ಸಾಮಾನ್ಯರಿಗೂ ಅರ್ಥಮಾಡಿಕೊಡಲು ಇವರನ್ನು ಕೇಳುವುದು ಪದ್ಧತಿ. ದೊಡ್ಡವರ ಗ್ರಂಥ ಕನ್ನಡದ್ದಾದರೇನು ? **''ಮುನಿಮಧ್ವ ಹೃದಯವೇ ಪ್ರಾಕೃತಗ್ರಂಥ- ವಿದು''** ಎಂದಿದ್ದಾರೆ ಶ್ರೀವಿಜಯದಾಸಾರ್ಯರು. ಅಂದಮೇಲೆ ಶ್ರೀಶ್ರೀಮತ್ಪೂರ್ಣಪ್ರಮತಿಗಳ ಪೂರ್ಣಪ್ರೇಮಪಾತ್ರರಾದ **ಶ್ರೀಮದ್ವಾದಿರಾಜಯತೀಂದ್ರ** ಜ್ಞಾನಿವರರ ಗ್ರಂಥಕ್ಕೆ ವ್ಯಾಖ್ಯಾನ ಮಾಡುವುದು ಸಾಮಾನ್ಯರಿಗೆ ನಿಲುಕದ್ದು. ಅದಕ್ಕಾಗಿ, ಅರ್ಹರನ್ನೇ ಆರಿಸು- ವುದು ಸರಿಯಷ್ಟೆ ಅದೇ ಕಾರಣ ಶ್ರೀಭೀಮರಾಯರನ್ನು ಕೇಳಲು, ನಮ್ಮ **ಶ್ರೀಹರಿದಾಸ ಭಾರತೀಗ್ರಂಥರತ್ನಮಾಲೆಗೆ** ಶ್ರೀರಾಯರು ಬರೆದುಕೊಟ್ಟು ಸಹಕರಿಸಿ – ಉಪಕರಿಸಿದ್ದು ಇದು ಮೂರನೆಯ ರತ್ನ. ಅಲ್ಲದೆ ಈಗ ಮುದ್ರಣಕ್ಕೆ ಸಿದ್ಧಮಾಡಿಕೊಟ್ಟಿರುವ ಶ್ರೀಶ್ರೀಮದ್ವಾದಿರಾಜತೀರ್ಥಶ್ರೀಪಾದಂಗಳವರ **''ವೈಕುಂಠವರ್ಣನೆ (ತತ್ವಸಾರ)''** ಗ್ರಂಥದ ವ್ಯಾಖ್ಯಾನ ನಾಲ್ಕನೆಯದಾದ **ಮಹಾರತ್ನ,** ನಮ್ಮ ಮಿತ್ರರಾದ ಶ್ರೀಭೀಮರಾಯರ ಬರವಣಿಗೆ ಒಮ್ಮೆ ಓದಿದವರು, ಮುಂದಿನ ಬರಹದ ಓದುವಿಕೆಗೆ ಕಾದಿರುತ್ತಾರೆ ; ಅದಕ್ಕೆ ನಾನೇ ಸಾಕ್ಷಿ. ಅಷ್ಟುಚಂದ ಅವರ ವಾಕ್ಯವೃಂದ. ಶ್ರೀಮದ್ವಾದಿರಾಜಮುನಿಮನಮಂದಿರ- ನಾದ **'ಸುಂದರೀಮಂದಿರ**

ಗೋವಿಂದ್ ಇವರಿಗೆ ದೀರ್ಘಾಯುರಾರೋಗ್ಯಾದಿಭಾಗ್ಯ- ಗಳನ್ನು ಕೊಟ್ಟು ಚಿರಕಾಲ ಸಜ್ಜನರಿಗೆ ನೆಮ್ಮದಿ ನೀಡಲೆಂದು ಶ್ರೀಶ್ರೀವಿಜಯವರದನಲ್ಲಿ ಬೇಡುತ್ತೇನೆ.

ಈ ಲಕ್ಷ್ಮೀಶೋಭನಹಾಡಿನ ಮಹಿಮೆ ಹೀಗಿದೆ

ಶ್ರೀತ್ರಿವಿಕ್ರಮದೇವನು ಒಮ್ಮೆ ಶ್ರೀವಾದಿರಾಜರಿಗೆ "**ನನ್ನ ಕಲ್ಯಾಣ**" (ಮದುವೆ) ಮಾಡಿಸಬಾರದೆ?" ಎಂದ. ಶ್ರೀಗಳವರು ನಕ್ಕು, ಪ್ರಾರಂಭಿಸಿದರು "ಶೋಭನವೆನ್ನಿರೆ ಸುರರೊಳು ಸುಭಗನಿಗೆ !" ಮುಗಿಸಿದರು ತಮ್ಮ "**ಹಯವದನ್**" ಅಂಕಿತದೊಡನೆ ೧೧೨ ನುಡಿಗಳನ್ನು; ಶ್ರೀಸ್ವಾಮಿಗೆ ಉತ್ಸವ ಮಾಡಿಸಿದರು ; ಸ್ವಾಮಿಗೆ ಅರ್ಪಿಸಿದರು. ಆ ವೈಭವ ನೋಡಿದವರು ಧನ್ಯರು.

ಇಂದೂ ಉತ್ತಮ ವರಗಳನ್ನು ಪಡೆಯಲು ಮತ್ತು ಸೌಮಾಂಗಲ್ಯ ಚಿರಸ್ಥಾಯಿ-ಯಾಗಲು ಈ ಪದ ವರಪ್ರದ. ಅರಸಪ್ಪನಾಯಕನೆಂಬ ದೊಡ್ಡ ಶ್ರೀಮಂತನು ಕಲ್ಯಾಣಮಂಟಪದಲ್ಲೇ ಸತ್ತುಬಿದ್ದ ತನ್ನ ಅಳಿಯನನ್ನು ಶ್ರೀಗುರುರಾಜರ ಅಪ್ಪಣೆಯಂತೆ ಉತ್ತಮ ಮುತ್ತೈದೆಯರಿಂದ ಇದನ್ನು ಹಾಡಿಸಿ ಬದುಕಿಸಿಕೊಂಡ. ಹೆಚ್ಚೇನು ! ತಮ್ಮ ಪೂರ್ವಾಶ್ರಮದ ತಂಗಿಯ ಗಂಡನನ್ನೇ ಬದುಕಿಸಿಕೊಟ್ಟರು ಈ ಪದದ (ಹಾಡಿನ) ಪಾಠನದಿಂದ ! ಅದೆಷ್ಟುಮಂದಿ ಹೆಚ್ಚು ಆಯುಸ್ಸು ಪಡೆದರೋ ಅವರ ಅನುಗ್ರಹದಿಂದ ಬಂದ ಈ ಪದಪಠನೆಯಿಂದ.

ಇದು ನಾ ಕಂಡದ್ದು :— ಹಿರಿಯರಿಂದ ಒಮ್ಮೆ ಉಪದೇಶ ಪಡೆದು ಭಕ್ತಿಯಿಂದ ಪಠಿಸಿದರೆ ಇಂದಿಗೂ ತಕ್ಕ ವರ ಸಿಕ್ಕನೆನ್ನಿ ! ಇಷ್ಟಕ್ಕೆ ಮಾತ್ರವಲ್ಲ ಈ ದೊಡ್ಡವರ ಗ್ರಂಥ, ಭಕ್ತಿಯಿಂದ ಪಠಿಸಿದವರಿಗೆ ಕರವಶ ಶ್ರೀನಂದನಕಂದನೆಂದು ನಿತ್ಯಪಠನೆಗೆ ಇಟ್ಟು ಕೊಂಡಿರುವವರುಂಟು ಇಂದಿಗೂ ಕೆಲ ಹಿರಿಯರು.

ಅಷ್ಟಮಸ್ಕಂಧಭಾಗವತದಲ್ಲಿ ವರ್ಣಿತಳಾದ ಭಾಗ್ಯದೇವತೆ **ಶ್ರೀವರಮಹಾಲಕ್ಷ್ಮಿಯ** ಅನುಗ್ರಹದ ಸೌಭಾಗ್ಯವುಂಟು ಈ ಪದ್ಯಗಳ ಪಠನಪಾಠದಿಂದ.

"ನಿನ್ನೊಳಿಶನಾದ **ಜಗನ್ನಾಥವಿಠಲನ**
ಉನ್ನಾಹದಿ ತೋರೆನ್ನ ಮನದಲಿ ॥ ವಾದಿರಾಜ !" –(ಶ್ರೀಜಗನ್ನಾಥದಾಸರು)

–ಹರಿದಾಸರತ್ನಂ ಗೋಪಾಲದಾಸರು

ಶ್ರೀಮದ್ವಾದಿರಾಜತೀರ್ಥಪೂಜ್ಯಚರಣ ವಿರಚಿತ

ಲಕ್ಷ್ಮೀಶೋಭನಹಾಡು

(ವ್ಯಾಖ್ಯಾನದೊಡನೆ)

ಹರಿಸ್ಮರಣೆಯ ವಿಶೇಷಾರ್ಥ

ಹರಿಸ್ಮರಣೆ ಮಾಡುವರು ನರರಲ್ಲವೋ ಶ- ।
ರೀರವದು ಎಲ್ಲರಂತಲ್ಲವರದು ॥ ॥ ಪ ॥

ಮುರಹರನಿಗೆರಗುವ ಶಿರ ದ್ವಾರಕಾಪುರವು ।
ಚರಿತೆ ಕೇಳುವ ಕರ್ಣ ಗೋಕರ್ಣವೂ ॥
ಬಿರುದು ಹೊಗಳುವ ಜಿಹ್ವೆ ನಿಜಕ್ಷೀರಸಾಗರವು ।
ಚರಣಗಳ ಪೂಜಿಸುವ ಕರವೆ ರಾಮೇಶ್ವರವು ॥ ೧ ॥

ವಿಷ್ಣು ನಿರ್ಮಾಲ್ಯವಾಘ್ರಾಣಿಪ ನಾಸವು ಕಾಂಚಿ ।
ಕೃಷ್ಣನ್ನ ನೋಡುವ ದೃಷ್ಟಿ ಶ್ರೀಮುಷ್ಣ ॥
ವಿಟ್ಠಲರ್ಪಿತವನುಂಬುವ ಉದರವೇ ಬದರಿ ।
ಘಟ್ಯಾಗಿ ಹರಿಇಪ್ಪ ಹೃದಯವೇ ವೈಕುಂಠ ॥ ೨ ॥

ವರಜಂಘೆ ಪದ ಗಂಗೆ ತುಂಗೆ ಎಂದೆನಿಸುವುದು ।
ಸರುವಾಂಗನಂತಾ – ಸನ ಸಿತದ್ವೀಪ ॥
ಬರಿಯ ಮಾತಲ್ಲವಿದು ಶ್ರುತಿಪುರಾಣಗಳುಕ್ತಿ
ಪುರಂದರವಿಟ್ಠಲ ಅವರೊಶದೊಳಿಹನು ॥ ೩ ॥

॥ ಶ್ರೀಃ ॥

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತಶ್ರೀರಾಮಕೃಷ್ಣ-
ವೇದವ್ಯಾಸಾತ್ಮಕಲಕ್ಷ್ಮೀಹಯಗ್ರೀವಾಯ ನಮಃ ॥

ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥

ಅಭ್ರಮಂ ಭಂಗರಹಿತಮಜಡಂ ವಿಮಲಂ ಸದಾ ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್ ॥

ಕಾಮಧೇನುರ್ಯಥಾ ಪೂರ್ವಂ ಸರ್ವಾಭೀಷ್ಟಫಲಪ್ರದಾ ।
ತಥಾ ಕಲೌ ವಾದಿರಾಜಶ್ರೀಪಾದೋಽಭೀಷ್ಟದಃ ಸತಾಮ್ ॥

ಲಕ್ಷ್ಮೀ ಶೋಭನ ಹಾಡು

ರಾಗ : ಪಂತುವರಾಳಿ ತಾಳ – ಧ್ರುವ

ಶೋಭನವೆನ್ನಿರೆ ಸುರರೊಳು ಸುಭಗನಿಗೆ
ಶೋಭನವೆನ್ನೀ ಸುಗುಣನಿಗೆ ।
ಶೋಭನವೆನ್ನಿರೆ ತ್ರಿವಿಕ್ರಮರಾಯನಿಗೆ
ಶೋಭನವೆನ್ನೀ ಸುರಪ್ರಿಯಗೆ ॥ ಶೋಭಾನೆ ॥ **॥ ಪಲ್ಲವಿ ॥**

ಸರ್ವಮಂಗಳದಾಯಕಳಾದ ಶ್ರೀಮಹಾಲಕ್ಷ್ಮೀದೇವಿಯ ಮತ್ತು ಶ್ರೀನಾರಾಯಣನ ಮಂಗಳಮಹಿಮೆಯನ್ನು ನಿರೂಪಿಸಲು ಪ್ರವೃತ್ತವಾಗುವ ಈ ಮಂಗಳಸ್ವರೂಪದ ಗ್ರಂಥಕ್ಕೆ, ಶಿಷ್ಟಾಚಾರದಂತೆ ಆರಂಭದಲ್ಲಿ **ಶ್ರೀಹರಿಸ್ತುತಿರೂಪದ ಮಂಗಳವನ್ನು ಶ್ರೀಮದ್ವಾದಿರಾಜರು ಹಾಡುತ್ತಾರೆ.**

''ವಿಶ್ವಸ್ಥಿತಿಪ್ರಲಯಸರ್ಗಮಹಾವಿಭೂತಿವೃತ್ತಿಪ್ರಕಾಶನಿಯಮಾವೃತಿಬಂಧಮೋಕ್ಷಾಃ । ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾ ಸಾ ಶ್ರೀರ್ಯತ್ಕಟಾಕ್ಷ ಬಲವತ್ಯ-ಜಿತಂ ನಮಾಮಿ ॥'' (ದ್ವಾದಶಸ್ತೋತ್ರ) ಎಂಬಲ್ಲಿ — ಯಾವಾಕೆಯು ತನ್ನ ಕುಡಿಗಣ್ಣ ನೋಟದಿಂದ ಸಕಲ ಜಗತ್ತಿನ ಸೃಷ್ಟಿ ಸ್ಥಿತಿ, ಲಯಾದಿ ಸರ್ವವನ್ನೂ ನಿರ್ವಹಿಸಲು

ಸಮರ್ಥಳೋ, ಆ ಮಹಾಲಕ್ಷ್ಮಿಯು ಅಜಿತನಾಮಕ ಶ್ರೀಹರಿಯ ಕೃಪಾಕಟಾಕ್ಷಲೇಶದಿಂದ ಈ ವಿಧ ಅಚಿಂತ್ಯಶಕ್ತಿಯುಳ್ಳವಳಾಗಿರುವಳೆಂದು ಹೇಳಲಾಗಿದೆ. ಈ ''ಅಜಿತ''ನ ಸ್ತೋತ್ರವಲ್ಲದೆ ಬೇರಾವುದು ಮಂಗಳವೆನಿಸೀತು!

''ಗೃಹಲಕ್ಷ್ಮಿ''ಯರೆನಿಸಿರುವ ಸ್ತ್ರೀಯರು, ತಮ್ಮ ಈ ಲಕ್ಷ್ಮೀಶೋಭನಪದವನ್ನು ವಿಶೇಷವಾಗಿ ಹಾಡಿಕೊಂಡು ಶ್ರೀಮಹಾಲಕ್ಷ್ಮೀಸನ್ನಿಧಾನದಿಂದ ಸುಮಂಗಳೆಯರೆನಿಸಿ, ದಂಪತಿಗಳ ಹಾಗೂ ಕುಟುಂಬವರ್ಗದವರ ಸೌಭಾಗ್ಯವನ್ನು ಸಾಧಿಸಲೆಂಬ ಕಾರಣದಿಂದ, ಸ್ತ್ರೀಯರನ್ನು ಸಂಬೋಧಿಸಿ, ಶ್ರೀವಾದಿರಾಜತೀರ್ಥರವರು ಈ ಹಾಡನ್ನು ರಚಿಸಿರುವರು. ಪುರುಷರಿಗೆ ಹೇಳಿದ್ದಲ್ಲವೆಂದು ಮಾತ್ರ ಸರ್ವಥಾ ಭಾವಿಸಲಾಗದು. ಬ್ರಹ್ಮಾದಿ ಸಕಲ ಮುಕ್ತಿಯೋಗ್ಯ ಜೀವರಿಗೂ ಶ್ರೀಮಹಾಲಕ್ಷ್ಮೀದೇವಿಯ ಅನುಗ್ರಹವು ಅತ್ಯವಶ್ಯಕವು. ನಿತ್ಯಾವಿಯೋಗಿನಿಯಾದ ಲಕ್ಷ್ಮೀದೇವಿಯನ್ನು ತೊರೆದು ಭಗವದುಪಾಸನೆಯೆಂಬುದಿಲ್ಲ.

ಅರ್ಥ:— ಸುರರೊಳು = ಬ್ರಹ್ಮಾದಿ ಸಕಲದೇವತೆಗಳಲ್ಲಿ, ಸುಭಗನಿಗೆ = ಐಶ್ವರ್ಯಾದಿ ಗುಣಗಳಿಂದ ಉತ್ಕೃಷ್ಟನಾದ (ಪೂರ್ಣನಾದ), ಅಥವಾ ಸುರರೊಳು = ದೇವತೆಗಳಲ್ಲಿದ್ದು, ಸುಭಗನಿಗೆ = ಮೋಕ್ಷಾದಿ ಸರ್ವಸಂಪತ್ ಪ್ರದನಾದ ಶ್ರೀಹರಿಗೆ, ಶೋಭನವೆನ್ನಿರೆ = ಹೇ ಸ್ತ್ರೀಯರೇ ! (ಕನ್ನಿಕೆಯರೇ ! ಗೃಹಿಣಿಯರೇ ! ಸಕಲರೂ) ಮಂಗಳವನ್ನು ಹಾಡಿರಿ. ಸುಗುಣನಿಗೆ = ಸಮಸ್ತ ಕಲ್ಯಾಣಗುಣಪೂರ್ಣನಿಗೆ (ಆನಂದಾದಿ ಗುಣಸ್ವರೂಪನಿಗೆ) ಶೋಭನವೆನ್ನೀ = ಮಂಗಳವೆನ್ನಿರಿ ; ತ್ರಿವಿಕ್ರಮರಾಯನಿಗೆ = ಅದ್ಭುತ ವಾದ ಮೂರು ಹೆಜ್ಜೆಗಳಿಂದ ಬಲಿಚಕ್ರವರ್ತಿಯ ತ್ರೈಲೋಕ್ಯರಾಜ್ಯವನ್ನೇ ಅಪಹರಿಸಿ ಅನು-ಗ್ರಹಿಸಿದ ವಾಮನಮೂರ್ತಿಗೆ (ಸೌಂದರ್ಯಸಾರನಿಗೆ) ಶೋಭನವೆನ್ನಿರೆ = ಮಂಗಳವೆನ್ನಿ; ಸುರಪ್ರಿಯಗೆ = ದೇವತೆಗಳಿಗೆ ಅತ್ಯಂತಪ್ರಿಯನಾದ (ದೇವತೆಗಳನ್ನು ಅತಿಶಯವಾಗಿ ಪ್ರೀತಿಸುವ) ಶ್ರೀಹರಿಗೆ, ಶೋಭನವೆನ್ನಿ = ಮಂಗಳವೆನ್ನಿ ; ಶೋಭಾನೆ = ಮಂಗಳವು, (ಹೀಗೆ ಮಂಗಳವೆನ್ನುವುದರಿಂದ ನಿಮಗೆ ಮಂಗಳವಾಗುವುದು).

ವಿಶೇಷಾಂಶ:— (೧) ''*ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ । ಜ್ಞಾನವಿಜ್ಞಾನಯೋಶ್ಚೈವ ಷಣ್ಣಾಂ ಭಗ ಇತೀರಣಾ ॥*'' ಎಂದರೆ ಪೂರ್ಣೈಶ್ವರ್ಯ, ವೀರ್ಯ, ಯಶಸ್ಸು, ಕಾಂತಿ, ಜ್ಞಾನ ಮತ್ತು ವಿಜ್ಞಾನಗಳೆಂಬ ಪ್ರಧಾನಗುಣಗಳು 'ಭಗ' ಶಬ್ದದಿಂದ ಹೇಳಲ್ಪಡುತ್ತವೆ. ಇವುಗಳಿಂದ ಸದಾ ಪೂರ್ಣನಾದವನು **'ಸುಭಗನು'.**

(೨) ದೋಷಲೇಶವೂ ಸ್ಪರ್ಶವಿಲ್ಲದ ಪರಮ ಪರಿಶುದ್ಧವಾದ (ಅಪ್ರಾಕೃತ) ಸ್ವರೂಪವುಳ್ಳನಾದ್ದರಿಂದ ಶ್ರೀಹರಿಯು ಮಂಗಳಸ್ವರೂಪನು. ಶ್ರೀಹರಿಗೆ ಮಂಗಳವನ್ನು ಹೇಳುವುದೆಂದರೆ, ಮಂಗಳಸ್ವರೂಪನಾದ ನೀನು ನಿನ್ನ ಭಕ್ತರಿಗೆ ಸದಾ ಮಂಗಳಪ್ರದನಾಗಿ

ವಿರಾಜಿಸುತ್ತಿರು ಎಂಬ ಪ್ರಾರ್ಥನೆಯು. ನಿತ್ಯದಲ್ಲಿ ಬರುವ ದುಃಖಾದಿ ಅಶುಭಗಳನ್ನು ಪರಿಹರಿಸಿ ನಿತ್ಯಮಂಗಳವಾದ ಮೋಕ್ಷವನ್ನು ಕರುಣಿಸು ಎಂದರ್ಥ.

(೩) ''ವಾಮನ'' ಎಂದರೆ ಸಕಲ ಸುಂದರವಸ್ತುಗಳ ಸೌಂದರ್ಯನಿಯಾಮಕನು (ವಾಮ = ಸುಂದರ). ಶ್ರೀಹರಿಯು ಸ್ವಯಂ ಅಖಂಡಸೌಂದರ್ಯಸಾರ ಮೂರ್ತಿ-ಯೆಂದು ಹೇಳಬೇಕಾದ್ದೇನಿದೆ!

ಲಕ್ಷ್ಮೀನಾರಾಯಣರ ಚರಣಕ್ಕೆ ಶರಣೆಂಬೆ।
ಪಕ್ಷಿವಾಹನ್ನಗೆರಗುವೆ। ಪಕ್ಷಿವಾಹನ್ನಗೆರಗುವೆನನುದಿನ
ರಕ್ಷಿಸಲಿ ನಮ್ಮ ವಧೂವರರ॥ ಶೋಭಾನೆ॥ ॥೧॥

ಈ ಮಂಗಳವನ್ನು ಹಾಡಿದರೆ—ಮಂಗಳಪ್ರದನಾಗೆಂಬ ಪ್ರಾರ್ಥನೆಯನ್ನು ಸಲ್ಲಿಸಿ-ದರೆ, ನೂತನ ದಂಪತಿಗಳು ಸುಖಿಗಳಾಗಿ ಬಾಳುವರೆಂಬ ಫಲವನ್ನು ಸೂಚಿಸುತ್ತದೆ.

ಅರ್ಥ:— ಲಕ್ಷ್ಮೀನಾರಾಯಣರ = (ನಿತ್ಯನೂತನದಂಪತಿಗಳಾದ) ಲಕ್ಷ್ಮೀ-ನಾರಾಯಣರ, ಚರಣಕ್ಕೆ = ಪಾದಗಳಿಗೆ, ಶರಣೆಂಬೆ = ನಮಸ್ಕರಿಸುತ್ತೇನೆ. (ಅವರ ಪಾದಗಳೇ ಗತಿಯೆಂದು ನಮಸ್ಕರಿಸಿ ಆಶ್ರಯಿಸುತ್ತೇನೆ.) **ಪಕ್ಷಿವಾಹನ್ನಗೆ** = ಗರುಡನೇ ವಾಹನವಾಗಿ ಉಳ್ಳ ಶ್ರೀಹರಿಗೆ, ಎರಗುವೆ = ನಮಸ್ಕರಿಸುತ್ತೇನೆ. (ದೇಹವನ್ನು ದಿಂಡು-ರುಳಿಸಿ ಬೇಡುತ್ತೇನೆ). **ಪಕ್ಷಿವಾಹನ್ನಗೆ** = ಶ್ರೀಹರಿಗೆ, ಅನುದಿನ = ನಿತ್ಯವೂ, ಎರಗುವೆನು = ಮತ್ತೂ ನಮಸ್ಕರಿಸುವೆನು, ನಮ್ಮ ವಧೂವರರ = ನಮ್ಮ ಈ ನೂತನ ದಂಪತಿಗಳನ್ನು ಅನುದಿನ = ಸರ್ವದಾ, ರಕ್ಷಿಸಲಿ = (ಸರ್ವಪ್ರಕಾರದಿಂದ) ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ.

ವಿಶೇಷಾಂಶ:— ಲಕ್ಷ್ಮೀನಾರಾಯಣರನ್ನು ಸದಾ (ವಿಶೇಷವಾಗಿ ವಿವಾಹಾದಿ ಶುಭಕಾರ್ಯಗಳಲ್ಲಿ) ಸರ್ವರೂ ಶರಣುಹೊಂದಿ ರಕ್ಷಣೆಯನ್ನು ಪ್ರಾರ್ಥಿಸಬೇಕೆಂದು ಸೂಚಿಸುತ್ತಾ, ಪರಮಸಾತ್ವಿಕಶಿರೋಮಣಿಗಳಲ್ಲಿ ಒಬ್ಬರಾದ ಶ್ರೀಸ್ವಾಮಿಗಳವರು ತಾವೂ, ''ಸರ್ವೇ ಜನಾಃ ಸುಖಿನೋ ಭವಂತು'' (ಎಲ್ಲ ಸುಜನರಿಗೂ ಮಂಗಳವಾಗಲಿ) ಎನ್ನುವ ಸಜ್ಜನ ಸ್ವಭಾವವನ್ನು ಅನುಸರಿಸಿ, ಗೃಹಸ್ಥಾಶ್ರಮವನ್ನು ಪ್ರವೇಶಿಸಿ ಆ ಧರ್ಮಪಾಲನೆಯಿಂದ ಬಾಳಲೆಂದು ನೂತನ ದಂಪತಿಗಳ ಕಲ್ಯಾಣವನ್ನು ಶ್ರೀಹರಿಯಲ್ಲಿ ಪ್ರಾರ್ಥಿಸುತ್ತಾರೆ. (ಇದ-ರಿಂದ ಆಯಾ ಆಶ್ರಮದವರು ಅವರವರ ಧರ್ಮಪಾಲಕರಾಗಿರಲೇಬೇಕೆಂಬ ಭಾವವೂ ವ್ಯಕ್ತವೇ.)

ಪಾಲಸಾಗರವನ್ನು ಲೀಲೇಲಿ ಕಡೆಯಲು
ಬಾಲೆ ಮಹಲಕ್ಷುಮಿ ಉದಿಸಿದಳು।

ಬಾಲೆ ಮಹಲಕ್ಷುಮಿ ಉದಿಸಿದಳಾದೇವಿ ।
ಪಾಲಿಸಲಿ ನಮ್ಮ ವಧೂವರರ ॥ ಶೋಭಾನೆ ॥ ॥ ೨ ॥

ಅರ್ಥ:— ಪಾಲಸಾಗರವನ್ನು = ಕ್ಷೀರಸಮುದ್ರವನ್ನು, ಲೀಲೇಲಿ = ಲೀಲೆಯಿಂದ (ಅಮೃತಲಾಭಕ್ಕಾಗಿ ಉತ್ಸಾಹದಿಂದ), ಕಡೆಯಲು = (ದೇವದೈತ್ಯರು ಸೇರಿ) ಕಡೆಯುತ್ತಿರಲು, ಬಾಲೆ ಮಹಲಕ್ಷುಮಿ = ನಿತ್ಯನೂತನಕನ್ನಿಕೆಯಾದ ಮಹಾಲಕ್ಷ್ಮೀದೇವಿಯು, ಉದಿಸಿದಳು = ಅವತರಿಸಿದಳು ; ಬಾಲೆ ಮಹಲಕ್ಷುಮಿ ಉದಿಸಿದಳು = ಹೀಗೆ ಅವತರಿಸಿದ ಆಶ್ಚರ್ಯರೂಪಳಾದ, ಆ ದೇವಿ = (ತನ್ನ ಪತಿಯನ್ನು ಯಾವ ಕಾಲದಲ್ಲೂ ಬಿಡದವಳಾದರೂ, ಅಜಿತನಾಮಕನಾಗಿ ದೇವತೆಗಳೊಂದಿಗೆ ಸಮುದ್ರಮಥನದಲ್ಲಿ ತೊಡಗಿದ್ದ ಶ್ರೀಹರಿಯನ್ನು ವರಿಸಿ ಮಾಲೆಯನ್ನರ್ಪಿಸಿ ಪತಿಯನ್ನಾಗಿ ಮಾಡಿಕೊಂಡ) ಆ ಲಕ್ಷ್ಮೀದೇವಿಯು, ನಮ್ಮ ವಧೂವರರ = ನಮ್ಮ ಈ ದಂಪತಿಗಳನ್ನು, ಪಾಲಿಸಲಿ = ರಕ್ಷಿಸಲಿ.

ಬೊಮ್ಮನ ಪ್ರಳಯದಲಿ ತನ್ನರಸಿಯೊಡಗೂಡಿ
ಸುಮ್ಮಾನದಿಂದ ಮಲಗಿರ್ದ ।
ನಮ್ಮ ನಾರಾಯಣಗು ಈ ರಮ್ಮೆಗಡಿಗಡಿಗು
ಜನ್ಮವೆಂಬುದು ಅವತಾರ ॥ ಶೋಭಾನೆ ॥ ॥ ೩ ॥

ಅರ್ಥ:— ಬೊಮ್ಮನ ಪ್ರಳಯದಲಿ = ಬ್ರಹ್ಮಲಯದಲ್ಲಿ (ಚತುರ್ಮುಖ ಬ್ರಹ್ಮದೇವನ ನೂರು ವರ್ಷಗಳಾದ ನಂತರ ಸಂಭವಿಸುವ ಮಹಾಪ್ರಳಯಕಾಲದಲ್ಲಿ), ತನ್ನರಸಿಯ = ತನ್ನ ಭಾರ್ಯಳಾದ ಲಕ್ಷ್ಮೀದೇವಿಯ, ಒಡಗೂಡಿ = ಒಟ್ಟಿಗೆ (ಜೊತೆಗೆ), ಸುಮ್ಮಾನದಿಂದ = ಗಂಭೀರವಾಗಿ(ಮೌನಮುದ್ರೆಯಿಂದ), ಮಲಗಿರ್ದ = ಮಲಗಿರುವ, ನಮ್ಮ = ನಮ್ಮ (ಸರ್ವರ) ಸ್ವಾಮಿಯಾದ, ನಾರಾಯಣಗು = ಶ್ರೀನಾರಾಯಣನಿಗೂ, ಈ ರಮ್ಮೆಗೂ = ಆತನೊಂದಿಗೆ ಇರುವ ರಮಾದೇವಿಗೆ ಸಹ, ಅಡಿಗಡಿಗು = ಪದೇಪದೇ, ಜನ್ಮವೆಂಬುದು = ಜನ್ಮವೆತ್ತುವರೆಂದು ಹೇಳುವುದು, ಅವತಾರ = (ಇಚ್ಛಾನುಸಾರವಾದ) ಅವತಾರವೇ (ಇತರರಂತೆ ಪ್ರಾಕೃತದೇಹ ಸಂಬಂಧದಿಂದ ಹುಟ್ಟುವುದಲ್ಲ).

ವಿಶೇಷಾಂಶ:— ರಮಾನಾರಾಯಣರಿಬ್ಬರೂ ಸದಾ ಸಚ್ಚಿದಾನಂದಾತ್ಮಕದೇಹವುಳ್ಳವರು. ಅವರು ತಮ್ಮ ದೇಹದಿಂದ ಅತ್ಯಂತ ಅಭಿನ್ನರು. ದೇಹ ಬೇರೆ ಅವರು ಬೇರೆಯಲ್ಲ. ಅವರು ಅನಂತರೂಪಗಳುಳ್ಳವರು — ಆ ರೂಪಗಳನ್ನೇ ಅವರು ದೇಹವೆಂದು ಕರೆಯುವುದು. ಸ್ವೇಚ್ಛೆಯಿಂದ ಕಾಲಕಾಲಕ್ಕೆ ತಮ್ಮ ರೂಪವನ್ನು ಪ್ರಕಟಮಾಡುವುದೇ ಅವರ ಜನ್ಮವೆಂದು ಕರೆಯಲಾಗುತ್ತದೆ. ಅವರ ಅನುಗ್ರಹವಿಲ್ಲದೆ ಅವರ ರೂಪವು ಅನ್ಯರಿಗೆ ಗೋಚರವಾಗುವುದಿಲ್ಲ ! ಅತ ಏವ ಅವರು 'ಅವ್ಯಕ್ತ' ರೆಂದೇ ಹೇಳಲ್ಪಡುತ್ತಾರೆ.

'ಪ್ರತ್ಯಕ್ಷತ್ವಂ ಹರೇರ್ಜನ್ಮ ನ ವಿಕಾರಿ ಕಥಂಚನ' – 'ಶ್ರೀಹರಿಯು ಸ್ವೇಚ್ಛೆಯಿಂದ ಲೋಕ-ದೃಷ್ಟಿಗೆ ಗೋಚರನಾಗುವುದೇ ಅವನ ಜನ್ಮವು — ಯಾವ ರೀತಿಯಿಂದಲೂ, ವಿಕಾರ-ಹೊಂದುವ ದೇಹವನ್ನು ಪಡೆಯುವುದಲ್ಲವೇ ಅಲ್ಲ' ಇತ್ಯಾದಿ ಪ್ರಮಾಣವಾಕ್ಯಗಳಿಂದ ಹೀಗೆಂಬುದು ಸಿದ್ಧವಾಗುತ್ತದೆ. 'ಅನಂತಾನಂತರೂಪಾ ಚ ಜ್ಞಾನಾನಂದಾದಿರೂಪಿಣೀ' (ಸ.ರ.ಮಾ.) — ಜ್ಞಾನಾನಂದಾದಿ ರೂಪಗಳೇ ಆದ ಅನಂತಾನಂತರೂಪಗಳುಳ್ಳವಳು' ಇತ್ಯಾದಿ ರಮಾದೇವಿಯ ಮಹಿಮೆಗಳು ಉಕ್ತವಾಗಿವೆ. ಪ್ರಳಯಕಾಲದಲ್ಲಿ ಪ್ರಳಯೋದಕ, ವಟಪತ್ರ, ವಾಯು ಇತ್ಯಾದಿ ರೂಪಗಳಿಂದ ಸಹ ತಾನೇ ಇದ್ದರೂ, 'ಲಕ್ಷ್ಮೀಭುಜಾಂತರ-ಗತಃ ಸ್ವರತೋऽಪಿ ಚಾಗ್ರೇ' (ಭಾರ.ತಾ.ನಿ.) ಎಂಬಲ್ಲಿ, ಲಕ್ಷ್ಮೀಯಿಂದ ಆಲಿಂಗಿತನಾಗಿ ಪ್ರಳಯಕಾಲದಲ್ಲಿ ಮಲಗಿರುವನೆಂದು ಹೇಳಿದಂತೆ ತನ್ನ ಇನ್ನೊಂದು ರೂಪದಿಂದ ಪತಿಯೊಂದಿಗೆ ಶಯನ ಮಾಡಿರುವಳು. ಶ್ರೀದೇವಿಗಿಂತ ಅನಂತಾನಂತ ಗುಣಗಳಿಂದ ಅಧಿಕನಾದ ನಾರಾಯಣನು, '*ನಿರ್ದೋಷಪೂರ್ಣಗುಣವಿಗ್ರಹ ಆತ್ಮತಂತ್ರೋ ನಿಶ್ಚೇತನಾತ್ಮಕ-ಶರೀರಗುಣೈಶ್ಚ ಹೀನಃ । ಆನಂದಮಾತ್ರಕರಪಾದಮುಖೋದರಾದಿಃ ಸರ್ವತ್ರ ಚ ಸ್ವಗತ-ಭೇದವಿವರ್ಜಿತಾತ್ಮಾ ॥*' (ಭಾ.ತಾ.ನಿ.) ಎಂದರೆ, ದೋಷಲೇಶವಿಲ್ಲದ ಪೂರ್ಣಗುಣಗಳೇ ದೇಹವಾಗಿ ಉಳ್ಳ ಸ್ವತಂತ್ರನಾದ ಶ್ರೀನಾರಾಯಣನು, ಜಡದೇಹಗುಣಗಳಿಲ್ಲದ, ಕೇವಲ ಆನಂದಸ್ವರೂಪದ, ಕರ ಚರಣ ಮುಖ ಉದರಾದಿ ಅವಯವಗಳುಳ್ಳವನಾಗಿರುವನು ; ಅನಂತರೂಪಗಳುಳ್ಳ ಆತನ ಒಂದೊಂದು ರೂಪವೂ ಪರಸ್ಪರ ಯಾವ ಭೇದವೂ ಇಲ್ಲದವುಗಳು — ಪ್ರತಿಯೊಂದು ರೂಪದಲ್ಲಿರುವ ಕರಚರಣಾದಿ ಅವಯವಗಳೂ ಪರಸ್ಪರ ಮತ್ತು ಆ ರೂಪದಿಂದ ಸಹ ಅಭಿನ್ನಗಳೇ ಆಗಿವೆ ; ಈ ಪ್ರಕಾರದ ಅದ್ಭುತ ಮಹಿಮೆಯುಳ್ಳವನೆಂದೂ ಹೇಳಲಾಗಿದೆ.

ಕಂಬುಕಂಠದ ಸುತ್ತ ಕಟ್ಟಿದ ಮಂಗಳಸೂತ್ರ ।
ಅಂಬುಜವೆರಡು ಕರಯುಗದಿ ॥
ಅಂಬುಜವೆರಡು ಕರಯುಗದಿ ಧರಿಸಿ ಪೀ-
ತಾಂಬರವನುಟ್ಟು ಮೆರೆದಳು ॥ ಶೋಭಾನೆ ॥ ॥ ೪ ॥

ಅರ್ಥ:— ಕಂಬುಕಂಠದ ಸುತ್ತ = ಶಂಖರೇಖೆಯಂತೆ ದಿವ್ಯರೇಖೆಗಳಿಂದ ಶೋಭಿಸುವ ಕುತ್ತಿಗೆಯ ಸುತ್ತಲೂ, ಕಟ್ಟಿದ = ಕಟ್ಟಿಕೊಂಡಿರುವ, ಮಂಗಳಸೂತ್ರ = ಮಂಗಳಸೂತ್ರವುಳ್ಳವಳಾಗಿ, ಕರಯುಗದಿ = ಎರಡೂ ಕೈಗಳಲ್ಲಿ, ಅಂಬುಜವೆರಡು = ಎರಡು ಕಮಲಪುಷ್ಪಗಳನ್ನು ಧರಿಸಿ = ಹಿಡಿದು, ಪೀತಾಂಬರವನುಟ್ಟು = ಪೀತಾಂಬರವನ್ನುಟ್ಟುಕೊಂಡು, ಮೆರೆದಳು = ಸದಾ ವಿರಾಜಿಸುತ್ತಾಳೆ.

ವಿಶೇಷಾಂಶ:— ಕ್ಷೀರಸಮುದ್ರದಿಂದ ಉದ್ಭವಿಸುವಾಗಲೂ ಮಂಗಳ ಸೂತ್ರವನ್ನು ಧರಿಸಿದ್ದುದು, ಲಕ್ಷ್ಮೀದೇವಿಯು ನಿತ್ಯಸುಮಂಗಳೆಯೆಂಬುದನ್ನೂ ಅವಿವಾಹಿತ ಕನ್ಯೆಯಲ್ಲ = ವೆಂಬುದನ್ನೂ ಸೂಚಿಸುತ್ತದೆ.

ಒಂದು ಕರದಿಂದ ಅಭಯವೀವಳೆ ಮ-
ತ್ತೊಂದು ಕೈಯಿಂದ ವರಗಳ ।
ಕುಂದಿಲ್ಲದಾನಂದಸಂದೋಹ ಉಣಿಸುವ ।
ಇಂದಿರೆ ನಮ್ಮ ಸಲಹಲಿ ॥ ಶೋಭಾನೆ ॥ ॥ ೫ ॥

ಅರ್ಥ:— ಒಂದು ಕರದಿಂದ = ಒಂದು ಕೈಯಿಂದ, ಅಭಯವೀವಳೆ = ಅಭಯವನ್ನು (ಭಕ್ತರಿಗೆ) ಪ್ರದಾನಮಾಡುವ, ಮತ್ತೊಂದು ಕೈಯಿಂದ, ವರಗಳ = ಅಭೀಷ್ಟಗಳನ್ನು, ಕಂದಿಲ್ಲದಾನಂದನಂದೋಹ = ನಿರ್ದುಃಖವಾದ ಪೂರ್ಣಾನಂದವನ್ನು, ಉಣಿಸುವ = ಭೋಗಿಸುವಂತೆ ಮಾಡುವ, ಇಂದಿರೆ = ಲಕ್ಷ್ಮೀದೇವಿಯು, ನಮ್ಮ = ನಮ್ಮನ್ನು (ಭಕ್ತವೃಂದವನ್ನು), ಸಲಹಲಿ = ರಕ್ಷಿಸಲಿ.

ವಿಶೇಷಾಂಶ:— 'ಕೌಶೇಯಪೀತವಸನಾಮರವಿಂದನೇತ್ರಾಂ ಪದ್ಮದ್ವಯಾಭಯ ವರೋದ್ಯತಪದ್ಮಹಸ್ತಾಂ' ಇತ್ಯಾದಿ ಲಕ್ಷ್ಮೀಸ್ತೋತ್ರಗಳಲ್ಲಿ ವರ್ಣಿತವಾಗಿರುವಂತೆ, ಪದ್ಮ-ಗಳನ್ನು ಧರಿಸಿದ ಎರಡು ಹಸ್ತಗಳೂ — ಒಂದು ಅಭಯಹಸ್ತ, ಒಂದು ವರದಹಸ್ತ, ಈ ರೀತಿಯಿರುವ ಚತುರ್ಭುಜಗಳುಳ್ಳ ರೂಪವನ್ನು ಚಿಂತಿಸಬೇಕಷ್ಟೆ. ಅದನ್ನೇ ಇಲ್ಲಿ ವರ್ಣಿಸಿರುವರು.

ಪೊಳೆವ ಕಾಂಚಿಯ ದಾಮ ಉಲಿವ ಕಿಂಕಿಣಿಗಳು ।
ನಲಿವ ಕಾಲಂದುಗೆ ಘಲುಕೆನಲು ।
ನಳನಳಿಸುವ ಮುದ್ದುಮೊಗದ ಚೆಲುವೆ ಲಕ್ಷ್ಮಿ
ಸಲಹಲಿ ನಮ್ಮ ವಧೂವರರ ॥ ಶೋಭಾನೆ ॥ ॥ ೬ ॥

ಅರ್ಥ:— ಪೊಳೆವ = ಹೊಳೆಯುವ, ಕಾಂಚಿಯ ದಾಮ = ಸೊಂಟದ ಪಟ್ಟಿ ಉಲಿವ ಕಿಂಕಿಣಿಗಳು = ಧ್ವನಿಗೈಯುವ ಕಿರುಗೆಜ್ಜೆಗಳು, ನಲಿವ = ಕುಣಿಯುವ (ಓಲ್ಯಾ-ಡುವ), ಕಾಲಂದುಗೆ = ಕಾಲುಬಳೆಗಳು, ಘಲಕೆನಲು = ಘಲ್ ಘಲ್ ಎಂದು ಶಬ್ದ-ಮಾಡುತ್ತಿರಲು, ನಳಿನಳಿಸುವ = ಫಳಫಳ ಹೊಳೆಯುವ, ಮುದ್ದುಮೊಗದ = ಮುದ್ದಾದ ಮುಖವುಳ್ಳ, ಚೆಲುವೆ = (ಸೌಂದರ್ಯವೇ ಮೂರ್ತಿವೆತ್ತಂತಿರುವ) ಸುಂದರಿಯಾದ, ಲಕ್ಷ್ಮಿ = ಲಕ್ಷ್ಮೀದೇವಿಯು, ನಮ್ಮ ವಧೂವರರ = (ಸ್ತೋತ್ರವನ್ನು ಪಠಿಸುವ ಅಥವಾ

ಶ್ರೀವಾದಿರಾಜರ ಅನುಗ್ರಹಕ್ಕೆ ಪಾತ್ರರಾದ) ಈ ನೂತನ ದಂಪತಿಗಳನ್ನು ಸಲಹಲಿ = ರಕ್ಷಿಸಲಿ.

ವಿಶೇಷಾಂಶ:— ಈ ನುಡಿಯಿಂದ ೧೫ನೇ ನುಡಿಯವರೆಗೆ ಕ್ಷೀರಸಮುದ್ರದಿಂದ ಉದಯಿಸಿದ ಶ್ರೀಲಕ್ಷ್ಮೀದೇವಿಯ ದಿವ್ಯರೂಪವನ್ನು ವರ್ಣಿಸುತ್ತಾ, ಆಕೆಯ ರಕ್ಷಣೆಯನ್ನು ಪ್ರಾರ್ಥಿಸುತ್ತಾರೆ.

ರನ್ನದ ಮೊಲೆಗಟ್ಟು ಚಿನ್ನದಾಭರಣಗಳ ।
ಚೆನ್ನೆಮಹಲಕ್ಷುಮಿ ಧರಿಸಿದಳೆ ॥
ಚೆನ್ನೆಮಹಲಕ್ಷುಮಿ ಧರಿಸಿದಳಾದೇವಿ ।
ಮನ್ನೆಯ ವಧೂವರರ ಸಲಹಲಿ ॥ ಶೋಭಾನೆ ॥ ॥ ೭ ॥

ಅರ್ಥ:— ರನ್ನದ ಮೊಲೆಗಟ್ಟು = ಮುತ್ತು ಹೆಣೆದ ಜರತಾರಿಯ ಎದೆಕಟ್ಟನ್ನೂ (ಸ್ತನಭಾಗವನ್ನು ಆಚ್ಛಾದಿಸುವ ವಸ್ತ್ರ), ಚಿನ್ನದಾಭರಣಗಳ = ಸುವರ್ಣದ ಒಡವೆಗಳನ್ನೂ, ಚೆನ್ನೆಮಹಲಕ್ಷುಮಿ = ಸುಂದರಳಾದ ಮಹಾಲಕ್ಷ್ಮೀದೇವಿಯು, ಧರಿಸಿದಳೆ = ಧರಿಸಿರು-ವಳು ; ಆ ದೇವಿ = (ಹೀಗೆ ಅವತರಿಸಿದ) ಲಕ್ಷ್ಮೀದೇವಿಯು, ಮನ್ನೆಯ = ಆದರದಿಂದ ಪರಸ್ಪರ ವರಿಸಲು ತಕ್ಕವರಾದ, ವಧೂವರರ = ಕನ್ಯಾವರರನ್ನು (ದಂಪತಿಗಳನ್ನು), ಸಲಹಲಿ = ರಕ್ಷಿಸಲಿ.

ಕುಂಭಕುಚದ ಮೇಲೆ ಇಂಬಿಟ್ಟ ಹಾರಗಳು ।
ತುಂಬುಗುರುಳ ಮುಖಕಮಲ ।
ತುಂಬುಗುರುಳ ಮುಖಕಮಲದ ಲಕುಮಿ ಜಗ-
ದಂಬೆ ವಧೂವರರ ಸಲಹಲಿ ॥ ಶೋಭಾನೆ ॥ ॥ ೮ ॥

ಅರ್ಥ:— ಕುಂಭಕುಚದ ಮೇಲೆ = ಕಲಶಗಳಂತೆ ತುಂಬಿ ಉನ್ನತಗಳಾದ ಸ್ತನಗಳ ಮೇಲೆ, ಇಂಬಿಟ್ಟ = ಆಶ್ರಯಿಸಿದ, ಹಾರಗಳು = ಹಾರಗಳು ಮತ್ತು ತುಂಬುಗುರುಳ ಮುಖಕಮಲದ = ಗುಂಗುರು ಕೂದಲುಗಳಿಂದ ಶೋಭಿಸುವ ಮುಖಪದ್ಮ, ಇವುಗಳಿಂದ ಭಕ್ತರ ಮನಸ್ಸನ್ನು ಸೆಳೆಯುವ, ಜಗದಂಬೆ = ಜಗನ್ಮಾತೆಯಾದ, ಲಕುಮಿ = ಮಹಾ-ಲಕ್ಷ್ಮಿಯು, ವಧೂವರರ = ದಂಪತಿಗಳನ್ನು , ಸಲಹಲಿ = ಕಾಪಾಡಲಿ.

ಮುತ್ತಿನ ಓಲೆಯನಿಟ್ಟಳೆ ಮಹಲಕುಮಿ ।
ಕಸ್ತೂರಿತಿಲಕ ಧರಿಸಿದಳೆ ।

ಕಸ್ತೂರಿತಿಲಕ ಧರಿಸಿದಳಾದೇವಿ ಸ-
ರ್ವತ್ರ ವಧೂವರರ ಸಲಹಲಿ ॥ ಶೋಭಾನೆ ॥ ॥ ೯ ॥

ಅರ್ಥ:— ಮಹಲಕುಮಿ = ಮಹಾಲಕ್ಷ್ಮೀದೇವಿಯು, ಮುತ್ತಿನ ಓಲೆಯ-ನಿಟ್ಟಳೆ = ಮುತ್ತಿನ ಓಲೆಗಳನ್ನು (ಕರ್ಣಗಳಲ್ಲಿ) ಧರಿಸಿದ್ದಾಳೆ ; ಕಸ್ತೂರಿತಿಲಕ = ಪರಿಮಳಯುಕ್ತ ಕಸ್ತೂರಿಯಿಂದ ರಚಿತವಾದ ತಿಲಕವನ್ನು (ಹಣೆಯಲ್ಲಿ), ಧರಿಸಿದಳೆ = ಧರಿಸಿರುವಳು, ಆ ದೇವಿ = ಹೀಗೆ ಶೋಭಿಸುವ ಆ ಮಹಾಲಕ್ಷ್ಮಿಯು, ಸರ್ವತ್ರ = ಎಲ್ಲೆಲ್ಲಿಯೂ, ವಧೂ- ವರರ = ದಂಪತಿಗಳನ್ನು (ತನ್ನ ಭಕ್ತರಾದ ಎಲ್ಲ ನೂತನ ದಂಪತಿಗಳನ್ನು), ಸಲಹಲಿ = ರಕ್ಷಿಸಲಿ (ಸದಾ ಸುಖದಿಂದಿಡಲಿ).

ಅಂಬುಜನಯನಗಳ ಬಿಂಬಾಧರದ ಶಶಿ-
ಬಿಂಬದಂತೆಸೆವ ಮೂಗುತಿಯ
ಬಿಂಬದಂತೆಸೆವ ಮೂಗುತಿಯ ಮಹಲಕುಮಿ
ಉಂಬುದಕೀಯಲಿ ವಧೂವರಗೆ ॥ ಶೋಭಾನೆ ॥ ॥ ೧೦ ॥

ಅರ್ಥ:— ಅಂಬುಜನಯನಗಳ = ಕಮಲದಂತೆ ವಿಕಸಿತವಾದ ಕಣ್ಣುಗಳುಳ್ಳ, ಬಿಂಬಾಧರದ = ಬಿಂಬಫಲದಂತೆ (ತೊಂಡೆಹಣ್ಣಿನಂತೆ) ಕೆಂಪಾದ ತುಟಿಗಳುಳ್ಳ, ಶಶಿ-ಬಿಂಬದಂತೆಸೆವ = ಚಂದ್ರನಂತೆ ಹೊಳೆಯುವ, ಮೂಗುತಿಯ = ಮುಖರವನ್ನು ನಾಸಿಕ-ದಲ್ಲಿ ಧರಿಸಿರುವ, ಮಹಲಕುಮಿ = ಮಹಾಲಕ್ಷ್ಮಿಯು, ವಧೂವರಗೆ = ಈ ವಧುವಿನ ಪತಿಗೆ, ಉಂಬುದಕೆ = ಅಶನಪಾನವಸನಾದಿಗಳನ್ನು (ಕೊರತೆಯಿಲ್ಲದ ಸಂಪತ್ತನ್ನು), ಈಯಲಿ = ಕರುಣಿಸಲಿ.

(ಕುಟುಂಬರಕ್ಷಣೆಯನ್ನು ನಿರ್ವಹಿಸುವವನು ಪತಿಯಷ್ಟೆ ಪತಿಯ ಸಂಪದಾದಿಗಳನ್ನೇ ಪತ್ನಿಯೂ ಭೋಗಿಸುತ್ತಾಳೆ. ಅದಕ್ಕಾಗಿ ಯತ್ನಿಸುವುದು ಪತಿಯ ಹೊಣೆಯೆಂಬುದು ಸೂಚಿತವೆಂದು ತಿಳಿಯಬಹುದಾಗಿದೆ.)

ಮುತ್ತಿನಕ್ಷತೆಯಿಟ್ಟು ನವರತ್ನದ ಮುಕುಟ
ನೆತ್ತಿಯ ಮೇಲೆ ಧರಿಸಿದಳೆ ।
ನೆತ್ತಿಯ ಮೇಲೆ ಧರಿಸಿದ ದೇವಿ ತನ್ನ
ಭಕ್ತಿಯ ಜನರ ಸಲಹಲಿ ॥ ಶೋಭಾನೆ ॥ ॥ ೧೧ ॥

ಅರ್ಥ:— ಮುತ್ತಿನಕ್ಷತೆಯಿಟ್ಟು = (ಹಣೆಯಲ್ಲಿ ತಿಲಕದೊಂದಿಗೆ) ಮುತ್ತಿನಿಂದ ರಚಿಸಿದ ಅಕ್ಷತೆಯನ್ನೂ ಧರಿಸಿ, ನೆತ್ತಿಯ ಮೇಲೆ = ತಲೆಯ ಮೇಲ್ಭಾಗದಲ್ಲಿ, ನವರತ್ನ

ಮುಕುಟ = ನವರತ್ನಖಚಿತವಾದ ಕಿರೀಟವನ್ನು, ಧರಿಸಿದಳೆ = ಧರಿಸಿದವಳಾದ, ದೇವಿ = ಲಕ್ಷ್ಮೀದೇವಿಯು, ತನ್ನ ಭಕ್ತಿಯ ಜನರ = ತನ್ನನ್ನು ಭಕ್ತಿಯಿಂದ ಸೇವಿಸುವ ಜನರನ್ನು ಸಲಹಲಿ = ರಕ್ಷಿಸಲಿ.

ಕುಂದಮಂದಾರಜಾಜಿಕುಸುಮಗಳ ವೃಂದವ
ಚೆಂದದ ತುರುಬಿಲಿ ತುರುಬಿದಳೆ।
ಕುಂದಣವರ್ಣಕೋಮಲೆ ಲಕುಮಿ ಕೃಪೆ-
ಯಿಂದ ವಧೂವರರ ಸಲಹಲಿ॥ ಶೋಭಾನೆ॥ ॥ ೧೨ ॥

ಅರ್ಥ:— ಕುಂದಮಂದಾರಜಾಜಿಕುಸುಮಗಳ = ಮಲ್ಲಿಗೆ, ಮಂದಾರ, ಜಾಜಿ ಮುಂತಾದ ಪುಷ್ಪಗಳ, ವೃಂದವ = ಸಮೂಹವನ್ನು, ಚೆಂದದ = ಅಂದವಾದ, ತುರುಬಿಲಿ = ಮುಡಿಯಲ್ಲಿ, ತುರುಬಿದಳೆ = ಮುಡಿದಿರುವಳು ನೋಡಿದೆಯ ! ಕುಂದಣವರ್ಣ = ಸುವರ್ಣದಂತೆ ಮೈಬಣ್ಣವುಳ್ಳ, ಕೋಮಲೆ = ಸುಕುಮಾರಿಯಾದ, ಲಕುಮಿ = ಮಹಾಲಕ್ಷ್ಮೀಯು, ಕೃಪೆಯಿಂದ = ಕೃಪೆತೋರಿ, ವಧೂವರರ = ನೂತನ ದಂಪತಿಗಳನ್ನು, ಸಲಹಲಿ = ರಕ್ಷಿಸಲಿ.

ಎಂದೆಂದೂ ಬಾಡದ ಅರವಿಂದಮಾಲೆಯ
ಇಂದಿರೆ ಪೊಳೆವ ಕೊರಳಲ್ಲಿ।
ಇಂದಿರೆ ಪೊಳೆವ ಕೊರಳಲ್ಲಿ ಧರಿಸಿದ-
ಳಿಂದು ವಧೂವರರ ಸಲಹಲಿ॥ ಶೋಭಾನೆ॥ ॥ ೧೩ ॥

ಅರ್ಥ:— ಇಂದಿರೆ = ಮಹಾಲಕ್ಷ್ಮೀಯು, ಎಂದೆಂದೂ ಬಾಡದ = ಎಂದಿಗೂ ಬಾಡದ (ಬತ್ತದ), ನಿತ್ಯವಿಕಸಿತವಾದ, ಅರವಿಂದಮಾಲೆಯ = ಕಮಲಪುಷ್ಪಗಳ ಮಾಲೆ-ಯನ್ನು, ಪೊಳೆವ ಕೊರಳಲ್ಲಿ = ಹೊಳೆಯುವ ತನ್ನ ಕಂಠದಲ್ಲಿ, ಧರಿಸಿದಳು = ಹಾಕಿಕೊಂಡಿರುವಳು ; ಪೊಳೆವ = ಹೀಗೆ ಶೋಭಿಸುವ, ಇಂದಿರೆ = ಲಕ್ಷ್ಮೀದೇವಿಯು, ಇಂದು = ಈಗಲೇ (ಅನುಗ್ರಹಿಸಿ), ವಧೂವರರ = ದಂಪತಿಗಳನ್ನು, ಸಲಹಲಿ = ರಕ್ಷಿಸಲಿ.

ದೇವಾಂಗಪಟ್ಟೆಯ ಮೇಲುಹೊದ್ದಿಕೆಯ
ಭಾವೆ ಮಹಲಕುಮಿ ಧರಿಸಿದಳೆ।
ಭಾವೆ ಮಹಲಕುಮಿ ಧರಿಸಿದಳಾದೇವಿ
ಸೇವಕಜನರ ಸಲಹಲಿ॥ ಶೋಭಾನೆ॥ ॥ ೧೪ ॥

ಅರ್ಥ:— ದೇವಾಂಗಪಟ್ಟೆಯ = ದೇವಸ್ತ್ರೀಯರ ದೇಹಕ್ಕೆ ಯೋಗ್ಯವಾದ ಭಾರಿ

ಅಂಚುಳ್ಳ, ಮೇಲುಹೊದ್ದಿಕೆಯ = ಹೊದಿಯುವ ಸೀರೆಯನ್ನು (ಜರತಾರಿ ಪಟ್ಟೆ ಮಡಿಯನ್ನು), ಭಾವೆ = ಭವ್ಯಳಾದ (ಅದ್ಭುತ ಸುಂದರಿಯಾದ) ಅಥವಾ ಭಕ್ತಾನುಗ್ರಹಸೂಚಕ ಮಂದಹಾಸವುಳ್ಳ, ಮಹಲಕುಮಿ = ಮಹಾಲಕ್ಷ್ಮಿಯು, ಧರಿಸಿದಳೆ = ಹೊದ್ದುಕೊಂಡಿರುವಳು ನೋಡು ! ಆ ದೇವಿ = ಹೀಗೆ ಶೋಭಿಸುವ ದೇವಿಯು, ಸೇವಕಜನರ = ತನ್ನನ್ನು ಸೇವಿಸುವ ಭಕ್ತರನ್ನು, ಸಲಹಲಿ = ರಕ್ಷಿಸಲಿ.

ಈ ಲಕ್ಷುಮಿದೇವಿ ಕಾಲುಂಗುರ ಘಲಕೆನಲು
ಲೋಲಾಕ್ಷಿ ಮೆಲ್ಲನೆ ನಡೆತಂದಳು ।
ಸಾಲಾಗಿ ಕುಳ್ಳಿರ್ದ ಸುರರ ಸಭೆಯ ಕಂಡು
ಆಲೋಚಿಸಿದಳು ಮನದಲ್ಲಿ ॥ ಶೋಭಾನೆ ॥ ॥ ೧೫ ॥

ಅರ್ಥ:— ಈ ಲಕ್ಷುಮಿದೇವಿ = (ಹಿಂದಿನ ನುಡಿಗಳಲ್ಲಿ ವರ್ಣಿಸಿದಂತೆ) ಅಲಂಕಾರಭೂಷಿತಳಾದ ಲಕ್ಷ್ಮೀದೇವಿಯು, ತನ್ನ, ಕಾಲುಂಗುರ = ಕಾಲುಬೆರಳಿನ ಉಂಗುರಗಳು (ನೂಪುರಗಳು), ಘಲಕೆನಲು = ಘಲ್ ಘಲ್ ಎಂದು ಶಬ್ದಮಾಡುತ್ತಿರಲು, ಲೋಲಾಕ್ಷಿ = ಚಪಲನೋಟವುಳ್ಳವಳಾಗಿ, ಮೆಲ್ಲನೆ = ಮಂದಗತಿಯಿಂದ, ನಡೆತಂದಳು = ನಡೆದುಬಂದಳು ; ಸಾಲಾಗಿ ಕುಳ್ಳಿರ್ದ = (ಮಥನವನ್ನು ತತ್ಕಾಲದಲ್ಲಿ ನಿಲ್ಲಿಸಿ) ಸಾಲಾಗಿ ಕೂತಿದ್ದ ಸುರರ ಸಭೆಯ ಕಂಡು = ದೇವತೆಗಳ ಗುಂಪನ್ನು ನೋಡಿ, ಮನದಲ್ಲಿ = ತನ್ನ ಮನಸ್ಸಿನಲ್ಲಿ, ಆಲೋಚಿಸಿದಳು = (ತನಗೆ ಯೋಗ್ಯ ವರನಾರೆಂದು) ಯೋಚಿಸಿದಳು.

ವಿಶೇಷಾಂಶ:— (೧) ಮಹಾಲಕ್ಷ್ಮೀದೇವಿಯು, ಕ್ಷೀರಸಮುದ್ರಮಧ್ಯದಿಂದ ಉದಯಿಸಿ ಬಂದ ರೂಪದ ವರ್ಣನೆಯು, ಪತಿವ್ರತೆಯರಿಗೆ ಮಾದರಿಯಾದ ಮಂಗಲಾಭರಣ ವಸ್ತ್ರಾಲಂಕಾರಗಳನ್ನು ಸೂಚಿಸುತ್ತದೆ. ಓಲೆ-ಮೂಗುತಿಗಳನ್ನು ವಿವಾಹಿತಸ್ತ್ರೀಯರು (ಮುತ್ತೈದೆಯರು) ಅತ್ಯವಶ್ಯಕವಾಗಿ ಧರಿಸಲೇಬೇಕು. ವಕ್ಷಸ್ಥಳವನ್ನು ಮುಚ್ಚಿಕೊಂಡಿರಬೇಕು. ಮೇಲುವಸ್ತ್ರವನ್ನು ಹೊದ್ದಿರಬೇಕು. ಶ್ರೀಹರಿಕೃಪೆಯಿಂದ ತಮಗೆ ದೊರೆತಿರುವ ಆಭರಣಗಳನ್ನು ಧರಿಸುತ್ತ 'ಗೃಹಲಕ್ಷ್ಮಿ'ಯರೆಂಬ ನಾಮವನ್ನು ಯಥಾಶಕ್ತಿ ಸಾರ್ಥಕಗೊಳಿಸಬೇಕು. ವಿಶೇಷವಾಗಿ ನೂತನ ವಧುವಾಗಿ 'ವರ'ನನ್ನು ಕೂಡುವಾಗ, ಮಂಗಳಕರಗಳಾದ ವಸ್ತ್ರಾಭರಣಗಳಿಂದ ಅಲಂಕೃತಳಾಗಿರಬೇಕು. ಇತ್ಯಾದಿ ಸುನೀತಿಗಳನ್ನು ತಿಳಿಯಬೇಕೆಂಬ ಗ್ರಂಥಕರ್ತರ ಆಶಯವನ್ನು ಈ ನುಡಿಗಳಲ್ಲಿ ಕಾಣಬಹುದಾಗಿದೆ.

(೨) ವಿವಾಹಕಾಲದಲ್ಲಿ ನೂತನ ವಧೂವರರಲ್ಲಿ ಲಕ್ಷ್ಮೀನಾರಾಯಣರ ಸನ್ನಿಧಾನವನ್ನು ಚಿಂತಿಸಿ, ಆ ಉಭಯರು, ನಿತ್ಯ-ನಿಯತದಂಪತಿಗಳಾದರೂ, ಅವರು ನಿತ್ಯ-ನೂತನದಂಪತಿಗಳೂ ಆಗಿರುವರೆಂಬುದನ್ನು ಮರೆಯದೆ ಅವರ ಕಲ್ಯಾಣವನ್ನೇ

ಆಚರಿಸುತ್ತಿದ್ದೇವೆಂಬ ಅನುಸಂಧಾನದಿಂದಲೇ ವಿವಾಹೋತ್ಸವವನ್ನು ನಡೆಸಬೇಕೆಂಬುದು, ವಿವಾಹಪ್ರಯೋಗಮಂತ್ರಗಳಿಂದ ಸಹ ಸ್ಪಷ್ಟವಾಗಿ ತಿಳಿಯಬರುತ್ತದೆ. ಇದರ ಉದ್ದೇಶ-ವನ್ನೂ ಮತ್ತು ಅದರಿಂದ ದೊರೆಯುವ ಫಲವನ್ನೂ ಈ ನುಡಿಗಳು ಸ್ಪಷ್ಟಗೊಳಿಸುತ್ತವೆ. ಲಕ್ಷ್ಮೀನಾರಾಯಣರ ಕಲ್ಯಾಣೋತ್ಸವವನ್ನು ಆಚರಿಸುವುದು ನಮ್ಮ ಕಲ್ಯಾಣಕ್ಕಾಗಿ - ಶ್ರೇಯಸ್ಸಿಗಾಗಿ ; ಅವರಾದರೋ ನಿತ್ಯ ಪರಮಮಂಗಳಸ್ವರೂಪರೇ ಆಗಿದ್ದಾರೆ. ಅವರ ಅಧಿಷ್ಠಾನಭೂತರಾದ ನೂತನ ವಧೂವರರು ತಮ್ಮ ಜೀವಿತಕಾಲದಲ್ಲಿ ನಿತ್ಯಮಂಗಳವನ್ನು ಹೊಂದಲೆಂಬ ಪ್ರಾರ್ಥನೆಯನ್ನು ಸಲ್ಲಿಸಿದಲ್ಲಿ, ಶ್ರೀಲಕ್ಷ್ಮೀದೇವಿಯ ಅನುಗ್ರಹವನ್ನು ಪಡೆದು ಸುಖಸಂಪತ್ತುಗಳನ್ನು ಹೊಂದುವುದರಲ್ಲಿ ಸಂಶಯವಿಲ್ಲ. ಶ್ರೀಲಕ್ಷ್ಮೀದೇವಿಯು, ವೇದಾದಿ-ಶಾಸ್ತ್ರಗಳಲ್ಲಿ "**ಮಂಗಳದೇವತೆ**"ಯೆಂದು ಪ್ರಸಿದ್ಧಳು. "**ಮಂಗಲಾ**" ನಾಮಕಳಾದ ಈಕೆಗೆ ನಿತ್ಯಾಶ್ರಯನಾದ ಶ್ರೀಹರಿಯು ಆಕೆಯೊಂದಿಗೆ ಸದಾ ಇದ್ದೇ ಇರುತ್ತಾನೆ. ಶ್ರೀಲಕ್ಷ್ಮೀದೇವಿ-ಯಾದರೋ ತನ್ನ ಪತಿಯ ಭಕ್ತರನ್ನು ಸದಾ ಕೃಪಾದೃಷ್ಟಿಯಿಂದಲೇ ನೋಡುವಳು. ಈಕೆಯ ಕೃಪಾಪಾತ್ರರು, ಭಕ್ತಿಜ್ಞಾನಾದಿ ಮಹಾಸಂಪತ್ತನ್ನೂ, ಐಹಿಕಸಂಪತ್ತನ್ನೂ ತಪ್ಪದೆ ಹೊಂದುವರು.

"ನಿತ್ಯೋತ್ಸವೋ ಭವೇತ್ತೇಷಾಂ ನಿತ್ಯಶ್ರೀರ್ನಿತ್ಯಮಂಗಲಮ್ ।
ಯೇಷಾಂ ಹೃದಿಸ್ಥೋ ಭಗವಾನ್ ಮಂಗಲಾಯತನೋ ಹರಿಃ ॥"

ಎಂಬುದು ಈ ವಿಷಯದಲ್ಲಿ ಸ್ಪಷ್ಟ ಪ್ರಮಾಣವಾಗಿದೆ.

ಈ ಮುಂದಿನ ನುಡಿಗಳಲ್ಲಿ ಲೌಕಿಕಕನ್ಯೆಯಂತೆ ವಿಡಂಬನಮಾಡಿ, ಅನ್ಯರಲ್ಲಿರುವ ದೋಷಗಳನ್ನು ಚಿಂತಿಸಿ, ನಿರ್ದೋಷನೂ, ಕಲ್ಯಾಣಗುಣಪೂರ್ಣನೂ, ಸರ್ವೋ-ತ್ತಮನೂ ಆದ ಶ್ರೀಹರಿಯನ್ನೇ ಆರಿಸಿಕೊಂಡು ಪತಿಯನ್ನಾಗಿ ವರಿಸಿದಳೆಂಬ ಕಥೆಯನ್ನು ವಿಸ್ತರಿಸಲಾಗಿದೆ.

ತನ್ನ ಮಕ್ಕಳ ಕುಂದ ತಾನೆ ಪೇಳುವುದಕ್ಕೆ
ಮನ್ನದಿ ನಾಚಿ ಮಹಲಕ್ಷುಮಿ ।
ತನ್ನಾಮದಿಂದಲಿ ಕರೆಯದೆ ಒಬ್ಬೊಬ್ಬರ
ಉನ್ನತದೋಷಗಳನೆಣಿಸಿದಳು ॥ ಶೋಭಾನೆ ॥ ॥ ೧೬ ॥

ಅರ್ಥ:— ತನ್ನ ಮಕ್ಕಳ = ತನ್ನ ಸಂತಾನವೇ ಆದ ಬ್ರಹ್ಮಾದಿಗಳ, ಕುಂದ = ದೋಷಗಳನ್ನು, ತಾನೆ ಪೇಳುವುದಕ್ಕೆ = ತಾನೇ ಹೇಳಲಿಕ್ಕೆ, ಮನ್ನದಿ ನಾಚಿ = ಮನಸ್ಸಿನ ಲಜ್ಜೆಯಿಂದ, ಮಹಲಕ್ಷುಮಿ = ಮಹಾಲಕ್ಷ್ಮಿಯು, ತನ್ನಾಮದಿಂದಲಿ ಕರೆಯದೆ = ಅವರ

ಹೆಸರುಗಳನ್ನು ಹೇಳದೆ, ಒಬ್ಬೊಬ್ಬರ = ಪ್ರತಿಯೊಬ್ಬನ, ಉನ್ನತ ದೋಷಗಳ = ಪ್ರಧಾನ-ದೋಷಗಳನ್ನು, ಎಣಿಸಿದಳು = ಗಣನೆ ಮಾಡಿದಳು (ಉದಾಹರಿಸಿದಳು).

ವಿಶೇಷಾಂಶ:— (೧) ಬ್ರಹ್ಮವಾಯುಗಳು ಮಾತ್ರ ಲಕ್ಷ್ಮೀಪುತ್ರರೆಂದೂ, ಅವರಿಂದ ಹುಟ್ಟಿದವರು ರುದ್ರಾದಿ ಮುಂದಿನವರೆಲ್ಲರೂ, ಎಂಬ ಸೃಷ್ಟಿಕ್ರಮವು ಇಲ್ಲಿ ವಿವಕ್ಷಿತವಲ್ಲ. ಶೇಷರುದ್ರಾದಿಗಳು ಲಕ್ಷ್ಮೀದೇವಿಗೆ ಮೊಮ್ಮಕ್ಕಳಾಗುವುದರಿಂದ '**ತನ್ನ ಮಕ್ಕಳು**' ಎಂದದ್ದು ಹೇಗೆಂಬ ಸಂಶಯಕ್ಕೆ ಕಾರಣವಿಲ್ಲ. ಎಲ್ಲ ಯೋನಿಗಳಲ್ಲಿ ಹುಟ್ಟಿ ಬರುವ ಎಲ್ಲ ಪ್ರಾಣಿಗಳಿಗೂ ಮಹಾಲಕ್ಷ್ಮಿಯೇ ತಾಯಿಯು, ನಾರಾಯಣನೇ ತಂದೆಯು. 'ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್ । ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ । ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ ॥ ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃಪಿತಾ ॥' (ಗೀತಾ) ಶ್ರೀಕೃಷ್ಣನು, ಎಲ್ಲ ಪ್ರಾಣಿಗಳಿಗೂ ಲಕ್ಷ್ಮೀದೇವಿಯೇ ತಾಯಿಯೆಂದೂ ತಾನೇ ತಂದೆಯೆಂದೂ, ಹೇಳಿರುವನು. ಈ ಶ್ಲೋಕಗಳ ಅರ್ಥ ಹೀಗಿದೆ:— ಮಹದ್ಬ್ರಹ್ಮ = "**ಮಹತ್‌ಬ್ರಹ್ಮ**" ಎಂದು ಕರೆಯಲ್ಪಡುವ ಲಕ್ಷ್ಮಿಯು, ಮಮ ಯೋನಿಃ = ನನ್ನ ಭಾರ್ಯಳು ; ತಸ್ಮಿನ್ = ಆಕೆಯಲ್ಲಿ, ಅಹಂ = ನಾನು, ಗರ್ಭಂ ದಧಾಮಿ = ಗರ್ಭವನ್ನು ಸ್ಥಾಪಿಸುತ್ತೇನೆ ; ತತಃ = ನಂತರ, ಸರ್ವಭೂತಾನಾಂ = ಸಕಲ ಪ್ರಾಣಿಗಳ, ಸಂಭವಃ = ಉತ್ಪತ್ತಿಯು, ಭಾರತ = ಹೇ ಅರ್ಜುನ ! ಭವತಿ = ಉಂಟಾಗುತ್ತದೆ. ಕೌಂತೇಯ = ಹೇ ಅರ್ಜುನ ! ಸರ್ವಯೋನಿಷು = ವಿವಿಧ ದೇಹಗಳಲ್ಲಿ (ಎಲ್ಲ ಸ್ತ್ರೀಗರ್ಭದಿಂದ), ಯಾಃ ಮೂರ್ತಯಃ = ಯಾವ ಯಾವ ಪ್ರಾಣಿದೇಹಗಳು, ಸಂಭವಂತಿ ಹುಟ್ಟುತ್ತವೋ, ತಾಸಾಂ = ಆ ಎಲ್ಲಕ್ಕೂ, ಮಹತ್‌ಬ್ರಹ್ಮ = ಲಕ್ಷ್ಮೀದೇವಿಯು, ಯೋನಿಃ = ಕಾರಣಳು (ತಾಯಿಯು) ; ಅಹಂ = ನಾನು, ಬೀಜಪ್ರದಃಪಿತಾ = ಬೀಜವನ್ನು ಬಿತ್ತುವ (ನಿರ್ವಿಕಾರಮೂಲಕಾರಣನಾದ) ತಂದೆಯು. ಈ ದೃಷ್ಟಿಯಿಂದ, ಮಹಾಲಕ್ಷ್ಮಿಯು ಯಾರು ಯಾರಲ್ಲಿ ದೋಷಗಳನ್ನು ಹೇಳುತ್ತಾಳೆಯೋ ಅವರೆಲ್ಲರೂ ಆಕೆಯ ಮಕ್ಕಳೇ ಸರಿ.

(೨) '**ಇಂಥವನಲ್ಲಿ ಇಂತಹ ದೋಷವಿದೆ**' ಎಂದು ಹೆಸರುಗಳನ್ನು ಹೇಳದೇ, ಒಬ್ಬನು ಈ ದೋಷವುಳ್ಳವನು, ಇನ್ನೊಬ್ಬನು ಆ ದೋಷವುಳ್ಳವನು, ಕೆಲವರಲ್ಲಿ ಈ ದೋಷವಿದೆ, ಮತ್ತೆ ಕೆಲವರಲ್ಲಿ ಅನ್ಯದೋಷಗಳಿವೆ, ಎಂದು ಮಾತ್ರ ಹೇಳಿಕೊಂಡು, ಅವರೆಲ್ಲರನ್ನು ತನಗೆ ಯೋಗ್ಯರಲ್ಲವೆಂದು ತ್ಯಜಿಸುತ್ತಾಳೆ. 'ನೂನಂ ತಪೋ ಯಸ್ಯ ನ ಮನ್ಯುನಿರ್ಜಯೋ । ಜ್ಞಾನಂ ಕ್ವಚಿತ್ತಸ್ಯ ನ ಸಂಗವರ್ಜಿತಃ ॥' (ಭಾಗವತ) ಇತ್ಯಾದಿ ವಾಕ್ಯಗಳಲ್ಲಿ ಕ್ವಚಿತ್, ಕಶ್ಚಿತ್, ಇತ್ಯಾದಿ ಶಬ್ದಗಳಿಂದಲೇ ದೋಷಿಗಳನ್ನು ಸೂಚಿಸಿರುವುದನ್ನು ಮನಸ್ಸಿನಲ್ಲಿಟ್ಟು '**ತನ್ನಾಮದಿಂದಲಿ ಕರೆಯದೆ**' ಎಂದಿರುವರು.

ಕೆಲವರು ತಲೆಯೂರಿ ತಪಗೈದು ಪುಣ್ಯವ
ಗಳಿಸಿದ್ದರೇನೂ ಫಲವಿಲ್ಲ।
ಜ್ವಲಿಸುವ ಕೋಪದಿ ಶಾಪವ ಕೊಡುವರು
ಲಲನೆಯನಿವರು ಒಲಿಸುವರೆ ॥ ಶೋಭಾನೆ ॥ ॥ ೧೭ ॥

ಅರ್ಥ:— ಕೆಲವರು = (ಮಹಾತ್ಮರೆಂಬ) ಕೆಲಮಂದಿ (ಇದ್ದಾರೆ), ತಲೆಯೂರಿ = (ಅವರು) ತಲೆಕೆಳಗಾಗಿ ನಿಂತು, ತಪ = ತಪಸ್ಸನ್ನು, ಗೈದು = ಮಾಡಿ, ಪುಣ್ಯವ = ಪುಣ್ಯವನ್ನು, ಗಳಿಸಿದ್ದರೂ = ಸಂಪಾದಿಸಿದ್ದರೂ, ಏನೂ ಫಲವಿಲ್ಲ = ಏನೂ ಪ್ರಯೋಜನವಿಲ್ಲ; ಜ್ವಲಿಸುವ = ಉರಿಯುವ, ಕೋಪದಿ = ಸಿಟ್ಟಿನಿಂದ, ಶಾಪವ ಕೊಡುವರು = ಶಾಪವನ್ನೇ ಕೊಡುತ್ತಾರೆ ; ಲಲನೆಯನು = (ಇಂಥ ಕೋಪಿಷ್ಠರು)ಹೆಂಗಸನ್ನು, ಇವರು ಒಲಿಸುವರೆ = ಒಲಿಸಿಕೊಳ್ಳಲು ಸಾಧ್ಯವೇ ? (ಸಾಧ್ಯವಿಲ್ಲ).

ವಿಶೇಷಾಂಶ:— (೧) ದೂರ್ವಾಸಾದಿ ತಪಸ್ವಿಗಳು ಇಲ್ಲಿ ವಿವಕ್ಷಿತರು. ದೂರ್ವಾಸರು ಅಂಬರೀಷಚಕ್ರವರ್ತಿಯ ಮೇಲೆ ನಿಷ್ಕಾರಣವಾಗಿ ಕುಪಿತರಾಗಿ ಕೃತ್ಯವನ್ನು (ದುಷ್ಟಶಕ್ತಿಯನ್ನು) ಅವನ ನಾಶಕ್ಕಾಗಿ ಬಿಟ್ಟ ಕಥೆಯು ಪುರಾಣ ಪ್ರಸಿದ್ಧವಾಗಿದೆ.

(೨) ಕ್ರೋಧವನ್ನು ನಿಗ್ರಹಿಸದವರ ತಪಸ್ಸು ಗುಣವಲ್ಲ. ಕೋಪವೆಂಬ ದೋಷವು ತಪಸ್ಸೆಂಬ ಗುಣವನ್ನು ನಾಶಗೊಳಿಸುತ್ತದೆ.

ಎಲ್ಲ ಶಾಸ್ತ್ರಗಳೋದಿ ದುರ್ಲಭಜ್ಞಾನವ
ಕಲ್ಲಿಸಿಕೊಡುವ ಗುರುಗಳು।
ಬಲ್ಲಿದ ಧನಕ್ಕೆ ಮರುಳಾಗಿವರಿಬ್ಬರು
ಸಲ್ಲದ ಪೌರೋಹಿತ್ಯಕ್ಕೊಳಗಾದರು ॥ ಶೋಭಾನೆ ॥ ॥ ೧೮ ॥

ಅರ್ಥ:— ಎಲ್ಲ ಶಾಸ್ತ್ರಗಳೋದಿ = ಸಕಲಶಾಸ್ತ್ರಗಳನ್ನು ಅಭ್ಯಾಸಮಾಡಿ, ದುರ್ಲಭಜ್ಞಾನವ = ಕಷ್ಟಸಾಧ್ಯವಾದ ಜ್ಞಾನವನ್ನು, ಕಲ್ಲಿಸಿಕೊಡುವ = (ಇತರರಿಗೆ) ಕಲಿಸುವ (ಉಪದೇಶಿಸುವ), ಗುರುಗಳು = ಗುರುಗಳಾದ, ಇವರಿಬ್ಬರು = ಈ ಇಬ್ಬರು ಜ್ಞಾನಿಗಳು, ಬಲ್ಲಿದ ಧನಕ್ಕೆ = ಹೆಚ್ಚಾದ ಐಶ್ವರ್ಯಕ್ಕೆ, ಮರುಳಾಗಿ = ಮೋಹಗೊಂಡು, ಸಲ್ಲದ = (ಅಂಥ ಜ್ಞಾನಿಗಳಿಗೆ) ಯೋಗ್ಯವಲ್ಲದ, ಪೌರೋಹಿತ್ಯಕ್ಕೆ = ಪುರೋಹಿತರ ಸ್ಥಾನಕ್ಕೆ, ಒಳಗಾದರು = ಒಪ್ಪಿಕೊಂಡರು.

ವಿಶೇಷಾಂಶ:— ಈ ನುಡಿಯಲ್ಲಿ ಪ್ರಸಕ್ತರಾದವರು ಬೃಹಸ್ಪತ್ಯಾಚಾರ್ಯರು ಮತ್ತು ಶುಕ್ರಾಚಾರ್ಯರು. ಒಬ್ಬರು ದೇವತೆಗಳ ಗುರುಗಳು, ಎರಡನೆಯವರು ದೈತ್ಯಗುರುಗಳು.

ದ್ರವ್ಯಸಂಪಾದನೆ ಮತ್ತು ಲೌಕಿಕಸ್ಥಾನಮಾನಗಳ ಮೋಹದಿಂದ, ಗುರುಗಳಾಗಿ ಪೌರೋಹಿತ್ಯವನ್ನು ಸ್ವೀಕರಿಸಿದರು.

ಕಾಮನಿರ್ಜಿತನೊಬ್ಬ ಕಾಮಿನಿಗೆ ಸೋತೊಬ್ಬ
ಭಾಮಿನಿಯ ಹಿಂದೆ ಹಾರಿದವ ।
ಕಾಮಾಂಧನಾಗಿ ಮುನಿಯ ಕಾಮಿನಿಗೈದಿದನೊಬ್ಬ
ಕಾಮದಿ ಗುರುತಲ್ಪಗಾಮಿಯೊಬ್ಬ॥ ಶೋಭಾನೆ ॥ ॥ ೧೯ ॥

ಅರ್ಥ:— ಒಬ್ಬ ಕಾಮನಿರ್ಜಿತ = ಒಬ್ಬ ಕಾಮವಶನಾಗಿ, ಕಾಮಿನಿಗೆ ಸೋತ = ಸ್ತ್ರೀಯನ್ನು ಮೋಹಿಸಿ ಕೂಡಿದನು ; ಒಬ್ಬ= ಮತ್ತೊಬ್ಬನು, ಭಾಮಿನಿಯ ಹಿಂದೆ ಹಾರಿ-ದವ = ಸ್ತ್ರೀಸೌಂದರ್ಯಕ್ಕೆ ಮರುಳಾಗಿ ಆಕೆಯ ಬೆನ್ನು ಹತ್ತಿದವನು ; ಒಬ್ಬ= ಇನ್ನೊಬ್ಬನು, ಕಾಮಾಂಧನಾಗಿ = ಕಾಮದಿಂದ ಕುರುಡನಂತಾಗಿ (ಉಚಿತ, ಅನುಚಿತಗಳನ್ನು ಕಾಣದೆ), ಮುನಿಯ ಕಾಮಿನಿಗೆ = ಋಷಿಪತ್ನಿಗೆ, ಐದಿದನು = ಎರಗಿದನು ; ಒಬ್ಬ= ಬೇರೊಬ್ಬನು, ಕಾಮದಿ = ಕಾಮವಶದಿಂದ, ಗುರುತಲ್ಪಗಾಮಿ = ಗುರುಪತ್ನಿಯನ್ನೇ ಹೊಂದಿದನು.

ವಿಶೇಷಾಂಶ:— ನಿರ್ದೋಷನಾದರೂ, ಪ್ರಾಕೃತದೇಹಮಾತ್ರವುಳ್ಳವನೆಂಬ (ಲೌಕಿಕ-ಗೌಣ) ಕಾರಣದಿಂದ, ದೋಷಿಗಳ ವರ್ಗಕ್ಕೆ ಸೇರುವ ಶ್ರೀಬ್ರಹ್ಮದೇವನು, ತಾನು ಸೃಷ್ಟಿಸಿದ ಸರಸ್ವತಿಯನ್ನು ತಾನೇ ಇಚ್ಛಿಸಿ ಹೊಂದಿದನು. ಶ್ರೀಹರಿಯು ನಿರಪೇಕ್ಷನು — ಆತನು ಲಕ್ಷ್ಮಿಯನ್ನು ಹೀಗೆ ಎಂದೂ ಹೊಂದುವುದಿಲ್ಲ. ಭಾಮಿನಿಯ ಹಿಂದೆ ಹಾರಿದವನೆಂಬುವನು, ಶ್ರೀಹರಿಯ ಮೋಹಿನೀರೂಪಕ್ಕೆ ಮರುಳಾಗಿ ಬೆನ್ನು ಹತ್ತಿದ ರುದ್ರದೇವನು. ಮುನಿಯ ಕಾಮಿನಿಗೆ ಐದಿದವನು, ಗೌತಮಋಷಿಗಳ ಪತ್ನಿ ಅಹಲ್ಯೆಯನ್ನು ಕೆಡಿಸಿದ ಇಂದ್ರದೇವನು. ದೇವಗುರುಗಳಾದ ಬೃಹಸ್ಪತ್ಯಾಚಾರ್ಯರ ಪತ್ನಿಯಾದ ತಾರೆಯನ್ನು, ಆಕೆಯು ತನ್ನ ಗುರುಪತ್ನಿಯೆಂಬುದನ್ನೂ ಲಕ್ಷಿಸದೇ ಭೋಗಿಸಿದ ಚಂದ್ರನು ಗುರುತಲ್ಪಗಾಮಿಯು.

ನಶ್ವರೈಶ್ವರ್ಯವ ಬಯಸುವನೊಬ್ಬ ಪರ-
ರಾಶ್ರಯಿಸಿ ಬಾಳುವ ಈಶ್ವರನೊಬ್ಬ।
ಹಾಸ್ಯವ ಮಾಡಿ ಹಲ್ಲು ಉದುರಿಸಿಕೊಂಡವನೊಬ್ಬ-
ದೃಶ್ಯಾಂಘ್ರಿಯೊಬ್ಬ ಒಕ್ಕಣ್ಣನೊಬ್ಬ॥ ಶೋಭಾನೆ ॥ ॥ ೨೦ ॥

ಅರ್ಥ:— ಒಬ್ಬ= ಒಬ್ಬನು, ನಶ್ವರೈಶ್ವರ್ಯವ = ನಶ್ವರವಾದ ಐಶ್ವರ್ಯವನ್ನು (ಸಂಪತ್ತನ್ನು), ಬಯಸುವನು = ಆಶಿಸುವನು ; ಪರರಾಶ್ರಯಿಸಿ = ಪರರನ್ನು ಆಶ್ರಯಿಸಿ,

ಬಾಳುವ = ಬದುಕುವ, ಈಶ್ವರನೊಬ್ಬ= (ಆದರೂ) ''ಈಶ್ವರ''ನೆಂದು ಕರೆಯಲ್ಪಡು-ವವನೊಬ್ಬ ; ಒಬ್ಬ= ಇನ್ನೊಬ್ಬನು, ಹಾಸ್ಯವ ಮಾಡಿ = ಅಪಹಾಸ್ಯಮಾಡಿ ನಕ್ಕು, ಹಲ್ಲ= ಹಲ್ಲುಗಳನ್ನು, ಉದುರಿಸಿಕೊಂಡವ = ಕಿತ್ತಿಸಿಕೊಂಡವನು ; ಒಬ್ಬ= ಮತ್ತೊಬ್ಬನು, ಅದೃಶ್ಯಾಂಘ್ರಿ = ಕಾಲುಗಳಿಲ್ಲದವನು (ಪಾದಗಳಿಲ್ಲದವನು) ; ಒಬ್ಬ= ಮತ್ತೊಬ್ಬನು, ಒಕ್ಕಣ್ಣ = ಒಂದೇ ಕಣ್ಣಿನವನು.

ವಿಶೇಷಾಂಶ:— ಐಶ್ವರ್ಯ ಸೌಂದರ್ಯಾದಿಗಳಿದ್ದರೂ, ಅತಿಶಯ ಸಂಪದಾದಿಗಳನ್ನು ಬಯಸುವವರು ಇಂದ್ರಾದಿದೇವತೆಗಳು ; **'ವೃಕಾಸುರಾಯ ಗಿರಿಶೋವರಂ ದತ್ವಾಪ-ಸಂಕಟಂ'** (ಭಾಗವತ) ಎಂದು ಹೇಳಿದಂತೆ, ವೃಕಾಸುರನಿಗೆ ''ನೀನು ಯಾರ ತಲೆಯ ಮೇಲೆ ಕೈಯಿಡುವೆಯೋ ಅವನು ಸುಟ್ಟು ಹೋಗಲಿ'' ಎಂಬ ವರವನ್ನು ಕೊಟ್ಟು, ತನ್ನ ತಲೆಯ ಮೇಲೆಯೇ ಕೈಯಿಡಲು ಬೆನ್ನಟ್ಟಿ ಬಂದ ಆ ಅಸುರನಿಂದ, ವಟುರೂಪದಿಂದ ಪ್ರತ್ಯಕ್ಷನಾದ ಶ್ರೀಹರಿಯಿಂದ ರಕ್ಷಿತನಾದವನು ''**ಈಶ್ವರನು**''. *''ಸ ಈಶ್ವರಃ ಕಿಂ ಪರತೋ ವ್ಯಪಾಶ್ರಯಃ''* (ಭಾಗವತ) ಎಂದಂತೆ ಅನ್ಯಾಶ್ರಯದಿಂದ ಬದುಕುವವನು **ಈಶ್ವರನೇ?** ವೀರಭದ್ರನಿಂದ, ದಕ್ಷಯಜ್ಞ ಧ್ವಂಸಕಾಲದಲ್ಲಿ, ಅಪಹಾಸ್ಯಮಾಡಿ ನಕ್ಕು ಹಲ್ಲುಕೀಳಿಸಿ-ಕೊಂಡವನು, ''ಪೂಷಾ''ನಾಮಕ ಸೂರ್ಯನು (ದ್ವಾದಶಾದಿತ್ಯರಲ್ಲೊಬ್ಬನು). ಜನರಿಗೆ ಹಾವಿನ ರೂಪದಿಂದ ದರ್ಶನಕೊಡುವಾಗ ಕಾಲಿಲ್ಲದವನು ಶೇಷದೇವ. ಕಾಕಾಸುರನಲ್ಲಿದ್ದ ಇಂದ್ರಪುತ್ರ ಜಯಂತ, ಒಕ್ಕಣ್ಣನು.

ಮಾವನ ಕೊಂದೊಬ್ಬ ಮರುಳಾಗಿಹನು ಗಾಢಹಾ-
ರುವನ ಕೊಂದೊಬ್ಬ ಬಳಲಿದ ।
ಜೀವರ ಕೊಂದೊಬ್ಬ ಕುಲಗೇಡಿಯೆನಿಸಿದ
ಶಿವನಿಂದಲೊಬ್ಬ ಬಯಲಾದ ॥ ಶೋಭಾನೆ ॥ ॥ ೨೧ ॥

ಅರ್ಥ:— ಒಬ್ಬ= ಒಬ್ಬನು, ಮಾವನ = ಮಾವನನ್ನು, ಕೊಂದು, ಮರುಳಾಗಿ-ಹನು ; ಗಾಢಹಾರುವನ = ಜ್ಞಾನಿಯಾದ ಬ್ರಾಹ್ಮಣನನ್ನು, ಕೊಂದು = ಸಂಹರಿಸಿ, ಒಬ್ಬ= ಮತ್ತೊಬ್ಬನು, ಬಳಲಿದ = ಆಯಾಸಗೊಂಡನು ; ಒಬ್ಬ= ಇನ್ನೊಬ್ಬನು, ಜೀವರ ಕೊಂದು = ಜೀವರನ್ನು ನಾಶಮಾಡಿ, ಕುಲಗೇಡಿ = ಕುಲನಾಶಕನು, ಎನಿಸಿದ = ಎಂದು ಕರೆಯಲ್ಪಟ್ಟನು ; ಒಬ್ಬ= ಬೇರೊಬ್ಬನು, ಶಿವನಿಂದಲಿ = ಮಹಾದೇವನಿಂದ, ಬಯ-ಲಾದ = ದೇಹವಿಲ್ಲದವ(ಅನಂಗ)ನಾದನು.

ವಿಶೇಷಾಂಶ:— ತನ್ನ ಮಾವನಾದ ದಕ್ಷಪ್ರಜಾಪತಿಯನ್ನು ಕೊಂದು, ಪುನಃ ದೇವತೆಗಳಿಂದ ಪ್ರಾರ್ಥಿತನಾಗಿ, ತನ್ನ ಪ್ರತಿಜ್ಞೆಯನ್ನು (ದಕ್ಷನನ್ನು ಸಂಹರಿಸುವೆನೆಂಬ

ಸಂಕಲ್ಪವನ್ನು) ಬದಲಿಸಿ, ಉಜ್ಜೀವಿಸಿಸಿದನು. ಸಂಕಲ್ಪವಿಕಲ್ಪಗಳಿಂದ ಯುಕ್ತರು ಮರುಳರು. ಸತ್ಯಸಂಕಲ್ಪನು ಶ್ರೀಹರಿಯೊಬ್ಬನೇ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ವೃತ್ರಾಸುರನನ್ನು ಸಂಹರಿಸಿ ಬ್ರಹ್ಮಹತ್ಯಾದೋಷದಿಂದ ಪರಿತಪಿಸಿದ ಇಂದ್ರನ ಕಥೆಯು ಭಾಗವತದಲ್ಲಿ ಪ್ರಸಿದ್ಧವಿದೆ. ವೃತ್ರನು ಅಸುರನಾದರೂ ಮಹಾಜ್ಞಾನಿಯಾಗಿದ್ದನು. ಪೂರ್ವಜನ್ಮದಲ್ಲಿ ಸಂಕರ್ಷಣನ ಅನುಗ್ರಹಕ್ಕೆ ಪಾತ್ರನಾದ ಚಿತ್ರಕೇತುವೆಂಬ ರಾಜನಾಗಿದ್ದು, ಪಾರ್ವತೀಶಾಪ ನಿಮಿತ್ತದಿಂದ ಅಸುರನಾಗಿ ಹುಟ್ಟಿದ್ದನು. "*ಇಂದ್ರೋ ನ ವಜ್ರಂ ಜಗೃಹೇ ವಿಲಜ್ಜಿತಶ್ಚ್ಯುತಂ ಸ್ವಹಸ್ತಾದರಿಸನ್ನಿಧೌ ಪುನಃ । ತಮಾಹ ವೃತ್ರೋ ಹರ ಆತ್ತವಜ್ರೋ ಜಹಿ ಸ್ವಶತ್ರುಂ ನ ವಿಷಾದ ಕಾಲಃ ॥ ಯಥಾ ದಾರುಮಯೀ ನಾರೀ ಯಥಾ ಯಂತ್ರಮಯೋಮೃಗಃ । ಏವಂ ಭೂತಾನಿ ಮಘವನ್ನೀಶತಂತ್ರಾಣಿ ವಿದ್ಧಿ ಭೋಃ ॥ ಪಶ್ಯ ಮಾಂ ನಿರ್ಜಿತಂ ಶಕ್ರ ವೃಕ್ಣಾಯುಧಭುಜಂ ಮೃಧೇ । ಅಹೋ ದಾನವ ಸಿದ್ಧೋಽಸಿ ಯಸ್ಯ ತೇ ಮತಿರೀದೃಶೀ । ಭಕ್ತಃ ಸರ್ವಾತ್ಮನಾಽತ್ಮಾನಂ ಸುಹೃದಂ ಜಗದೀಶ್ವರಮ್ । ಭವಾನತಾರ್ಷೀನ್ಮಾಯಾಂ ವೈ ವೈಷ್ಣವೀಂ ಜನಮೋಹಿನೀಮ್ ॥*" ಎಂದರೆ, "ಯುದ್ಧದಲ್ಲಿ ಇಂದ್ರನ ವಜ್ರಾಯುಧವು ಕೆಳಗೆ ಬಿದ್ದುಹೋಯಿತು ; ಅದನ್ನು ಪುನಃ ತೆಗೆದು ಶತ್ರುವಿನ ಮೇಲೆ ಪ್ರಯೋಗಿಸಲು ಲಜ್ಜೆಗೊಂಡನು, ಆಗ ವೃತ್ರಾಸುರನು, "ವಿಷಾದಕ್ಕೆ ಇದು ಕಾಲವಲ್ಲ, ಅದನ್ನು ಕೈಗೆ ತೆಗೆದುಕೊ ; ಶತೃವನ್ನು ಸಂಹರಿಸು ; ಮರದ ಹೆಣ್ಣು ಗೊಂಬೆಯಂತೆಯೂ, ಯಂತ್ರವಶವಾದ ಮೃಗದಂತೆಯೂ, ಹೇ ಇಂದ್ರ! ಎಲ್ಲ ಪ್ರಾಣಿಗಳು ಶ್ರೀಹರಿಯ ವಶರು – ಆತನೇ ಸಂಹರಿಸುವವನು ; ಹೊಡಿ ; ಕತ್ತರಿಸಲ್ಪಟ್ಟ ಭುಜಗಳುಳ್ಳ ನನ್ನನ್ನು ಶೀಘ್ರವಾಗಿ ಕಾಣು" ಎಂದನು. ಆಗ ಇಂದ್ರನು, "ಹೇ ಅಸುರ ! ಈ ವಿಧ ಜ್ಞಾನವುಳ್ಳ ನೀನು ಸಿದ್ಧಪುರುಷನು ; ಜಗದೀಶ್ವರನಾದ ಶ್ರೀಹರಿಯನ್ನು ಹೀಗೆ ಭಕ್ತಿಯಿಂದ ಶರಣು ಹೊಂದಿರುವಿ, ಆಶ್ಚರ್ಯವು" ಎಂದು ಪ್ರಶಂಸಿಸಿದನು. ಇದನ್ನು '**ಗಾಥಹಾರುವನ ಕೊಂದು**' ಎಂಬುದರಿಂದ ಸೂಚಿಸಲಾಗಿದೆ. ಇಂದ್ರನಾದರೋ, ಬ್ರಹ್ಮಹತ್ಯಾ ಪೀಡಿತನಾಗಿ, ಕಮಲದ ದೇಟಿನ ತಂತುಗಳಲ್ಲಿ ಸಹಸ್ರವರ್ಷಕಾಲ ಅಡಗಿ ಕೂಡಬೇಕಾಯಿತು. "*ವರ್ಷಾಣಿ ಸಹಸ್ರಮಲಕ್ಷಿತೋಽಂತಃ ಸ ಚಿಂತಯನ್ ಬ್ರಹ್ಮವಧಾದ್ವಿಮೋಕ್ಷಮ್ ॥*" (ಭಾಗವತ), ಎಂಬುದನ್ನು 'ಬಳಲಿದ' ಎಂಬುದರಿಂದ ಸೂಚಿಸಿರುವರು. ಜಗತ್ತಿನಲ್ಲಿರುವ ಸರ್ವಪ್ರಾಣಿಗಳ ಪ್ರಾಣಗಳನ್ನು ಸೆಳೆದೊಯ್ಯುವ ಯಮದೇವನು, ಜೀವರ ಕುಲನಾಶಕನೆಂಬ ದೋಷಣೆಗೆ ಒಳಗಾದವನು, ಮನ್ಮಥನು ಮಹದೇವನ ತಪಸ್ಸನ್ನು ಕೆಡಿಸಲು ಹೋಗಿ ದಹಿಸಲ್ಪಟ್ಟು, ಪುನಃ ರತೀದೇವಿಯಿಂದ ಪ್ರಸನ್ನೀಕರಿಸಿಕೊಳ್ಳಲ್ಪಟ್ಟ ಶಿವನ ವರದಿಂದ '**ಅನಂಗ**'ನಾಗಿ ತನ್ನ ಕಾರ್ಯದಲ್ಲಿ ಪ್ರವೃತ್ತನಾದನು. '**ಶಿವನಿಂದ ಬಯಲಾದನು**' ಎಂಬುದು ಈ ಮನ್ಮಥನ ದೋಷವನ್ನು ಸೂಚಿಸುತ್ತದೆ.

ಧರ್ಮವುಂಟೊಬ್ಬನಲಿ ಹೆಮ್ಮೆಯ ಹೆಸರಿಗೆ
ಅಮ್ಮಮ್ಮ ತಕ್ಕ ಗುಣವಿಲ್ಲ।
ಕ್ಷಮ್ಮೆಯ ಬಿಟ್ಟೊಬ್ಬ ನರಕದಲಿ ಜೀವರ
ಮರ್ಮವ ಮೆಟ್ಟಿ ಕೊಲಿಸುವ ॥ ಶೋಭಾನೆ ॥ ॥ ೨೨ ॥

ಅರ್ಥ:— ಒಬ್ಬನಲಿ = ಒಬ್ಬನಲ್ಲಿ, ಧರ್ಮವುಂಟು = ಧರ್ಮವೇ ಮೂರ್ತಿವೆತ್ತಂತಿದೆ ; ಹೆಮ್ಮೆಯ ಹೆಸರಿಗೆ = ಹೆಮ್ಮೆಪಡಬಹುದಾದಂಥ ಹೆಸರಿಗೆ, ತಕ್ಕ = ಸರಿಯಾದ, ಗುಣವಿಲ್ಲ = ಸಾಧುಗುಣವಿಲ್ಲ ; ಅಮ್ಮಮ್ಮ = ಆಶ್ಚರ್ಯ ! ಆಶ್ಚರ್ಯ! ಒಬ್ಬ = ಒಬ್ಬನು (ಅವನೇ ಮತ್ತೊಂದು ರೂಪದಿಂದ) ಕ್ಷಮ್ಮೆಯ ಬಿಟ್ಟು = ಕ್ಷಮಾಗುಣವನ್ನು ತೊರೆದು (ನಿಷ್ಕರುಣಿಯಾಗಿ), ನರಕದಲಿ = ನರಕದಲ್ಲಿ, ಜೀವರ = (ತನ್ನ ಲೋಕಕ್ಕೆ ಬಂದ) ಜೀವರನ್ನು, ಮರ್ಮವ ಮೆಟ್ಟಿ = ಮರ್ಮ ಸ್ಥಳಗಳನ್ನು ಘಾತಿಸಿ, ಕೊಲಿಸುವ = (ತನ್ನ ಭೃತ್ಯರಿಂದ) ಸಾಯಬಡಿಸುವನು (ಪ್ರಾಣಹೋಗುವಂತೆ ಪೀಡಿಸುವನು).

ವಿಶೇಷಾಂಶ:— (೧) ಧರ್ಮ ಮತ್ತು ಯಮನೆಂಬ ಎರಡು ರೂಪಗಳುಳ್ಳವನಾದ್ದರಿಂದ '**ಯಮಧರ್ಮರಾಜ**'ನೆಂದು ಕರೆಯಲ್ಪಡುವ ಲೋಕಾಧಿಪತಿಯ ದೋಷವು ಹೇಳಲ್ಪಡುತ್ತದೆ. 'ಧರ್ಮಃ ಕ್ವಚಿತ್ತಸ್ಯ ನ ಭೂತಸೌಹೃದಂ' (ಭಾಗವತ) ಎಂಬ ವಾಕ್ಯದ ಸ್ಪಷ್ಟನಿರೂಪಣೆಯಿದು.

(೨) '**ಕೊಲಿಸುವ**' ಎಂಬುದಕ್ಕೆ ಪಾಪಫಲವಾದ ನರಕದುಃಖಾನುಭವಕ್ಕಾಗಿ ಜೀವರಿಗೆ ಪ್ರಾಪ್ತವಾಗಿರುವ '**ಯಾತನಾದೇಹ**'ಗಳು ದುಃಖಾನುಭವನಂತರದಲ್ಲಿ ಬಿದ್ದು ಹೋಗುತ್ತವೆಂಬುದನ್ನು ಸೂಚಿಸುತ್ತದೆ. ನಂತರ ತಮ್ಮ ಕರ್ಮಾನುಸಾರವಾಗಿ ಮುಂದಿನ ದೇಹವನ್ನು ಪ್ರವೇಶಿಸಲು ಸೂಕ್ಷ್ಮಶರೀರದಿಂದ ಕರೆದೊಯ್ಯಲ್ಪಡುತ್ತಾರೆ ; ಭೂಲೋಕದ ಪಾರ್ಥಿವದೇಹವಿಯೋಗರೂಪದ ಮರಣವೆಂದು ತಿಳಿಯಬಾರದು. ಹೀಗೆಯೇ ಸ್ವರ್ಗಸುಖಾನುಭವಕ್ಕಾದರೂ ಆ ಲೋಕಕ್ಕೆ ಯೋಗ್ಯವಾದ ಮತ್ತೊಂದು ಭೋಗದೇಹವು ಸೂಕ್ಷ್ಮದೇಹದ ಮೇಲಿರುವುದೆಂದೂ, ಸುಖಭೋಗವು (ಪುಣ್ಯವು ಮುಗಿಯುವುದರೊಳಗಾಗಿ) ತಪ್ಪಿ, ಭೋಗದೇಹದಿಂದ ಬಿಡಿಸಲ್ಪಟ್ಟು, ಕರ್ಮಾನುಗುಣವಾದ ಮತ್ತೊಂದು ದೇಹಕ್ಕೆ ಪ್ರವೇಶಿಸಲ್ಪಡುತ್ತಾನೆಂದೂ ತಿಳಿಯಬೇಕು.

ಖಳನಂತೆ ತನಗೆ ಸಲ್ಲದ ಭಾಗ್ಯವನೊಬ್ಬ
ಬಲ್ಲಿದಗಂಜಿ ಬರಿಗೈದ ।
ದುರ್ಲಭಮುಕ್ತಿಗೆ ದೂರವೆಂದೆನಿಪ ಪಾ-
ತಾಳತಳಕ್ಕೆ ಇಳಿದ ಗಡ ! ॥ ಶೋಭಾನೆ ॥ ॥ ೨೩ ॥

ಅರ್ಥ:— ಒಬ್ಬ= ಒಬ್ಬನು ಮಹಾತ್ಮನು, ಖಳನಂತೆ = (ತಾತ್ಕಾಲಿಕ ದೈತ್ಯಾವೇಶ ಯುಕ್ತನಾಗಿದ್ದುದರಿಂದ) ಅಸುರನಂತಿದ್ದು, ತನಗೆ ಸಲ್ಲದ ಭಾಗ್ಯವ = (ಆ ಕಾಲಕ್ಕೆ) ತನಗೆ ಅರ್ಹವಲ್ಲದ ಸ್ವರ್ಗಲೋಕಾಧಿಪತ್ಯವನ್ನು, ಬಲ್ಲಿದಗೆ = ಸರ್ವಸಮರ್ಥನಾದ ವಾಮನನಿಗೆ, ಅಂಜಿ = ಭಯಭಕ್ತಿಯುಕ್ತನಾಗಿ, ಬರಿಗೈದ = ಬಿಟ್ಟುಕೊಟ್ಟು ತನ್ನ ಸರ್ವಸಂಪತ್ತನ್ನೂ ತ್ಯಜಿಸಿದನು ; ದುರ್ಲಭಮುಕ್ತಿಗೆ = ಕಷ್ಟಸಾಧ್ಯವಾದ ಮುಕ್ತಿಗೆ (ವೈಕುಂಠಕ್ಕೆ), ದೂರವೆಂದೆನಿಸುವ = (ಭೂಮಿಗಿಂತಲೂ) ದೂರವೆಂದು ಹೇಳಲಾಗುವ, ಪಾತಾಳತಳಕ್ಕೆ = **ಸುತಲಲೋಕಕ್ಕೆ**, ಇಳಿದ ಗಡ = ತಳ್ಳಲ್ಪಟ್ಟನು ಕಂಡ್ಯ !

ವಿಶೇಷಾಂಶ :— (೧) **'ತ್ಯಾಗಃ ಕ್ವಚಿತ್ತಸ್ಯ ನ ಮುಕ್ತಿಕಾರಣಂ'** ಎಂಬ ಭಾಗವತೋಕ್ತಿಯ ವಿವರಣೆಯಿದು. ಒಬ್ಬನಿಗೆ ತ್ಯಾಗವಿದೆ (ಸರ್ವಸ್ವವನ್ನೂ ದಾನಮಾಡುವ ತ್ಯಾಗಿಯು), ಆದರೆ ಅವನನ್ನು ಮುಕ್ತಿಕಾರಣನೆಂದು (ಮೋಕ್ಷವನ್ನು ಕೊಡಲು ಸಮರ್ಥನೆಂದು) ಹೇಳ- ಲಾದೀತೇ ? ಅಥವಾ ತ್ಯಾಗವು ದುರ್ಲಭವಾದ ಮೋಕ್ಷಕ್ಕೆ ಸ್ವಯಂ ಸಾಧನವಾದೀತೇ ? ಇಲ್ಲವೆಂಬ ನಿರ್ಣಯವನ್ನು, ವೈಕುಂಠಕ್ಕೆ ಬಹುದೂರವಿರುವ **ಸುತಲಲೋಕಕ್ಕೆ** ತಳ್ಳಲ್ಪಟ್ಟನೆಂಬ ಯುಕ್ತಿಯಿಂದ ಸೂಚಿಸಿರುವರು. ಸ್ವರ್ಗಾಧಿಪತ್ಯವನ್ನು ಅನ್ಯಾಯದಿಂದ ಅಪಹರಿಸಿದ ಅಪರಾಧಕ್ಕೆ **ಯೋಗ್ಯಶಿಕ್ಷೆಯು ಬಲಿನಿಗ್ರಹವು**. ಯದ್ಯಪಿ, ಬಲಿಯು ಭಕ್ತಿಯಿಂದ ಮೂರು ಪಾದದಷ್ಟು ಪ್ರದೇಶವನ್ನು ದಾನಮಾಡಿದನು ; ತನ್ನ ಗುರುಗಳಾದ ಶುಕ್ರಾಚಾರ್ಯರು, ಆ ಮೂರು ಪಾದಗಳಿಂದ ನಿನ್ನ ಸರ್ವಸ್ವವನ್ನೂ ಅಳೆದು ತೆಗೆದುಕೊಳ್ಳುವ ವಿಷ್ಣುವೇ (ಸರ್ವತ್ರ ವ್ಯಾಪ್ತನಾದವನೇ) ಈ **ವಟು ವಾಮನನೆಂದು**, ಎಚ್ಚರಿಸಿದರು. ಆದರೂ ಬಲಿಯು ಹೆದರಲಿಲ್ಲ ; ಹಾಗೆ ವಿಷ್ಣುವಿಗೆ ತನ್ನ ಸರ್ವಸ್ವವೂ ಅರ್ಪಿತವಾದರೆ ತಾನೇ ಧನ್ಯನೆಂದು ಹೇಳಿ, ತನ್ನ ಮೂರು ಪಾದದಷ್ಟು ಭೂಮಿ ಕೊಟ್ಟನೆಂಬ ಮಾತು ಸುಳ್ಳಾದೀತೆಂದು ಬಹಳವಾಗಿ ಅಂಜಿದನು. ವಿಷ್ಣುವು ಒಂದು ಪಾದದಿಂದ ಸಹ ಸರ್ವವನ್ನೂ ವ್ಯಾಪಿಸಲು ಶಕ್ತನೆಂಬುದನ್ನು ಬಲ್ಲ ಬಲಿಯು, ತನ್ನ ಪ್ರತಿಜ್ಞೆಗೆ ಭಂಗ ಬರುವುದೆಂದು ಭಯಪಟ್ಟನು. ಆತನ ಭಯಭಕ್ತಿಗಳಿಗೆ ಮೆಚ್ಚಿ ವಾಮನನು, ಬಲಿಯ ಮಾತನ್ನು ಸತ್ಯಗೊಳಿಸಿದನು — ಮುಂದಿನ ಮನ್ವಂತರದಲ್ಲಿ ಇಂದ್ರಪದವಿಯನ್ನೂ ಅನುಗ್ರಹಿಸಿದನು. ಬಲಿಯ ತ್ಯಾಗವು ತತ್ಕಾಲದಲ್ಲಿ ಮೋಕ್ಷವನ್ನು ದೊರಕಿಸಲಿಲ್ಲ ; ಮುಂದೆ ದೊರೆಯಲಿರುವ ಮೋಕ್ಷಕ್ಕೆ ಭಕ್ತಿಯೇ ಕಾರಣವಲ್ಲದೆ - ತ್ಯಾಗವಲ್ಲ. ಹೀಗೆ ನಿಗ್ರಹಾನುಗ್ರಹಗಳಿಗೆ ಪಾತ್ರನಾದ ಬಲಿಚಕ್ರವರ್ತಿಯು, ಅನ್ಯರಿಗೆ ಏನನ್ನು ಕೊಟ್ಟರೂ, ಮೋಕ್ಷವನ್ನು ಕೊಡಲಾಪನೇ !!

(೨) ಅತಲವಿತಲಾದಿ ಅಧೋಲೋಕಗಳೆಲ್ಲವೂ, **'ಪಾತಾಲ'**ಗಳೆಂದೇ ಕರೆಯಲ್ಪಡುತ್ತವೆ. ಈ ಏಳು ಅಧೋಲೋಕಗಳಲ್ಲಿ ಎಲ್ಲಕ್ಕೂ ಕೆಳಗಿರುವುದನ್ನು **'ಪಾತಾಳ'** ವೆಂದು ಕರೆಯುವ ರೂಢಿಯೂ ಇದೆ. ಆದ್ದರಿಂದ **'ಸುತಳ'ವೂ ಪಾತಾಳವೇ.**

ಎಲ್ಲರಾಯುಷ್ಯವ ಶಿಂಶುಮಾರದೇವ
ಸಲ್ಲೀಲೆಯಿಂದ ತೊಲಗಿಸುವ ।
ಒಲ್ಲೆನಿವರ ನಿತ್ಯ ಮುತ್ತೈದೆಯೆಂದು
ಬಲ್ಲವರೆನ್ನ ಭಜಿಸುವರು ॥ ಶೋಭಾನೆ ॥ ॥ ೨೪ ॥

ಅರ್ಥ:— ಶಿಂಶುಮಾರದೇವ = ಶಿಂಶುಮಾರರೂಪೀ ಶ್ರೀಹರಿಯು, ಎಲ್ಲರ = ಸರ್ವರ, ಆಯುಷ್ಯವ = ಜೀವಿತಕಾಲವನ್ನು, ಸಲ್ಲೀಲೆಯಿಂದ = ಕ್ರೀಡಾಮಾತ್ರದಿಂದ, ತೊಲಗಿಸುವ = ಕೊನೆಗಾಣಿಸುತ್ತಾನೆ ; ನಾನು ಇವರ = (ಶಿಂಶುಮಾರನಿಂದ ಅಂತ್ಯ- ಗೊಳಿಸಲಾಗುವ ಪರಿಮಿತ ಆಯುಷ್ಯವುಳ್ಳ) ಯಾರನ್ನೂ, ಒಲ್ಲೆ = ಒಪ್ಪುವುದಿಲ್ಲ (ವರಿಸ- ಲಾರೆನು); ಬಲ್ಲವರು = ಜ್ಞಾನಿಗಳು, ಎನ್ನ = ನನ್ನನ್ನು , ನಿತ್ಯಮುತ್ತೈದೆಯೆಂದು = (ಆ ಶಿಂಶುಮಾರನ ನಿತ್ಯಭಾರ್ಯಳಾದ) ನಿತ್ಯಸುಮಂಗಳೆಯೆಂದು, ಭಜಿಸುವರು = ಸೇವಿಸು- ತ್ತಾರೆ. (ಸರ್ವಥಾ ಭಾರ್ಯಭಾವಕ್ಕೆ ಎಡೆಗೊಡರು).

ವಿಶೇಷಾಂಶ:— (೧) ಹಗಲುರಾತ್ರಿಗಳು ಸೂರ್ಯನ ಗತಿಯಿಂದಾಗುತ್ತದೆ. ದಿನ-ಪಕ್ಷ-ಸಂವತ್ಸರ ಮೊದಲಾದ ಕಾಲವಿಭಾಗಗಳು ಮನುಷ್ಯನ ಆಯುಷ್ಯವನ್ನು ಅಳೆ ಯುತ್ತವೆ. ಸೂರ್ಯನು ಮತ್ತು ಗ್ರಹನಕ್ಷತ್ರಾದಿಗಳೆಲ್ಲವೂ ಧ್ರುವನ ಸುತ್ತಲೂ ಸುತ್ತುತ್ತವೆ ; ಎಂದರೆ ಸೂರ್ಯಾದಿಗಳ ಗತಿಗಳನ್ನು ಧ್ರುವನು ನಿಯಮಿಸುತ್ತಾನೆ. ಈ ಧ್ರುವನು, ಶಿಂಶುಮಾರನನ್ನು ಆಶ್ರಯಿಸಿದ್ದಾನೆ. ಏವಂ ಚ, ಶಿಂಶುಮಾರನು ಕಾಲನಿಯಾ- ಮಕರಾದ (ಕಾಲಗಣನೆಗೆ ತಮ್ಮ ಗತಿಗಳಿಂದ ಕಾರಣರಾಗಿರುವ) ಸರ್ವರ ಗತಿಗಳನ್ನು ನಿಯಮಿಸುವ ಅನ್ಯನಿಯಾಮಕರಹಿತ ಏಕಮಾತ್ರ ಪ್ರಭುವಾಗಿದ್ದಾನೆ. **'ಶಿಂಶುಮಾರ'** (ಶಿಂಶುಮಾರ= ಚೇಳು)ರೂಪನಾದ ಶ್ರೀವಿಷ್ಣುವಿನ ಕಾಲನಿಯಾಮಕತ್ವಮಹಿಮೆಯು 'ಭಾಗವತ ಪಂಚಮ ಸ್ಕಂಧದಲ್ಲಿ' ನಿರೂಪಿತವಾಗಿದೆ. ''*ಯಸ್ಯ ಪುಚ್ಛಾಗ್ರೇಽವಾರ್ಕ್ ಶಿರಸಃ ಕುಂಡಲೀಭೂತ ದೇಹಸ್ಯ ಧ್ರುವ ಉಪಕಲ್ಪಿತಃ*'' ಎಂದರೆ, ತಲೆಕೆಳಗಾಗಿ ಸುತ್ತಿಕೊಂಡಿರುವ ಶಿಂಶುಮಾರ ದೇಹದ ಕೊಂಡಿಯ ತುದಿಯಲ್ಲಿ (ಬಾಲದ ಕೊನೆಯಲ್ಲಿ) ಧ್ರುವನು ಆಶ್ರಿತನೆಂದು ಹೇಳಲಾಗುತ್ತದೆ. ''ಏತದು ಹೈವ ಭಗವತೋ ವಿಷ್ಣೋಃ ಸರ್ವದೇವತಾ ಮಯಂ ರೂಪಂ ಉಪತಿಷ್ಠೇತ'' – ಈ ಶಿಂಶುಮಾರರೂಪವು, ಭಗವಾನ್ ವಿಷ್ಣುವಿನ ಸರ್ವ ದೇವಾಶ್ರಯವಾದ ರೂಪವು ; ಇದನ್ನು ತ್ರಿಕಾಲದಲ್ಲಿ ಉಪಾಸಿಸಬೇಕೆಂದೂ ಹೇಳಲಾಗಿದೆ. ಆ ರೂಪದ ಉಪಾಸನಾಮಂತ್ರವು ಅದರ ಮಹಿಮೆಯನ್ನೇ ಹೀಗೆ ಹೇಳುತ್ತದೆ :—

'*ನಮೋ ಜ್ಯೋತಿರ್ಲೋಕಾಯ ಕಾಲಾಯನಾಯ ಅನಿಮಿಷಾಮ್ । ಪತಯೇ ಮಹಾಪುರುಷಾಯಾಭಿ ಧೀಮಹಿ ॥*' ಕಾಲನಿಯಾಮಕನೂ, ಸರ್ವದೇವಾಧಿಪತಿಯೂ ಆದ ಮಹಾಪುರುಷನಾದ ಶಿಂಶುಮಾರನನ್ನು ನಮಸ್ಕರಿಸುತ್ತೇನೆ ಎಂದರ್ಥ. ಇದರಿಂದ ಕಾಲನಿಯಾಮಕನಾದ ಶ್ರೀಹರಿಗೆ ಸರ್ವರೂ ಅಧೀನರೆಂದು ಸಿದ್ಧವಾಗುತ್ತದೆ.

ಕಲ್ಪಾಯುಷ್ಯವುಳ್ಳವರೆಂಬ ಸರ್ವರೂ ಬ್ರಹ್ಮದೇವನೂ ಸಹ ಕಾಲವಶರು — ಎಷ್ಟೇ ದೀರ್ಘವಾದರೂ ಪರಿಮಿತಿಯುಳ್ಳ ಕಾಲದಲ್ಲಿ ಮಾತ್ರ ಇರತಕ್ಕವರು. ಶ್ರೀಹರಿಯು ಕಾಲಸ್ವಾಮಿಯಾಗಿ ಅನಂತಕಾಲದಲ್ಲಿ ಸಹ ಇರತಕ್ಕ **ಪರಮನಿತ್ಯಸ್ವರೂಪನು.**

(೨) ಶ್ರೀಹರಿಯ ಈ ಮಹಿಮೆಯನ್ನು ಬಲ್ಲ ಜ್ಞಾನಿಗಳು, ಆತನ ನಿತ್ಯನಿಯತಪತ್ನಿಯಾದ ಶ್ರೀಮಹಾಲಕ್ಷ್ಮಿಯನ್ನು ನಿತ್ಯಮುತ್ತೈದೆಯೆಂದೂ ಬಲ್ಲರು. ಈಕೆಯನ್ನು **'ಜಗನ್ಮಾತೆಯೆಂದೇ'** ಸೇವಿಸುವರು.

ಪ್ರಕೃತಿಯ ಗುಣದಿಂದ ಕಟ್ಟುವಡೆದು ನಾನಾ
ವಿಕೃತಿಗೊಳಗಾಗಿ ಭವದಲ್ಲಿ
ಸುಖದುಃಖಗಳನುಂಬ ಬೊಮ್ಮಾದಿ ಜೀವರು
ದುಃಖಕೆ ದೂರೆನಿಪ ಎನಗೆಣೆಯೆ ॥ ಶೋಭಾನೆ ॥ ॥ ೨೫ ॥

ಅರ್ಥ:— ಪ್ರಕೃತಿಯ ಗುಣದಿಂದ = (ನನ್ನ ಅಧೀನವಾದ) ಪ್ರಕೃತಿಯ ಗುಣಗಳಿಂದ(ಸತ್ವರಜತಮಗಳಿಂದ), ಕಟ್ಟುವಡೆದು = ಬಿಗಿಯಲ್ಪಟ್ಟು(ಬಂಧನವನ್ನು ಹೊಂದಿ), ನಾನಾ ವಿಕೃತಿಗೊಳಗಾಗಿ = ಬಹುಪ್ರಕಾರದ ವಿಕಾರಗಳಿಗೊಳಗಾಗಿ, ಭವದಲ್ಲಿ = ಜನನ-ಮರಣರೂಪ ಸಂಸಾರದಲ್ಲಿ, ಸುಖದುಃಖಗಳನುಂಬ = ಸುಖದುಃಖಗಳನ್ನು ಅನುಭವಿಸುವ, ಬೊಮ್ಮಾದಿ ಜೀವರು = ರುದ್ರಾದಿ ಜೀವರು, ದುಃಖದೂರೆನಿಪ - ದುಃಖಕ್ಕೆ ಬಹುದೂರಳೆಂದು ಪ್ರಸಿದ್ಧಳಾದ (ದುಃಖವು ಯಾವಾಕೆಯ ಸಮೀಪಕ್ಕೆ ಸಹ ಸುಳಿಯಲಾರದೋ - ಮುಟ್ಟುವುದಂತು ಅಶಕ್ಯವೋ), ಎನಗೆ = ನನಗೆ, ಎಣೆಯೆ = ಯೋಗ್ಯರಾದಾರೇ ? (ಸರ್ವಥಾ ಇಲ್ಲ; ಹೀಗಿರಲು ನಾನು ಅವರ್‍ಯಾರನ್ನೂ ವರಿಸಲಾರೆ).

ವಿಶೇಷಾಂಶ:— **''ಬೊಮ್ಮಾದಿಜೀವರು''** ಎಂಬಲ್ಲಿ ಬ್ರಹ್ಮನೇ (ಆದಿ) ಮೊದಲಿಗನಾದ ಅಥವಾ ಉತ್ಪತ್ತಿಗೆ ಕಾರಣನಾದ ಇತರ (ರುದ್ರಾದಿ) ಜೀವರು ವಿವಕ್ಷಿತರು - ಬ್ರಹ್ಮನನ್ನು ಬಿಟ್ಟು ಇತರರೆಂದರ್ಥ. ಇಲ್ಲಿ ಬ್ರಹ್ಮನೊಂದಿಗೆ ವಾಯುದೇವರನ್ನೂ, ಅವರ ಪತ್ನಿಯರಾದ ಸರಸ್ವತೀ ಭಾರತಿಯರನ್ನೂ ಗ್ರಹಿಸಬೇಕು. *'ಅತಿರೋಹಿತವಿಜ್ಞಾನಾತ್ ವಾಯುರಪ್ಯಮೃತಃ ಸ್ಮೃತಃ'* (ಈಶಾವಾಸ್ಯಭಾಷ್ಯ) ಎಂದೂ ತಿರೋಧಾನ ಹೊಂದದ (ಮರೆಯಾಗದ) ವಿಜ್ಞಾನವುಳ್ಳ ಬ್ರಹ್ಮ-ವಾಯುಗಳು ಮುಕ್ತರೆಂದೇ ಕರೆಯಲ್ಪಡುವರೆಂದು ಹೇಳಲಾಗಿದೆ. ಆದರೂ ಅವರಿಗೆ ಪ್ರಾಕೃತವಾದ ಲಿಂಗದೇಹಸಂಬಂಧವಿದೆ — ಇದ್ದರೂ ಅದು ಸುಟ್ಟು ಹೋದ ಬಟ್ಟೆಯಂತೆ ಪ್ರಭಾವರಹಿತವಾದ ಸ್ಥಿತಿಯಲ್ಲಿದೆ — ಈ ಕಾರಣದಿಂದ ದುಃಖಸ್ಪರ್ಶವಿಲ್ಲದವರು. *'ಅಜ್ಞಾನಂ ತು ಚತುರ್ವಾರಂ ದ್ವಿವಾರಂ ಭಯಮೇವ ಚ। ಶೋಕೋಽಪಿತಾವಾನ್'* ಇತ್ಯಾದಿ (ಭಾಗ. ಷಷ್ಠ ತಾತ್ಪರ್ಯ) ವಾಕ್ಯಗಳಲ್ಲಿ ಹೇಳಲ್ಪಡುವ ಅಜ್ಞಾನನಿಮಿತ್ತಕವಾದ ಭಯದುಃಖಗಳು, ಬಂಧಕಭಾವರೂಪ ಅಜ್ಞಾನದಿಂದ

ಹುಟ್ಟಿದವುಗಳಲ್ಲ. 'ನೈವ ಬ್ರಹ್ಮಾದೇರಸ್ತಿ ಸಾ ಕ್ವಚಿತ್' (ಶ್ರುತಿಗೀತಾತಾತ್ಪರ್ಯ) ಎಂಬಲ್ಲಿ ಅವರಿಗೆ ಭಾವರೂಪ ಅಜ್ಞಾನವಿಲ್ಲೆಂದು ಹೇಳಲಾಗಿದೆ. ನಿತ್ಯಮುಕ್ತರಿಂದ ಭಿನ್ನರೆಂಬ ವೈಲಕ್ಷಣ್ಯವನ್ನು ತೋರಿಸುವ ಈ ದುಃಖಪ್ರದರ್ಶನವು, ಲಕ್ಷ್ಮೀದೇವಿಯ ಇಚ್ಛೆಯಿಂದಲೇ ಬಾಹ್ಯಾಂತಃಕರಣಮಾತ್ರದಲ್ಲಿ ಉಂಟಾಗುವ ಅತ್ಯಲ್ಪವಿಕಾರದಿಂದ ಉಂಟಾದುದು. ಅತ ಏವ ''ದುಃಖಸ್ಪೃಷ್ಟ' ರೆಂಬ ಜೀವಕೋಟಿಯಲ್ಲಿ ಸೇರುತ್ತಾರೆ. ''ದುಃಖಾಸ್ಪೃಷ್ಟಾ ರಮಾ ನಿತ್ಯಂ'' ಇತ್ಯಾದಿಗಳು ಲಕ್ಷ್ಮೀದೇವಿಗೆ ಎಂದೂ ದುಃಖಸ್ಪರ್ಶವೇ (ಯಾವ ಪ್ರಕಾರದಿಂದಲೂ) ಇಲ್ಲವೆಂದು ಸಾರುತ್ತವೆ.

ಒಬ್ಬನಾವನ ಮಗ ಒಬ್ಬನಾವನ ಮೊಮ್ಮ
ಒಬ್ಬನಾವನಿಗೆ ಶಯನಾಹ ।
ಒಬ್ಬನಾವನ ಪೊರುವ ಇಬ್ಬರಾವನಿಗಂಜಿ
ಅಬ್ಬರದಲಾವಾಗ ಸುಳಿವರು ॥ ಶೋಭಾನೆ ॥ ॥ ೨೬ ॥

ಅರ್ಥ:— ಒಬ್ಬನು = ಬ್ರಹ್ಮನು, ಅವನ ಮಗ = ಯಾರ ಮಗನೋ, ಒಬ್ಬನು = ರುದ್ರನು, ಅವನ ಮೊಮ್ಮ = ಯಾರ ಮೊಮ್ಮಗನೋ, ಒಬ್ಬನು = ಶೇಷದೇವನು, ಅವ-ನಿಗೆ = ಯಾರಿಗೆ, ಶಯನಾಹ = ಹಾಸಿಗೆಯಾಗಿರುವನೋ, ಒಬ್ಬನು = ಗರುಡನು, ಆವನ ಪೊರುವ = ಯಾರನ್ನು ಹೊರುವನೋ (ಯಾರ ವಾಹನನಾಗಿರುವನೋ), ಇಬ್ಬರು = ಇಂದ್ರ, ಕಾಮರು (ಅಥವಾ ದ್ವಾರಪಾಲಕರಾದ ಜಯ ವಿಜಯರು), ಆವನಿಗೆ = ಯಾರಿಗೆ, ಅಂಜಿ = ಹೆದರಿ (ಭಕ್ತಿಜನಿತ ಭಯದಿಂದ), ಅಬ್ಬರದಲ್ಲಿ = ಬೆಚ್ಚುತ್ತ, ಆವಾಗ = ಸದಾ (ಯಾವಾಗಲೂ), ಸುಳಿವರು = ಹತ್ತಿರಕ್ಕೆ ಬರುವರೋ (ಯಾವ ಕಾಲಕ್ಕೆ ಏನಪ್ಪಣೆಯೋ ಎಂದು ಸಮೀಪದಲ್ಲಿ ಸುಳಿದಾಡುತ್ತಿರುವರೋ), **'ಅವನೊಬ್ಬನೇ'** ಇತ್ಯಾದಿ ಮುಂದಿನ ನುಡಿಯಿಂದ ವಾಕ್ಯಪೂರ್ಣವಾಗುತ್ತದೆ.

ಒಬ್ಬನಾವನ ನಾಮಕಂಜಿ ಬೆಚ್ಚುವ ಗಾಢ
ಸರ್ಬರಿಗಾವ ಅಮೃತವ ।
ಸರ್ಬರಿಗಾವ ಅಮೃತವುಣಿಸುವ ಅವ-
ನೊಬ್ಬನೆ ನಿರನಿಷ್ಟ ನಿರವದ್ಯ ॥ ಶೋಭಾನೆ ॥ ॥ ೨೭ ॥

ಅರ್ಥ:— ಒಬ್ಬನು = ಕಲಿಯು, ಅವನ = ಯಾರ, ನಾಮಕೆ = ಹೆಸರಿಗೆ (ನಾಮಮಾತ್ರದಿಂದ), ಅಂಜಿ = ಹೆದರಿ, ಗಾಢಬೆಚ್ಚುವ = ಅತ್ಯಂತವಾಗಿ ನಡುಗುವನೋ ಮತ್ತು, ಆವ = ಯಾರು, ಸರ್ಬರಿಗೆ = ಸರ್ವಸಜ್ಜನರಿಗೆ, ಅಮೃತ ಉಣಿಸುವ = ಮೋಕ್ಷ ವನ್ನು ಕೊಡುವನೋ (ನಿತ್ಯಾನಂದಭೋಗವನ್ನುಂಟುಮಾಡುವನೋ), ಅವನೊಬ್ಬನೆ =

ಆ ಶ್ರೀಹರಿಯೊಬ್ಬನೇ, ನಿರವದ್ಯ = ನಿರ್ದೋಷನು, ನಿರನಿಷ್ಟ= ತನಗೆ ಅಪ್ರಿಯವಾದುದನ್ನು ಎಂದೂ ಹೊಂದದವನು.

ವಿಶೇಷಾಂಶ:— 'ಒಬ್ಬನಾವನ ನಾಮಕಂಜಿ ಬೆಚ್ಚುವ' ಎಂಬುದರಿಂದ, ಸಕಲದುಃಖಗಳಿಗೆ ಕಾರಣವಾದ ಪಾಪಕರ್ಮಗಳಿಗೆ ಪ್ರೇರಕನಾದ ಪರಿವಾರಸಮೇತನಾದ ಕಲಿಯು ನಾಮೋಚ್ಚಾರಣಮಾತ್ರದಿಂದ ತೊಲಗುವನೆಂದು ಹೇಳಿ, ''*ನಾಮ್ನೋಽಸ್ತಿ ಯಾವತೀ ಶಕ್ತಿಃ ಪಾಪನಿರ್ಹರಣೇ ಹರೇಃ । ತಾವತ್ಕರ್ತುಂ ನ ಶಕ್ನೋತಿ ಪಾತಕಂ ಪಾತಕೀ ಜನಃ ।*'' ಇತ್ಯಾದಿಗಳಲ್ಲಿ ಪ್ರಸಿದ್ಧವಾದ ನಾಮೋಚ್ಚಾರಣಮಹಿಮೆಯನ್ನು ಸೂಚಿಸುತ್ತಾರೆ. 'ನಾಮಕಂಜಿ ಬೆಚ್ಚುವನು' ಸ್ವದೂತ ಸಹಿತ ಯಮದೇವನೂ ಹೌದು ; ಅಜಾಮಿಳನನ್ನು ಎಳೆತರಲು ಹೋದ ಯಮದೂತರಿಂದ ಅವರಿಗೆ ವಿಷ್ಣುದೂತರಿಂದ ಒದಗಿದ ಪರಾಜಯವನ್ನು ತಿಳಿದು, ''*ದ್ರಷ್ಟುಂ ಚ ಬಿಭ್ಯತಿ ತತಃ ಪ್ರಭೃತಿ ಸ್ಮ ರಾಜನ್*'' (ಭಾಗವತ) ವಿಷ್ಣು ಭಕ್ತರನ್ನು ನೋಡಲು ಸಹ ಹೆದರುವನು.

ನಿರನಿಷ್ಟ ನಿರವದ್ಯ ಎಂಬ ಶ್ರುತ್ಯರ್ಥವ
ಒರೆದು ನೋಡಲು ನರಹರಿಗೆ
ನರಕಯಾತನೆ ಸಲ್ಲ ದುರಿತಾತಿದೂರನಿಗೆ
ಮರುಳೆ ! ಮನಬಂದಂತೆ ನುಡಿಯದಿರು ॥ ಶೋಭಾನೆ ॥ ॥ ೨೮ ॥

ಅರ್ಥ:— ನಿರನಿಷ್ಟನಿರವದ್ಯ ಎಂಬ ಶ್ರುತ್ಯರ್ಥವ— ನಿರನಿಷ್ಟ= ಅಪ್ರಿಯರಹಿತ, ನಿರವದ್ಯ = ಅಪ್ರಿಯಗಳ ಪ್ರಾಪ್ತಿಗೆ ಮೂಲಕಾರಣವಾದ ಅಸ್ವಾತಂತ್ರ್ಯ, ಅಜ್ಞಾನ, ದುಃಖಾದಿ ದೋಷಗಳಿಲ್ಲದವನು, ಇತ್ಯಾದಿ ಹೇಳುವ, ಶ್ರುತ್ಯರ್ಥವ = ಶ್ರುತಿತಾತ್ಪರ್ಯವನ್ನು, ಒರೆದು ನೋಡಲು = ಒರೆಗೆ ಹಚ್ಚಿ (ಚೆನ್ನಾಗಿ ವಿಮರ್ಶಿಸಿ) ತಿಳಿದರೆ, ನರಹರಿಗೆ = ಸರ್ವರ ದುರಿತಾದಿನಿವರ್ತಕ ಶ್ರೀಹರಿಗೆ, ನರಕಯಾತನೆ = ತಿರ್ಯಗ್ಯೋನಿ ಮುಂತಾದ ಕಾರಣಗಳಿಂದ ಸಂಭವಿಸುವ ದುಃಖವು, ಸಲ್ಲ= ಕೂಡುವುದಿಲ್ಲ (ಯುಕ್ತಿಯಿಂದ ಸಹ ಸಂಭಾವ್ಯವೆನಿಸುವುದಿಲ್ಲ); ದುರಿತಾತಿದೂರನಿಗೆ = ಸಕಲ ದುಃಖಕಾರಣವಾದ ದುರಿತಗಳಿಂದ (ಪಾಪಲೇಪವಿಲ್ಲವನಾದ್ದರಿಂದ) ಅತಿದೂರನಾದ (ಪಾಪಗಳು ಆತನ ಸಮೀಪಕ್ಕೆ ಸಹ ಸುಳಿಯಲಾರವು) ಶ್ರೀಹರಿಗೆ, ಮರುಳೆ = ಹೇ ಹುಚ್ಚ! ಮನಬಂದಂತೆ = ಸ್ವೇಚ್ಛೆಯಾಗಿ, (ವಿವೇಚನೆಯಿಲ್ಲದೇ), ನುಡಿಯದಿರು = (ದುಃಖಾದಿ ದೋಷಗಳನ್ನು ಹಚ್ಚುವ ಜೀವೈಕ್ಯಾದಿ ಮಾತುಗಳನ್ನು) ಉಸಿರಬೇಡ.

ಒಂದೊಂದು ಗುಣಗಳು ಇದ್ದಾವು ಇವರಲ್ಲಿ
ಸಂದಣಿಸಿವೆ ಬಹು ದೋಷ

ಕುಂದೆಳ್ಳಷ್ಟಿಲ್ಲದ ಮುಕುಂದನೇ ತನಗೆಂದು
ಇಂದಿರೆ ಪತಿಯ ನೆನೆದಳು ॥ ಶೋಭಾನೆ ॥ ॥ ೨೯ ॥

ಅರ್ಥ:— ಇವರಲ್ಲಿ = ದೋಷಿಗಳೆಂದು ಈವರೆಗೆ ಚಿಂತಿಸಿದವರಲ್ಲಿ ಒಂದೊಂದು ಗುಣಗಳು = ಐಶ್ವರ್ಯ, ಸೌಂದರ್ಯ, ತಪಸ್ಸು ಮೊದಲಾದವುಗಳಲ್ಲಿ ಒಂದೊಂದು ಗುಣ, ಇದ್ದಾವು = ಇರಬಹುದು (ಇವೆ), ಆದರೆ, ಬಹುದೋಷ = ಬಹುದೋಷಗಳು, ಸಂದಣಿಸಿವೆ = ತುಂಬಿಕೊಂಡಿವೆ ; ಕುಂದು = ದೋಷ, ಕೊರತೆಗಳು (ದೋಷ ಮತ್ತು ಅಪೂರ್ಣತ್ವಗಳು), ಎಳ್ಳಷ್ಟಿಲ್ಲದ = ಲೇಶಮಾತ್ರವೂ ಇರದ (ಎಳ್ಳು-ಕಾಳಿನಷ್ಟು ಸಹ ಇಲ್ಲದ), ಮುಕುಂದನೆ = ಮೋಕ್ಷಪ್ರದನಾದ ಶ್ರೀಹರಿಯೇ, ತನಗೆಂದು = ತನಗೆ ಯೋಗ್ಯನೆಂದು, ಇಂದಿರೆ = ಲಕ್ಷ್ಮೀದೇವಿಯು, ಪತಿಯ = ತನ್ನ ನಿತ್ಯನಿಯತ-ಪತಿಯನ್ನೇ, ನೆನೆದಳು = ಚಿಂತಿಸಿದಳು.

ವಿಶೇಷಾಂಶ:— ಪತಿಯನ್ನು ಆರಿಸಿಕೊಳ್ಳಲುದ್ಯುಕ್ತಳಾದಂತೆ ವಿಡಂಬನೆ ಮಾಡುತ್ತಾ ದೇವತೆಗಳ ಮಧ್ಯದಲ್ಲಿದ್ದ **'ಅಜಿತ'**ನಾಮಕ ಶ್ರೀಹರಿಯನ್ನೇ ತನ್ನ ನಿಜಪತಿಯೆಂದರಿತ ಲಕ್ಷ್ಮೀದೇವಿಯು, ಆತನೇ ಸರ್ವೋತ್ತಮನೆಂಬುದನ್ನು ಪ್ರಕಟಿಸುತ್ತಾ ಆತನ ಕೊರಳಿಗೆ ಮಾಲೆಯನ್ನು ಹಾಕಿ ವರಿಸುವೆನೆಂದು ನಿಶ್ಚಯಿಸಿದಳು.

ದೇವರ್ಷಿವಿಪ್ರರ ಕೊಂದು ತನ್ನುದರದೊಳು
ತೀವಿರ್ದಹರಿಗೆ ದುರಿತವ
ಭಾವಜ್ಞರೆಂಬರೆ ಆಲದೆಲೆಯ ಮೇಲೆ
ಶಿವನ ಲಿಂಗವ ನಿಲಿಸುವರೆ ॥ ಶೋಭಾನೆ ॥ ॥ ೩೦ ॥

ಅರ್ಥ:— ದೇವರ್ಷಿವಿಪ್ರರ = ದೇವತೆಗಳು, ಋಷಿಗಳು, ಬ್ರಾಹ್ಮಣರು (ಎಂಬ ಯಾವ ಭೇದವೂ ಇಲ್ಲದೇ) ಎಲ್ಲರನ್ನೂ, ಕೊಂದು = ಪ್ರಳಯಕಾಲದಲ್ಲಿ ಸಂಹರಿಸಿ, ತನ್ನುದರದೊಳು = ತನ್ನ ಹೊಟ್ಟೆಯಲ್ಲಿ, ತೀವಿರ್ದಹರಿಗೆ = ತುಂಬಿಕೊಂಡಿದ್ದ ಹರಿಗೆ, ಭಾವಜ್ಞರು = ತತ್ವಜ್ಞಾನಿಗಳು (ಸೃಷ್ಟಿಸಂಹಾರಾದಿಗಳನ್ನು ನಿರ್ಲಿಪ್ತನಾಗಿ = ಸ್ವಪ್ರಯೋ-ಜನಲೇಶವೂ ಇಲ್ಲದೆ, ಜೀವರಿಗೆ ಅವರವರ ಗತಿಗಳನ್ನು ಹೊಂದಿಸಲಿಕ್ಕೆ ಲೀಲೆಯಿಂದ ನಡೆಸುವನೆಂದು ತಿಳಿದ ಜ್ಞಾನಿಗಳು) ದುರಿತವ ಎಂಬರೆ = ದೇವಾದಿಗಳ ಸಂಹಾರದಿಂದ ಪಾಪವನ್ನು ಹೇಳುವರೇ ? ಆಲದೆಲೆಯ ಮೇಲೆ = ವಟಪತ್ರಶಾಯಿಯಾದ ಶ್ರೀವಿಷ್ಣುವಿನ ಸ್ಥಾನದಲ್ಲಿ, ಶಿವನ ಲಿಂಗವ = ಶಿವಲಿಂಗವನ್ನು, ನಿಲಿಸುವರೆ = (ಇರಿಸುವರೇ) ಮಲಗಿಸು-ವರೇ ? (ಶಿವಸರ್ವೋತ್ತಮತ್ವವನ್ನು ತಿಳಿಯುವರೇ ? ಇಲ್ಲ, ವಿಷ್ಣು ಸರ್ವೋತ್ತಮತ್ವವನ್ನು ಸರ್ವಥಾ ತೊರೆಯುವುದಿಲ್ಲ).

ಹಸಿತೃಷೆಜರೆಮರಣರೋಗರುಜಿನಗಳೆಂಬ
ಅಸುರಪಿಶಾಚಿಗಳ ಭಯವೆಂಬ
ವ್ಯಸನ ಬರಬಾರದು ಎಂಬ ನಾರಾಯಣಗೆ
ಪಶು ಮೊದಲಾಗಿ ನೆನೆಯದು ॥ ಶೋಭಾನೆ ॥ ॥ ೩೧ ॥

ಅರ್ಥ:— ಹಸಿ = ಹಸಿವು, ತೃಷೆ = ನೀರಡಿಕೆ, ಜರೆ = ಮುಪ್ಪು, ಮರಣ = ಮೃತ್ಯು, ರೋಗರುಜಿನಗಳೆಂಬ = ರೋಗ ಆಘಾತಗಳೆಂಬ ಮತ್ತು ಅಸುರ ಪಿಶಾಚಿಗಳ ಭಯವೆಂಬ, ವ್ಯಸನ = ದುಃಖವು (ಯಾವುದೂ), ಬರಬಾರದು = ಭಕ್ತರಿಗೆ ಉಂಟಾಗ-ಬಾರದು, ಎಂಬ = ಎಂದು ಆಶಿಸುವ (ಸದಾ ಅನುಗ್ರಹಿಸಲು ಸಿದ್ಧನಾದ, ಕರುಣಾ-ಸಮುದ್ರನಾದ), ನಾರಾಯಣಗೆ = ನಾರಾಯಣನನ್ನು, ಪಶು ಮೊದಲಾಗಿ = ಪಶು-ಗಳಂತಿರುವ ಅಜ್ಞಾನಿಗಳು ಮತ್ತು ಮೃಗವರ್ಗವು, ನೆನೆಯದು = ಸ್ಮರಿಸುವುದಿಲ್ಲ (ನಾರಾಯಣನಿಗೆ ಸ್ಮರಣರೂಪ ಭಕ್ತಿಯನ್ನೂ ಸಲ್ಲಿಸುವುದಿಲ್ಲವಷ್ಟೆ).

ಸರ್ವದುಃಖಗಳ ಪರಿಹಾರಕ್ಕಾಗಿ ನಿರ್ದುಃಖನಾದ ನಾರಾಯಣನನ್ನೇ ಶರಣು ಹೊಂದಬೇಕೆಂದು ಮುಂದಿನ ನುಡಿಗಳಲ್ಲಿ ಉಪದೇಶಮಾಡುವರು.

ತಾ ದುಃಖಿಯಾದರೆ ಸುರರರಾತಿಯ ಕಳೆದು
ಮೋದವೀವುದಕ್ಕೆ ಧರೆಯೊಳಗೆ
ಮಾಧವ ಬಾಹನೆ ಕೆಸರೊಳು ಮುಳುಗಿದ ಪರರ
ಬಾಧಿಪ ಕೆಸರ ಬಿಡಿಸೋನೆ ॥ ಶೋಭಾನೆ ॥ ॥ ೩೨ ॥

ಅರ್ಥ:— ತಾ = ತಾನೆ, ದುಃಖಿಯಾದರೆ = ದುಃಖವುಳ್ಳವನಾದರೆ, ಮಾಧವ = ಆ ಲಕ್ಷ್ಮೀಪತಿಯು, ಸುರರರಾತಿಯ = ದೇವತೆಗಳ ಶತ್ರುಗಳನ್ನು, ಕಳೆದು = ಪರಿಹರಿಸಿ (ಕೊಂದು), ಮೋದವೀವುದಕ್ಕೆ = (ದೇವತೆಗಳಿಗೆ ಅಸುರರಿಂದ ಉಂಟಾಗುವ ನಾನಾ ಪೀಡೆಗಳನ್ನು ಕಳೆದು) ಸುಖವನ್ನುಂಟುಮಾಡುವುದಕ್ಕೆ, ಧರೆಯೊಳಗೆ = ಭೂಮಿಯಲ್ಲಿ, ಬಾಹನೆ = ಅವತರಿಸಿ ಬರುವನೆ ? ಕೆಸರೊಳು = ಕೆಸರಿನಲ್ಲಿ, ಮುಳುಗಿದ = ಮುಳುಗಿದ-ವನು, ಪರರ ಬಾಧಿಪ = ಅನ್ಯರಿಗೆ ಬಾಧಕವಾದ, (ಅನ್ಯರನ್ನು ತನ್ನೊಳಗೆ ಸೆಳೆದು ಕೊಳ್ಳುವ), ಕೆಸರ = ಕೆಸರನ್ನು, ಬಿಡಿಸೋನೆ = ಬಿಡಿಸಬಲ್ಲನೆ ? (ಪರಿಹರಿಸಲು ಸಮರ್ಥನಾಗುವನೆ ?) ಸರ್ವಥಾ ಇಲ್ಲ. (ಶ್ರೀಹರಿಯಾದರೋ ನಾನಾ ಅವತಾರಗಳನ್ನೆತ್ತಿ ಸಜ್ಜನರ ದುಃಖಗಳನ್ನು ಪರಿಹರಿಸಿ ರಕ್ಷಿಸುವನು. ಆದ್ದರಿಂದ ಆತನು ನಿರ್ದುಃಖನೆಂದು ಸಿದ್ಧವಾಗುತ್ತದೆಂಬ ಯುಕ್ತಿಯು ಸೂಚಿತವೆಂದು ತಿಳಿಯಬೇಕು.)

ಬೊಮ್ಮನಾಲಯದಲ್ಲಿ ಇದ್ದವಗೆ ಲಯವುಂಟೆ
ಜನ್ಮ ಲಯವಿಲ್ಲದವನಿಗೆ

ಅಮ್ಮಿಯನುಣಿಸಿ ಯಶೋದೆಯಾಗಿದ್ದಳೆ
ಅಮ್ಮ ಇವಗೆ ಹಸಿತೃಷೆಯುಂಟೆ ॥ ಶೋಭಾನೆ ॥ ॥ ೩೩ ॥

ಅರ್ಥ:— ಬೊಮ್ಮನಾಲಯದಲ್ಲಿ = ವೈಕುಂಠದಲ್ಲಿ, ಇದ್ದವಗೆ = ಇರುವವನಿಗೆ ಲಯವುಂಟೆ = ಮರಣವುಂಟೆ? (ಇಲ್ಲ), ಜನ್ಮಲಯವಿಲ್ಲದವನಿಗೆ = ಜನನ ಮರಣಗಳೇ ಇಲ್ಲದ (ನಿತ್ಯಮುಕ್ತನಾದ) ಶ್ರೀಕೃಷ್ಣನಿಗೆ, ಅಮ್ಮಿಯನುಣಿಸಿ = ಸ್ತನ್ಯಪಾನಮಾಡಿಸಿ, ಯಶೋದೆ = ಯಶೋದಾದೇವಿಯು, ಇವಗೆ = ಈತನಿಗೆ, ಅಮ್ಮ = ತಾಯಿಯು, ಆಗಿದ್ದಳೆ = ಆಗಿದ್ದಳೇನು ? (ಸಾಕಿಸಲಹಿದಳೆನ್ನಬಹುದೆ ?) ಇವಗೆ = ಈ ಶ್ರೀಹರಿಗೆ, ಹಸಿತೃಷೆಯುಂಟೆ = ಹಸಿವು ನೀರಡಿಕೆಗಳೆಂಬುವು ಉಂಟೇ ? (ಇಲ್ಲವೇ ಇಲ್ಲ).

ಆಗಲೇ ಭಕ್ಷ್ಯಭೋಜ್ಯವನಿತ್ತು ಪೂಜಿಸುವ
ಯೋಗಿಗೆ ಉಂಟೇ ಧನಧಾನ್ಯ
ಆಗ ದೊರಕೊಂಬುದೇ ಪಾಕಮಾಡುವ ವಹ್ನಿ
ಆಗಲೆಲ್ಲಿಹುದು ವಿಚಾರಿಸಿರೋ ॥ ಶೋಭಾನೆ ॥ ॥ ೩೪ ॥

ಅರ್ಥ:— ಭಕ್ಷ್ಯಭೋಜ್ಯವನಿತ್ತು = ಭಕ್ಷ್ಯಭೋಜ್ಯ (ಷಡ್ರಸೋಪೇತವಾದ ಚತುರ್ವಿಧ ಆಹಾರ) ಗಳನ್ನು ಸಮರ್ಪಿಸಿ, ಪೂಜಿಸುವ = (ಶ್ರೀಹರಿಯನ್ನು) ಸೇವಿಸುವ, ಯೋಗಿಗೆ = ಭಕ್ತನಿಗೆ, ಆಗಲೇ = ಪ್ರಳಯದ ಆ ಕಾಲದಲ್ಲಿ, ಧನ ಧಾನ್ಯ = (ಅರ್ಪಿಸುವ ವಸ್ತುಗಳ ಸಿದ್ಧತೆಗೆ ಅವಶ್ಯಕವಾದ) ಧನಧಾನ್ಯಗಳು, ಉಂಟೇ = ಇವೆಯೆ ? ಆಗ = ಆ ಕಾಲದಲ್ಲಿ, ಪಾಕಮಾಡುವ ವಹ್ನಿ = ಪಾಕ ಮಾಡಲು ಬೇಕಾದ ಅಗ್ನಿಯು, ದೊರಕೊಂಬುದೇ =- ದೊರಕುವುದೇ ? ಆಗಲಿ = ಬೇರಾವ ಸಾಧನೆಗಳಾಗಿ (ಆಗ), ಎಲ್ಲಿಹುದು = ಎಲ್ಲಿರುವುದು, ವಿಚಾರಿಸಿರೋ = ತಿಳಿದು ನೋಡಿರಿ. **ಅಥವಾ** ಆಗಲೇ - ತತ್ಕಾಲದಲ್ಲೇ ಭಕ್ಷ್ಯಭೋಜ್ಯವಿತ್ತು ಪೂಜಿಸುವ = (ಸಿದ್ಧಾನ್ನವಾಗಬಾರದು ; ಮಾಡಿ ಬಡಿಸುವುದಾಗಬಾರದೆಂದು ನಿರ್ಬಂಧಿಸಿ ತನ್ನ ಹಸಿವೆಯನ್ನು ಪರಿಹರಿಸಲು ಕೇಳಿದ ದೂರ್ವಾಸರಿಗೆ ತನ್ನ ಬೆರಳುಗಳಿಂದ ಚತುರ್ವಿಧಾನ್ನವನ್ನು ನಿರ್ಮಿಸಿ) ಸತ್ಕರಿಸಿ ತೃಪ್ತಿ-ಗೊಳಿಸುವ, ಯೋಗಿಗೆ = ಸಮರ್ಥನಿಗೆ, ಧನಧಾನ್ಯವುಂಟೇ = ಧನಧಾನ್ಯಗಳು ಸಹಾ-ಯಕವಾದುವೇ, ಆಗ ಅವು ದೊರಕೊಂಬುದೇ = ಆಗ ಅವು ಉಪಯೋಗವಾಗು ವುವೇ ? ಪಾಕ ಮಾಡುವ ವಹ್ನಿ = ಅಗ್ನಿಯು, ಆಗೆಲ್ಲಿಹುದು = ಎಲ್ಲಿತ್ತು? ವಿಚಾರಿಸಿರೊ = (ಇಂಥವನಿಗೆ ಹಸಿವೆ, ತೃಷೆಗಳೆ ?) ವಿಚಾರಮಾಡಿರಿ.

ವಿಶೇಷಾಂಶ:— (೧) ಕ್ಷುತ್ತೃಟ್ ತ್ರಿಧಾತುಭಿರಿಮಾ ಮುಹುರರ್ದ್ಯಮಾನಾಃ *ಶೀತೋಷ್ಣ ವಾತವರ್ಷೈರಿತರೇತರಾಚ್ಚ। ಕಾಮಾಗ್ನಿನಾಽಚ್ಯುತ ರುಷಾ ಚ ಸುದುರ್ಭರೇಣ*

ಸಂಪಶ್ಯತೋ ಮನ ಉರುಕ್ರಮ ಸೀದತೇ ಮೇ ॥ (ಭಾಗವತ) ಬ್ರಹ್ಮದೇವರು ಪರಮಾತ್ಮನಲ್ಲಿ ವಿಜ್ಞಾಪಿಸಿಕೊಳ್ಳುತ್ತಾರೆ:— ಹೇ ಅಚ್ಯುತ ! ಹಸಿವು–ನೀರಡಿಕೆಗಳಿಂದಲೂ, ವಾತಪಿತ್ಥಶ್ಲೇಷ್ಮಗಳೆಂಬ ತ್ರಿಧಾತುಗಳಿಂದಲೂ, ಶೀತ–ಉಷ್ಣ–ಮಳೆ–ಗಾಳಿಗಳೆಂಬ ದ್ವಂದ್ವ ಸಮುದಾಯಗಳಿಂದಲೂ, ಅಸಹ್ಯಕಾಮಾಗ್ನಿಯಿಂದಲೂ ಕೋಪದಿಂದಲೂ ಪದೇ ಪದೇ ಪೀಡಿತರಾದ ಈ ಸಂಸಾರಿ ಜೀವರನ್ನು ಕಂಡು ನನ್ನ ಮನಸ್ಸು ವಿಶೇಷ ದುಃಖಿಸುತ್ತದೆ. ಇವೆಲ್ಲವೂ ಸಂಸಾರಿಜೀವರಿಗೆ ಮಾತ್ರ. ಈ ಎಲ್ಲದರಿಂದ ದೂರನಾದವನು ಶ್ರೀಹರಿಯು ; ಜನನಮರಣರಹಿತನು – ನಿರ್ದೋಷನು.

(೨) ಪ್ರಳಯಕಾಲದಲ್ಲಿ ಪ್ರಸಿದ್ಧ ವಿಷಯಭೋಗಗಳಿಗೆ ಅವಕಾಶವೇ ಇಲ್ಲ ; ಯಾವ ಸಾಧನಸಾಮಗ್ರಿಗಳೂ ಇಲ್ಲ, ಇವು ಯಾವುಗಳ ಅವಶ್ಯಕತೆಯೂ ಇಲ್ಲದೇ ಸುಖಪೂರ್ಣನಾದವನು ಶ್ರೀಹರಿಯು.

ಭಕ್ತರು ಭಕ್ತಿಯಿಂದ ಅರ್ಪಿಸುವ ನಾನಾ ಪೂಜಾವಸ್ತುಗಳಿಂದ ಅವನಿಗೇನೂ ಆಗಬೇಕಾದುದಿಲ್ಲ – ಸ್ವಯಂ ಪೂರ್ಣಾನಂದನೂ ನಿತ್ಯತೃಪ್ತನೂ ಆಗಿದ್ದಾನೆ. ಪ್ರಳಯ ಕಾಲದಲ್ಲಿ ರಮಾದೇವಿಯ ಆಲಿಂಗನದಿಂದ ಸಹ, ಶ್ರೀಹರಿಯು ಆನಂದಿಸುವುದಿಲ್ಲ ; ಕಿಂತು, ಆಕೆಗೆ ಆನಂದವನ್ನು ಕೊಡಲು ಆಲಂಗಿಸುತ್ತಾನೆಂದು ಮುಂದಿನ ನುಡಿಗಳಲ್ಲಿ ಹೇಳುವುದನ್ನೂ ಇಲ್ಲಿ ಗಮನಿಸಬೇಕು.

(೩) ಇಚ್ಛಾಮಾತ್ರದಿಂದ ಸಕಲರ ಹಸಿವೆ, ತೃಷೆಗಳನ್ನು ಕಳೆದು (ಸಕಲಾಭೀಷ್ಟ-ಗಳನ್ನಿತ್ತು) ತೃಪ್ತಗೊಳಿಸುವ ನಿತ್ಯತೃಪ್ತನಿಗೆ ಹಸಿವೆ ತೃಷೆ ಮೊದಲಾದ ದೋಷಗಳು ಸರ್ವಥಾ ಕೂಡುವುದಿಲ್ಲವೆಂಬ ಯುಕ್ತಿಯೂ ಸೂಚಿತವೆಂದು ತಿಳಿಯಬೇಕು.

ರೋಗವನೀವ ವಾತಪಿತ್ಥಶ್ಲೇಷ್ಮ
ಆಗ ಕೂಡುವುದೇ ರಮೆಯೊಡನೆ
ಭೋಗಿಸುವವಗೆ ದುರಿತವ ನೆನೆವರೆ
ಈ ಗುಣನಿಧಿಗೆ ಎಣೆಯುಂಟೆ ॥ ಶೋಭಾನೆ ॥ ॥ ೩೫ ॥

ಅರ್ಥ:— ಆಗ = ಜಗತ್ತೇ ಲಯಗೊಂಡ ಆ ಕಾಲದಲ್ಲಿ, ರೋಗವನೀವ = ರೋಗವನ್ನುಂಟುಮಾಡುವ, ವಾತಪಿತ್ಥಶ್ಲೇಷ್ಮ = ವಾತ, ಪಿತ್ಥ ಶ್ಲೇಷ್ಮಗಳೆಂಬ ತ್ರಿಧಾತುಗಳು, ಕೂಡುವುದೇ = ಉಂಟೆಂದು ಹೇಳಲಾದೀತೆ ? (ಇಲ್ಲ) (ಪ್ರಳಯ ಕಾಲದಲ್ಲಿಯೂ ಆನಂದದಿಂದಿರುವ ಶ್ರೀಹರಿಗೆ ಪ್ರಾಕೃತದೇಹವೇ ಇಲ್ಲವೆಂದು ಸಿದ್ಧವಾಗುವುದಿಲ್ಲವೆ ?) ರಮೆಯೊಡನೆ = (ನಿತ್ಯಮುಕ್ತಳಾದ ಪ್ರಕೃತ್ಯಭಿಮಾನಿನಿ ಅಪ್ರಾಕೃತಸ್ವರೂಪಳಾದ) ಲಕ್ಷ್ಮೀ-ದೇವಿಯನ್ನು ಕೂಡಿ, ಭೋಗಿಸುವವಗೆ = ಭೋಗಿಸುವ ಶ್ರೀಹರಿಗೆ, ದುರಿತವ =

ದುಃಖಾದಿ ದೋಷಗಳನ್ನು, ನೆನೆವರೆ = ಚಿಂತಿಸಬಹುದೇ ? ಈ ಗುಣನಿಧಿಗೆ = ಹೀಗೆ ಆನಂದಾದಿ ಅನಂತಗುಣಾಶ್ರಯನಾದವನಿಗೆ (ಗುಣಸಮುದ್ರನಿಗೆ = ಗುಣಸ್ವರೂಪನಿಗೆ), ಎಣೆಯುಂಟೇ = ಸರಿಯುಂಟೇ ? (ಯಾರೂ ಸಮರಿಲ್ಲ ; ಉತ್ತಮರಂತೂ ಇಲ್ಲವೇ ಇಲ್ಲ = ಆತನೇ ಸರ್ವೋತ್ತಮನು).

ರಮ್ಮೆದೇವಿಯರನಪ್ಪಿಕೊಂಡಿಪ್ಪದು
ರಮ್ಮೆಯರಸಗೆ ರತಿ ಕಾಣಿರೋ ।
ಅಮ್ಮೋಘವೀರ್ಯವು ಚಲಿಸಿದರೆ ಪ್ರಳಯದಲಿ
ಕುಮ್ಮಾರರ್‍ಯಾಕೆ ಜನಿಸರು ॥ ಶೋಭಾನೆ ॥ ॥ ೩೬ ॥

ಅರ್ಥ:— ರಮ್ಮೆದೇವಿಯರನು = ರಮಾದೇವಿಯನ್ನು, ಅಪ್ಪಿಕೊಂಡಿಪ್ಪದು = ಆಲಿಂಗನಮಾಡುವುದು, ರಮ್ಮೆಯರಸನಿಗೆ = ರಮಾಪತಿಗೆ (ಶ್ರೀಹರಿಗೆ), ರತಿ ಕಾಣಿರೋ = ಕೇವಲ ಕ್ರೀಡೆಯೆಂದು ತಿಳಿಯಿರಿ ; ಅಮ್ಮೋಘವೀರ್ಯವು = ಅಮೋಘವಾದ (ವ್ಯರ್ಥವಾಗಲು ಶಕ್ಯವಲ್ಲದ), ಶ್ರೀಹರಿಯ ವೀರ್ಯವು (ರೇತಸ್ಸು), ಚಲಿಸಿದರೆ = ಸ್ಖಲನವಾದರೆ, ಪ್ರಳಯದಲಿ = (ರಮೆಯೊಂದಿಗೆ ರಮಿಸುವ) ಪ್ರಳಯ ಕಾಲದಲ್ಲಿ ಕುಮ್ಮಾರರು = ಮಕ್ಕಳು, ಯಾಕೆ ಜನಿಸರು = ಹುಟ್ಟದಿರಲು ಕಾರಣವೇನು ?

ವಿಶೇಷಾಂಶ:— ಶ್ರೀಹರಿಗೆ ರೇತಃಸ್ಖಲನವಿಲ್ಲ ; ಸಂಭೋಗದಿಂದ ಸುಖವೆಂಬುದಿಲ್ಲ. ರಮೆಯೊಂದಿಗೆ ರಮಿಸುವುದು ಆಕೆಯ ಆನಂದೋದ್ರೇಕಕ್ಕಾಗಿ – ಆಕೆಯ ಅನುಗ್ರಹಾರ್ಥವಾಗಿ ಮಾತ್ರ. ಹಾಗಲ್ಲದಿದ್ದರೆ ಪ್ರಳಯಕಾಲದಲ್ಲಿ ರಮೆಯೊಡನೆ ಭೋಗವು ತಕ್ಷಣದಲ್ಲಿ ಸಂತಾನೋತ್ಪತ್ತಿಗೆ ಕಾರಣವಾಗಬೇಕಾಗಿತ್ತು. ಆದ್ದರಿಂದ ರೇತೋತ್ಸರ್ಜನದಿಂದ ಸುಖವೆಂಬುದಿಲ್ಲ — ಸ್ವಯಂ ಆನಂದಪೂರ್ಣನೆಂದು ಸಿದ್ಧವಾಗುವುದಲ್ಲವೇ ? ಎಂಬ ಯುಕ್ತಿಯನ್ನು ತೋರಿಸಿದ್ದಾರೆ. ಶ್ರೀವಾದಿರಾಜರು ತಮ್ಮ **ಸರಸ ಭಾರತೀವಿಲಾಸ** ಗ್ರಂಥದಲ್ಲಿ *'ಪರಿಣಾಮ ಪುನರ್ಲಕ್ಷ್ಮ್ಯಾಃಕುಕ್ಷೌ ನಿಕ್ಷಿಪ್ಯ ಲೀಲಯಾ । ಅಜಾಂಡಂ ನಿರ್ಮಮೇ ಹೈಮಂ ನ ತು ವಿಷ್ಣುಃ ಸ್ವರೇತಸಾ ।'* ಎಂಬಲ್ಲಿ ತತ್ವಗಳು ಅಂಶಗಳನ್ನು ಪರಿಣಾಮಗೊಳಿಸಿ ಲಕ್ಷ್ಮೀದೇವಿಯ ಹೊಟ್ಟೆಯಲ್ಲಿಟ್ಟು ಸುವರ್ಣಾತ್ಮಕ ಬ್ರಹ್ಮಾಂಡವನ್ನು ನಿರ್ಮಿಸಿದನಲ್ಲದೇ ತನ್ನ ರೇತಸ್ಸಿನಿಂದಲ್ಲವೆಂದು ಹೇಳಿರುವರು. ಹಾಗೂ, ಶ್ರೀವಿಜಯಧ್ವಜತೀರ್ಥರು 'ಪುರುಷೇಣಾತ್ಮಭೂತೇನ ವೀರ್ಯಮಾಧತ್ತ ವೀರ್ಯವಾನ್' (ಭಾಗ. ತೃ. ೬ನೇ ಅಧ್ಯಾಯ) ಎಂಬ ಭಾಗವತಶ್ಲೋಕದ ವ್ಯಾಖ್ಯಾನದಲ್ಲಿ *'ರೇತ ಆಖ್ಯಂ ಪರಿಣಾಮಕರಸಾಮರ್ಥ್ಯಂ'* – ಪರಿಣಾಮಕರಶಕ್ತಿಯೇ ರೇತಸ್ಸೆಂದು ಕರೆಯ- ಲ್ಪಡುವುದೆಂದೂ ಹೇಳಿರುವರು. ವಿಷ್ಣುವೀರ್ಯವೂ ಸಚ್ಚಿದಾನಂದಾತ್ಮಕ

ವಾದುದೇ. ಅದರ ಪರಿಣಾಮದಿಂದ ಆದುದಲ್ಲ ಬ್ರಹ್ಮಾಂಡ. ವಿಷ್ಣುವೀರ್ಯಕ್ಕೆ ಸ್ಖಲನಾದಿ ವಿಕಾರಗಳಿಲ್ಲ.

ಏಕತ್ರ ನಿರ್ಣೀತಶಾಸ್ತ್ರಾರ್ಥಪರತ್ರಾಪಿ
ಬೇಕೆಂಬ ನ್ಯಾಯವ ತಿಳಿದುಕೋ
ಶ್ರೀಕೃಷ್ಣನೊಬ್ಬನೇ ಸರ್ವದೋಷಕ್ಕೆ ಸಿ-
ಲುಕನೆಂಬೋದು ಸಲಹಲಿಕೆ ॥ ಶೋಭಾನೆ ॥ ॥ ೩೭ ॥

ಅರ್ಥ:— ಏಕತ್ರ = ಒಂದೆಡೆಯಲ್ಲಿ (ಈ ಸಾಧನದೇಹದಲ್ಲಿ ಯಥಾರ್ಥ ಜ್ಞಾನಕ್ಕಾಗಿ), ನಿರ್ಣೀತಶಾಸ್ತ್ರಾರ್ಥ = ಹೀಗೆಯೇ ಸರಿಯೆಂದು ನಿಶ್ಚಯಿಸಲ್ಪಟ್ಟ ಶಾಸ್ತ್ರ ತಾತ್ಪರ್ಯವು (ಗುರೂಪದಿಷ್ಟನಾಗಿ, ವಿಮರ್ಶೆಯಿಂದ ಸಿದ್ಧಿಸಿಕೊಂಡ ಶಾಸ್ತ್ರಾರ್ಥಗಳು), ಪರತ್ರಾಪಿ = ಸರ್ವತ್ರದಲ್ಲಿಯೂ (ಸರ್ವದೇಶಕಾಲಗಳಲ್ಲಿ ಸಹ), ಬೇಕೆಂಬ = ಅವಶ್ಯಕವೆಂಬ (ಅನ್ವಯಿಸುವುದೆಂಬ), ನ್ಯಾಯವ = ನೀತಿಯನ್ನು (ಯುಕ್ತಿಯುಕ್ತವಾದ ತತ್ವವನ್ನು), ತಿಳಿದುಕೊ = ಅರಿತು ವಿಚಾರ ಮಾಡು ; ಶ್ರೀಕೃಷ್ಣನೊಬ್ಬನೇ = ಶ್ರೀಹರಿಯೊಬ್ಬನೇ, ಸರ್ವದೋಷಕ್ಕೆ ಸಿಲುಕನು = ಸರ್ವದೋಷರಹಿತನು, ಎಂಬೋದು = ಎಂಬ ಮುಖ್ಯಪ್ರಮೇಯವು, ಸಲಹಲಿಕೆ = ರಕ್ಷಿಸುವುದಕ್ಕೆ (ಸ್ವತಂತ್ರ ಗುಣಪೂರ್ಣನೆಂಬುದನ್ನು ತಿಳಿಯಲು, ಸಕಲ ವಿರೋಧಗಳ ಪರಿಹಾರವು) ಅವಶ್ಯಕವೇ ಆಗಿದೆ.

ವಿಶೇಷಾಂಶ:— ಜೀವಪರಮಾತ್ಮರ ಭೇದ, ಜಗತ್ತು ಸತ್ಯ, ತಾರತಮ್ಯಾದಿ ಶಾಸ್ತ್ರಸಿದ್ಧ ಪ್ರಮೇಯಗಳು ಕೇವಲ ವ್ಯವಹಾರಕ್ಕಾಗಿ ಮಾತ್ರ ; ಪಾರಮಾರ್ಥಿಕ ದೃಷ್ಟಿಯಿಂದ ಇವು ಯಾವುವೂ ಸತ್ಯವಲ್ಲ - ಬ್ರಹ್ಮಮಾತ್ರ ಸತ್ಯ - ಇತರವೆಲ್ಲವೂ ಮಿಥ್ಯಾ ಎಂಬ (ವ್ಯಾವಹಾರಿಕ, ಪಾರಮಾರ್ಥಿಕವೆಂಬ) ಕಲ್ಪನೆಯನ್ನು ತೊರೆದು, ಪರಮಾತ್ಮನು ಸರ್ವಗುಣಪೂರ್ಣನೆಂದು ತಿಳಿ. ಈ ನಿರ್ಣಯದ ವಿಷಯಕ್ಕೆ ತೋರಿಬರಬಹುದಾದ ಸಕಲವಿರೋಧಗಳನ್ನು, ಶ್ರೀಹರಿಯು ಸರ್ವದೋಷದೂರನೆಂಬುದರಿಂದ, ಪರಿಹರಿಸಿಕೊಳ್ಳಬೇಕೆನ್ನುತ್ತಾರೆ. ಶ್ರೀಬಾದರಾಯಣರು ರಚಿಸಿದ ವೇದಾಂತಸೂತ್ರಗಳಲ್ಲಿ ನಿರ್ಣಯಿಸಲಾಗಿರುವ ತತ್ವಗಳಲ್ಲಿ ವ್ಯಾವಹಾರಿಕ, ಪಾರಮಾರ್ಥಿಕವೆಂಬ ವ್ಯವಸ್ಥೆಯನ್ನು ಕಾಣಲು ಎಡೆಯಿಲ್ಲದಿರಲು 'ಯಚ್ಚಿಕೇತ ತತ್ಸತ್ಯಂ' 'ದ್ವಾ ಸುಪರ್ಣಾ' ಇತ್ಯಾದಿ ನಿರವಕಾಶಸತ್ಯಭೇದಗಳನ್ನು ಹೇಳುವ ಶ್ರುತ್ಯರ್ಥಗಳ ವಿಷಯಕ್ಕೆ ನಿರಾಧಾರನಿಯಮವನ್ನೇಕೆ ತಂದುಹಚ್ಚುವಿ ? ಶ್ರೀಹರಿಯು ದೋಷದೂರನೆಂದು ತಿಳಿಯುವುದು, ಅಂಧಂತಮಸ್ಸಿನಿಂದ ನಿನ್ನನ್ನು ರಕ್ಷಿಸಿಕೊಳ್ಳಲು ಅತ್ಯವಶ್ಯಕವೂ ಆಗಿದೆ, ಎನ್ನುತ್ತಾರೆ. ಈ ಮುಂದೆಯೂ ಶ್ರೀಹರಿಯು ದೋಷದೂರನೇ ಎಂಬಲ್ಲಿ ಅನೇಕ ಯುಕ್ತಿಗಳನ್ನು ಸೂಚಿಸುತ್ತಾರೆ.

ಎಲ್ಲ ಜಗವ ನುಂಗಿ ದಕ್ಕಿಸಿಕೊಂಡವಗೆ
ಸಲ್ಲದು ರೋಗರುಜಿನವು
ಬಲ್ಲ ವೈದ್ಯರ ಕೇಳಿ ಅಜೀರ್ತಿಮೂಲೆಲ್ಲ
ಇಲ್ಲ ಸಮಸ್ತ ರುಜಿನವು ॥ ಶೋಭಾನೆ ॥ ॥ ೩೮ ॥

ಅರ್ಥ – ಎಲ್ಲ ಜಗವ = ಎಲ್ಲ ಜಗತ್ತನ್ನು, ನುಂಗಿ = (ಪ್ರಳಯಕಾಲದಲ್ಲಿ) ನುಂಗಿ (ಲೀಲೆಯಿಂದ ತನ್ನ ಉದರದಲ್ಲಿ ಸೇರಿಸಿಕೊಂಡರೂ), ದಕ್ಕಿಸಿಕೊಂಡವಗೆ = ನಿರ್ವಿಕಾರ-ನಾಗಿ ಮಲಗಿದವನಿಗೆ (ಯಾವ ಪರಿಣಾಮವೂ ಇಲ್ಲದಿರುವನಿಗೆ), ರೋಗರುಜಿನವು = ರೋಗಾದಿ ಆಘಾತಗಳು, ಸಲ್ಲದು = ಕೂಡುವುದಿಲ್ಲ (ಸಂಭಾವ್ಯವಲ್ಲ); ಬಲ್ಲ ವೈದ್ಯರ ಕೇಳು = ಚೆನ್ನಾಗಿ ತಿಳಿದ ವೈದ್ಯರನ್ನು ಕೇಳು. ಎಲ್ಲ = ಎಲ್ಲ ರೋಗಾದಿಗಳೂ, ಅಜೀರ್ತಿ-ಮೂಲ = ಅಜೀರ್ಣವೇ ಮೂಲಕಾರಣವಾಗಿ ಉಳ್ಳವುಗಳು; ಇಲ್ಲ ಸಮಸ್ತ ರುಜಿನವು = (ಅದಿಲ್ಲದೇ) ಯಾವ ದೇಹಾಲಸ್ಯಾದಿಗಳೂ ಇಲ್ಲ (ರುಜಿನ = ರೋಗನಿಮಿತ್ತವಾದ ದೇಹಾಲಸ್ಯಾದಿ ಆಘಾತ).

ಇಂಥ ಮೂರುತಿಯ ಒಳಗೊಂಬ ನರಕ ಬಹು-
ಭ್ರಾಂತ ! ನೀನೆಲ್ಲಿಂದ ತೋರುವೆ ಎಲೋ
ಸಂತೆಯ ಮರುಳ ! ಹೋಗೆಲೊ ನಿನ್ನ ಮಾತ
ಸಂತರು ಕೇಳಿ ಸೊಗಸರು ॥ ಶೋಭಾನೆ ॥ ॥ ೩೯ ॥

ಅರ್ಥ:— ಇಂಥ ಮೂರುತಿಯ = ಸರ್ವಭಕ್ಷಕನಾದರೂ ಅಜೀರ್ಣಾದಿ ಪರಿಣಾಮಗಳಿಂದ ದೇಹವುಳ್ಳವನನ್ನು, ಒಳಗೊಂಬ = ತನ್ನೊಳಗೆ ತೆಗೆದುಕೊಳ್ಳುವ (ವ್ಯಾಪಿಸುವ), ನರಕ = ದುಃಖವನ್ನು, ಬಹುಭ್ರಾಂತ = ಹೇ ವಿಶೇಷ ಅನ್ಯಥಾಜ್ಞಾನಿಯೇ ! ನೀನೆಲ್ಲಿಂದ ತೋರುವೆ ಎಲೋ ? (ಇಂಥವನನ್ನು ತಗಲುವ ದುಃಖವೆಂಬುದು ಎಲ್ಲಿಯೂ ಇಲ್ಲ) ; ಸಂತೆಯ ಮರುಳ = ಸಂತೆಯಲ್ಲಿ ಬಾಯಿಗೆ ಬಂದಂತೆ ಅರ್ಥವಿಲ್ಲದ ಕೂಗು ಕೂಗುವ ಹುಚ್ಚ! ಹೋಗೆಲೊ = ಹೋಗು (ನಿನ್ನ ದಾರಿ ಹಿಡಿ – ತಮಸ್ಸಿನ ಮಾರ್ಗವನ್ನು ಹಿಡಿದು ಹೋಗು) ; ನಿನ್ನ ಮಾತ = ನಿನ್ನ ಈ ಹುಚ್ಚು ಕೂಗನ್ನು, ಸಂತರು = ಸಜ್ಜನರು ಕೇಳಿ ಸೊಗಸರು = ಕೇಳಿ ಎಂದೂ ಒಪ್ಪರು (ಹರ್ಷಿಸುವುದಿಲ್ಲ).

ಶ್ರೀನಾರಾಯಣರ ಜನನೀಜನಕರ
ನಾನೆಂಬ ವಾದೀ ನುಡಿಯೆಲೊ
ಜಾಣರೆಂಬುದನರಿಯ ಮೂಲರೂಪವ ತೋರಿ
ಶ್ರೀನರಸಿಂಹನ ಅವತಾರ ॥ ಶೋಭಾನೆ ॥ ॥ ೪೦ ॥

ಅರ್ಥ:— ಜನನೀಜನಕರ = (ಈ ವಿಶ್ವದ) ಜನನೀಜನಕರಾದ (ಮಾತಾಪಿತೃ-ಗಳಾದ), ಶ್ರೀನಾರಾಯಣರ = ರಮಾನಾರಾಯಣರನ್ನು, ನಾನೆಂಬ = ನಾನೇ ನಾರಾ-ಯಣನು (ಬ್ರಹ್ಮ) ಎಂದು ಹೇಳುವ (ರಮಾದಿ ಇತರವಾವುದೂ ಇಲ್ಲವೇ ಇಲ್ಲವೆನ್ನುವ), ವಾದೀ = ಹೇ ಮಾಯಾವಾದಿ ! ನುಡಿಯೆಲೊ = (ಜ್ಞಾನಿಗಳಿಗೆ) ಉತ್ತರವನ್ನು ಹೇಳು ; ಜಾಣರು = ಜ್ಞಾನಿಗಳು, ಮೂಲರೂಪವ ತೋರಿ = (ಪರಬ್ರಹ್ಮನ) ಮೂಲರೂಪನ್ನು (ನಾರಾಯಣನನ್ನು) ನಿರ್ದೇಶಿಸಿ, (ಆ ಮೂಲರೂಪದಿಂದ) ಶ್ರೀನರಸಿಂಹನ ಅವತಾರ = (ಸರ್ವಗತನೆಂಬುದನ್ನೂ ಜನನಾದಿ ದೋಷರಹಿತನೆಂಬುದನ್ನೂ ತೋರಿಸಿ) ಶ್ರೀನರಸಿಂಹರೂಪನಾಗಿ (ಸ್ತಂಭದಿಂದ) ಪ್ರಕಟನಾದನು, ಎಂಬುದನು = ಎಂದು ಹೇಳುವುದನ್ನು, ಅರಿಯೆ = (ಜ್ಞಾನಿಗಳ ಈ ನಿಶ್ಚಿತಾಭಿಪ್ರಾಯವನ್ನು) ನೀನು ತಿಳಿದಿಲ್ಲವೇ ? (ನೃಸಿಂಹಾದಿ ಅವತಾರಗಳುಳ್ಳವನು ಮೂಲರೂಪಿಯಾದ ನಾರಾಯಣನೆಂಬುದನ್ನು ತಿಳಿದಿರುವ ನೀನು, ನಾನೇ ಆ ನಾರಾಯಣನೆನ್ನುವಿ, ಈ ಅವತಾರಗಳೆಲ್ಲವೂ ನಿನ್ನವೇ ಏನು ? ಉತ್ತರ ಹೇಳು).

ಅಂಬುಧಿಯ ಉದಕದಲಿ ಒಡೆದು ಮೂಡಿದ ಕೂರ್ಮ-
ನೆಂಬ ಶ್ರೀಹರಿಯ ಪಿತನಾರು
ಎಂಬ ಶ್ರೀಹರಿಯ ಪಿತನಾರು ಅದರಿಂದ ಸ್ವ-
ಯಂಭುಗಳೆಲ್ಲ ಅವತಾರ ॥ ಶೋಭಾನೆ ॥ ॥ ೪೧ ॥

ಅರ್ಥ:— ಅಂಬುಧಿಯ = ಸಮುದ್ರದ, ಉದಕದಲಿ = ಜಲದಲ್ಲಿ, ಒಡೆದು ಮೂಡಿದ = ಒಡಮೂಡಿದ (ಜಲದಿಂದ ಹೊರಗೆ ಬಂದು ಪ್ರಕಟನಾದ), ಕೂರ್ಮನೆಂಬ = ಕೂರ್ಮನಾಮಕ, ಶ್ರೀಹರಿಯ = ಆ ನಾರಾಯಣನ, ಪಿತನಾರು = ತಂದೆ ಯಾರು ? (ಸೃಷ್ಟಿಸಿದವನೊಬ್ಬನಿರುವನೇ ?) ಎಂಬ = ಈ ಮಹಿಮೆಯುಳ್ಳವನೆಂದು (ಮೂಲರೂಪದಿಂದ ಹೀಗೆ ಸ್ವೇಚ್ಛೆಯಿಂದಲೇ ನಾನಾ ರೂಪಗಳಿಂದ ಪ್ರಕಟನಾಗುವ-ನೆಂದು) ಪ್ರಸಿದ್ಧನಾದ, ಶ್ರೀಹರಿಯ ಪಿತನಾರು = ತಂದೆ ಯಾರು ಹೇಳು; ಅದರಿಂದ = ಈ ಕಾರಣದಿಂದ, ಸ್ವಯಂಭುಗಳೆಲ್ಲ = ಉತ್ಪಾದಕನೊಬ್ಬನಿಲ್ಲದ ಎಲ್ಲ ರೂಪಗಳೂ (ತನ್ನಿಂದ ತಾನೇ ಹುಟ್ಟುವ ನಾರಾಯಣನ ಎಲ್ಲ ರೂಪಗಳೂ), ಅವತಾರ = (ಆತನ) ಅವತಾರಗಳೇ ಸರಿ.

ದೇವಕಿಯ ಗರ್ಭದಲಿ ದೇವನವತರಿಸಿದ
ಭಾವವನು ಬಲ್ಲ ವಿವೇಕಿಗಳು

ಈ ವಸುಧೆಯೊಳಗೆ ಕೃಷ್ಣಗೆ ಜನ್ಮವ
ಆವ ಪರಿಯಲ್ಲಿ ನುಡಿವೆಯೋ ॥ ಶೋಭಾನೆ ॥ ॥ ೪೨ ॥

ಅರ್ಥ:— ದೇವಕಿಯ ಗರ್ಭದಲ್ಲಿ = ದೇವಕೀದೇವಿಯ ಹೊಟ್ಟೆಯಿಂದ, ದೇವನು = ಕ್ರೀಡಾದಿಗುಣವಿಶಿಷ್ಟನಾದ ಶ್ರೀಹರಿಯು, ಅವತರಿಸಿದ = ಅವತಾರ ಮಾಡಿದನೆಂಬುದರ, ಭಾವವನು = ಸರಿಯಾದ ಅರ್ಥವನ್ನು, ಬಲ್ಲ ವಿವೇಕಿಗಳು = ತಿಳಿದ ವಿಮರ್ಶಕರು, ಈ ವಸುಧೆಯೊಳಗೆ = ಈ ಭೂಲೋಕದಲ್ಲಿ, ಕೃಷ್ಣಗೆ = ಶ್ರೀನಾರಾಯಣನಿಗೆ, ಜನ್ಮವ = ಅವತಾರವೇ ಜನ್ಮವೆಂದು (ತಿಳಿಯುವರು) ; ಆವ ಪರಿಯಲ್ಲಿ = ಯಾವ ಪ್ರಕಾರದಿಂದ ಶ್ರೀಕೃಷ್ಣನ ಜನ್ಮವೆಂದು, ನುಡಿವೆಯೋ = ನೀನು ಹೇಳುತ್ತೀ ? (ಹೇಳು).

ವಿಶೇಷಾಂಶ:— *"ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ ವ್ಯಾಪ್ತಿಂ ಚ ಭೂತೇಷ್ವಖಿಲೇಷು ಚಾತ್ಮನಃ । ಅದೃಶ್ಯತಾತ್ಯದ್ಭುತರೂಪಮುದ್ವಹನ್ ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಮ್ ॥* ಎಂದು ಭಾಗವತದಲ್ಲಿ, ಶ್ರೀಹರಿಯೇ ಜಗದೀಶ್ವರನು, ಸರ್ವರಕ್ಷಕನು, ಎಂಬ ಪ್ರಹ್ಲಾದನ ಮಾತನ್ನು ಸತ್ಯಗೊಳಿಸಲು ಮತ್ತು ತಾನು ಸರ್ವತ್ರ ವ್ಯಾಪ್ತನೆಂಬುದನ್ನು ನಿದರ್ಶನಮಾಡಲು, ಸಭಾಮಧ್ಯದ ಸ್ತಂಭದಿಂದ, ಅದ್ಭುತವಾದ ವಿಚಿತ್ರ ನರಸಿಂಹರೂಪದಿಂದ ಪ್ರಕಟನಾದನೆಂದು ಹೇಳಿದೆ. ·

'ದೇವಕ್ಯಾಂ ದೇವರೂಪಿಣ್ಯಾಂ ವಿಷ್ಣುಃ ಸರ್ವಗುಹಾಶಯಃ । ಆವಿರಾಸೀತ್ ಯಥಾ ಪ್ರಾಚ್ಯಾಂ ದಿಶೀಂದುರಿವ ಪುಷ್ಕಲಃ' ॥ ಎಂದು ಕೃಷ್ಣಾವತಾರವನ್ನು ಭಾಗವತವು ನಿರೂಪಿಸುತ್ತದೆ. 'ಶ್ರೀಹರಿಯ ರೂಪವನ್ನು ಪ್ರಕಟಮಾಡುವ ಅಧಿಷ್ಠಾನಭೂತಳಾದ (ದೇವಾಂಶಳಾದ ದಿವ್ಯಸುಂದರಿಯಾದ) ದೇವಕೀದೇವಿಯಲ್ಲಿ ಸರ್ವರ ಹೃದ್ಗುಹವಾಸಿಯಾದ ಶ್ರೀವಿಷ್ಣುವೇ, ಪೂರ್ವದಿಕ್ಕಿನಲ್ಲಿ ಪೂರ್ಣ ಚಂದ್ರನು ಉದಯಿಸುವಂತೆ (ಸಜ್ಜನ ಲೋಕವನ್ನು ಆಹ್ಲಾದಿಸುವನಾಗಿ) ಪ್ರಕಟನಾದನು' ಈ ವರ್ಣನೆಗಳು, ಪ್ರಾಕೃತದೇಹ-ಸಂಬಂಧದಿಂದ, ಪ್ರಾಕೃತರಂತೆ (ಲೋಕದ ಸಾಮಾನ್ಯ ಪ್ರಜೆಗಳಂತೆ) ಶುಕ್ಲಶೋಣಿತ-ಗಳಿಂದಾದ ದೇಹ-ಮಾತೃಗರ್ಭವಾಸ, ಇತ್ಯಾದಿ ಕ್ರಮದಿಂದಾಗುವ ಜನ್ಮವಿಲ್ಲದವ-ನೆಂಬುದನ್ನು ನಿಶ್ಚಯಿಸಿಕೊಡುತ್ತವೆ.

'ಪ್ರತ್ಯಕ್ಷತ್ವಂ ಹರೇರ್ಜನ್ಮ ನ ವಿಕಾರಿ ಕಥಂಚನ ।' ಇತ್ಯಾದಿ ಪ್ರಮಾಣಗಳೂ ಹೀಗೆಂದೇ ಸಾರುತ್ತವೆ.

ಆವಳಿಸುವಾಗ ಯಶೋದಾದೇವಿಗೆ
ದೇವ ತನ್ನೊಳಗೆ ಹುದುಗಿದ್ದ

ಭುವನವನೆಲ್ಲವ ತೋರಿದುದಿಲ್ಲವೇ
ಆ ವಿಷ್ಣು ಗರ್ಭದೊಳಡಗುವನೆ ॥ ಶೋಭಾನೆ ॥ ॥ ೪೩ ॥

ಅರ್ಥ:— ಆವಳಿಸುವಾಗ = ಆಕಳಿಸಿದಾಗ (ಸ್ವೇಚ್ಛೆಯಿಂದ) ತನ್ನ ಮುಖವನ್ನು ಅಗಲಿಸಿದಾಗ), ಯಶೋದಾದೇವಿಗೆ, ದೇವ = ಕೃಷ್ಣನು, ತನ್ನೊಳಗೆ = ತನ್ನ ಬಾಯಲ್ಲಿ, ಹುದುಗಿದ್ದ = ಅಡಗಿದ್ದ (ಯಾವಾಗಲೂ ತೋರದ) ಭುವನವನೆಲ್ಲವ = ಸಕಲ ಜಗತ್ತನ್ನು (ವಿಶ್ವವನ್ನೇ), ತೋರಿದುದಿಲ್ಲವೇ = ತೋರಿಸಲಿಲ್ಲವೇ ? ಆ ವಿಷ್ಣು = (ಹೀಗೆ ವಿಶ್ವವನ್ನೇ ತನ್ನೊಳಗಿಟ್ಟುಕೊಂಡಿರುವ ಶ್ರೀಕೃಷ್ಣರೂಪದ) ಆ ವಿಷ್ಣುವು, ಗರ್ಭದೊಳಗೆ = (ದೇವಕೀ ದೇವಿಯ) ಗರ್ಭದ ಅಲ್ಪದೇಶದಲ್ಲಿ, ಅಡಗುವನೆ = ಹಿಡಿಸಬಲ್ಲನೇ ? (ಲೌಕಿಕ ಶಿಶುವಿನಂತೆ ಮಾತೃಗರ್ಭದಲ್ಲಿ ಬೆಳೆದು ಹುಟ್ಟಿದವನಾದಾನೇ !)

ವಿಶೇಷಾಂಶ:— ಪ್ರಾಕೃತ ಶಿಶುವಿನಂತೆ ಜನಿಸಿದವನಲ್ಲವೆಂದು ತಿಳಿಯಲು ಯುಕ್ತಿಯನ್ನು ಸೂಚಿಸುತ್ತಾರೆ.

ಆನೆಯ ಮಾನದಲಿ ಅಡಗಿಸಿದವರುಂಟೆ
ಅನೇಕ ಕೋಟಿ ಅಜಾಂಡವ
ಅಣುರೇಣುಕೂಪದಲಿ ಅಳ್ದ (ಆಳ್ದ) ಶ್ರೀಹರಿಯ
ಜನನಿಜಠರವು ಒಳಗೊಂಬುದೆ ॥ ಶೋಭಾನೆ ॥ ॥ ೪೪ ॥

ಅರ್ಥ:— ಆನೆಯ = ಆನೆಯನ್ನು, ಮಾನದಲಿ = ಮಾನರಂಧ್ರದಲ್ಲಿ (ಘಳಿಗೆ ಬಟ್ಟಲಿನ ತಳದಲ್ಲಿರುವ ಸಣ್ಣರಂಧ್ರ), ಅಡಗಿಸಿದವರುಂಟೆ = ಪ್ರವೇಶ ಮಾಡಿಸಿದವರು = (ಹೊಗಿಸಿ, ತೆಗೆದವರು) ಇದ್ದಾರೆಯೇ ? ಅನೇಕಕೋಟಿ ಅಜಾಂಡವ = ಬಹುಕೋಟಿ ಯೋಜನವಿಸ್ತಾರದ ಬ್ರಹ್ಮಾಂಡವನ್ನು, ಅಣುರೇಣು ಕೂಪದಲಿ = ಸೂಕ್ಷ್ಮವಾದ (ರೇಣು) ಪುಷ್ಪಪರಾಗದಷ್ಟು (ಕೂಪದಿ) ತಗ್ಗಿನಲ್ಲಿ ಆಳ್ದ = ಮಾನಗೊಳಿಸಿದ (ಪರಿಮಿತಿಗೊಳಿಸಿದ), ಅಥವಾ ಆಳ್ದ = ಇಟ್ಟು ರಕ್ಷಿಸಿದ, ಶ್ರೀಹರಿಯ = ಶ್ರೀಕೃಷ್ಣನನ್ನು, ಜನನಿಜಠರವು = ದೇವಕೀ ದೇವಿಯ ಗರ್ಭವು (ಹೊಟ್ಟೆಯು), ಒಳಗೊಂಬುದೆ = ತನ್ನಲ್ಲಿ ಇಟ್ಟುಕೊಳ್ಳಬಹುದೇ ?

ವಿಶೇಷಾಂಶ:— (೧) *"ನ ಶುಕ್ಲರಕ್ತಪ್ರಭವೋಽಸ್ಯ ದೇಹಸ್ತಥಾಪಿ ತತ್ಪುತ್ರತಯೋಚ್ಯತೇ ಮೃಷಾ । ಜನಸ್ಯ ಮೋಹಾಯ ಶರೀರತೋಽಸ್ಯಾಃ ಯದಾಽಽವಿರಾಸೀದಮಲಸ್ವರೂಪಃ"* ಎಂದರೆ, ಶ್ರೀಕೃಷ್ಣನ ದೇಹವು ಸ್ತ್ರೀಪುರುಷರ ರೇತಸ್ಸಿನಿಂದ (ಶುಕ್ಲಶೋಣಿತಗಳಿಂದ) ಹುಟ್ಟಿದುದಲ್ಲ; ಹೀಗಿದ್ದರೂ ಶ್ರೀಕೃಷ್ಣನು ವಸುದೇವದೇವಕಿಯರ ಪುತ್ರನೆಂದು ಕರೆಯಲ್ಪಡುತ್ತಾನೆ — ಇದರಲ್ಲಿ ಸತ್ಯಾಂಶವಿಲ್ಲ — ಅಜ್ಞ ಜನರ ಮೋಹಕ್ಕಾಗಿ ಮಾತ್ರ ಆ ರೂಪವನ್ನು ಅವರಿಂದ ಹುಟ್ಟಿದುದೋ ಎಂಬಂತೆ ತೋರಿಸುತ್ತಾನೆ ;

ಮಂಗಳಸ್ವರೂಪನಾದ (ಚಿದಾನಂದಸ್ವರೂಪನಾದ) ತಾನು, ಆ ರೂಪವನ್ನು ಪ್ರಕಟಗೊಳಿಸುವುದೇ ಆತನ ಜನ್ಮವು, ಎಂಬುದಾಗಿ ತಾತ್ಪರ್ಯನಿರ್ಣಯದಲ್ಲಿ ಹೇಳಿದೆ.

"ನ ತಸ್ಯ ಪ್ರಾಕೃತಾ ಮೂರ್ತಿರ್ಮಾಂಸಮೇದೋಸ್ಥಿ ಸಂಭವಾ । ಸರ್ವೇ ನಿತ್ಯಾಃ ಶಾಶ್ವತಾಶ್ಚ ದೇಹಾಸ್ತಸ್ಯ ಪರಾತ್ಮನಃ ॥ ಹಾನೋಪಾದಾನರಹಿತಾಃನೈವ ಪ್ರಕೃತಿಜಾಃ ಕ್ವಚಿತ್ । ಪರಮಾನಂದ ಸಂದೋಹಾ ಜ್ಞಾನಮಾತ್ರಾಶ್ಚ ಸರ್ವಶಃ । ಸರ್ವೇ ಸರ್ವಗುಣೈಃಪೂರ್ಣಾಃ ಸರ್ವೇ ಭೇದವಿವರ್ಜಿತಾಃ ॥ ಎಂಬಲ್ಲಿ 'ಮಾಂಸ, ಮೇದಸ್ಸು ಅಸ್ಥಿಗಳಿಂದಾದ ಪ್ರಾಕೃತ ದೇಹವು ಶ್ರೀಕೃಷ್ಣನಿಗೆ ಎಂದೂ ಇಲ್ಲ; ಪ್ರಾಕೃತದೇಹಗಳನ್ನು ತೆಗೆದುಕೊಳ್ಳುವುದು, ಬಿಡು-ವುದೆಂಬುದೂ ಇಲ್ಲ; ಆತನ ಅವತಾರಾದಿ ಸರ್ವ ರೂಪಗಳೂ ಜ್ಞಾನಾನಂದಾದಿಗಳಿಂದ ಪೂರ್ಣವಾದವುಗಳು — ತದಾತ್ಮಕವೇ ಆಗಿರುವುವು ಮತ್ತು ಪರಸ್ಪರ ಅಭಿನ್ನಗಳೇ ಆಗಿವೆ' ಎಂದೂ ಹೇಳಲಾಗಿದೆ.

(೨) ಶ್ರೀಹರಿಯ ಶಕ್ತಿಯು ಅಚಿಂತ್ಯ ಮತ್ತು ಅದ್ಭುತ. *"ಐಶ್ವರ್ಯಾದ್ಭಗವಾನ್ ವಿಷ್ಣುರ್ವಿರುದ್ಧಂ ಘಟಯತ್ಯಸೌ"* ಎಂದು ಕಾಠಕಭಾಷ್ಯದಲ್ಲಿ *"ಅಣೋರಣೀಯಾನ್ ಮಹತೋ ಮಹೀಯಾನ್"* ಎಂಬ ಉಪನಿಷದ್ವಾಕ್ಯದ ಅರ್ಥವನ್ನು ವಿವರಿಸಲಾಗಿದೆ. ಲೋಕದಲ್ಲಿ ವಿರುದ್ಧಗಳೆಂದು ತೋರುವ ಎಲ್ಲ ಶಕ್ತಿಗಳೂ ಶ್ರೀಹರಿಯಲ್ಲಿವೆ. ಇದನ್ನೇ "ಅಣುವಾಗಬಲ್ಲ ಮಹತ್ತಾಗಬಲ್ಲ ಅಣುಮಹತ್ತೆರಡು ಒಂದಾಗಬಲ್ಲ" ಎಂಬುದಾಗಿ ಶ್ರೀಪುರಂದರದಾಸರೂ ವರ್ಣಿಸಿರುವರು. ಅಣುಪ್ರದೇಶದಲ್ಲಿ ಬ್ರಹ್ಮಾಂಡವನ್ನೇ ಇಡ-ಬಲ್ಲನು. ತನ್ನಿಂದ ಸೃಷ್ಟವಾದ ಬಹುಕೋಟಿಯೋಜನ ವಿಸ್ತೀರ್ಣದ ಬ್ರಹ್ಮಾಂಡವನ್ನು ತನ್ನ ಒಂದೊಂದು ರೋಮಕೂಪದಲ್ಲಿಯೂ ಅನಂತ ಬ್ರಹ್ಮಾಂಡಗಳನ್ನಾಗಿ ಧರಿಸಿದ್ದಾನೆ. ಆತನ ಅನುಗ್ರಹಪಾತ್ರದಲ್ಲಿ ಸಹ ಈ ವಿಧ ಅದ್ಭುತಗಳನ್ನು (ತಾನೇ ನಿಂತು) ಪ್ರಕಟಮಾಡಿ ತೋರಿದ್ದಾನೆ. *"ವಿಶ್ವಕರ್ಮಕೃತತ್ವಾತ್ತು ಪುರಸ್ಯಾಲ್ಪೇಽಪಿ ಚ ಸ್ಥಲೇ । ಅಂತರ್ಗತಾಸ್ತೇ ಗಿರಯಸ್ತದದ್ಭುತಮಿವಾಭವತ್ ॥* '(ಭಾ.ತಾ.) ವಿಶ್ವಕರ್ಮನಿರ್ಮಿತವಾದ ಅಲ್ಪಸ್ಥಳದಲ್ಲಿ ಬಹುಯೋಜನ ವಿಸ್ತಾರದ ಸುವರ್ಣರತ್ನಾದಿಗಳ ಪರ್ವತಾಕಾರದ ರಾಶಿಗಳು, ಸೇರಿಸ-ಲ್ಪಟ್ಟವು. ಇದು ಅತ್ಯದ್ಭುತವಲ್ಲವೇ ; ಎಂದು ಶ್ರೀಕೃಷ್ಣಮಹಿಮೆಯೇ ವರ್ಣಿತವಾಗಿದೆ.

(೩) **'ಅಣುರೇಣುಕೂಪ'**ವೆಂಬುದಕ್ಕೆ ಅಣು-ರೇಣು (ರೇಣು-ಪುಷ್ಪಪರಾಗದ ಕಣ)ಗಳಷ್ಟು ಸೂಕ್ಷ್ಮವಾದ ರೋಮಕೂಪದಲ್ಲಿ, ಎಂಬರ್ಥವನ್ನು ತಿಳಿಯಬಹುದಾಗಿದೆ. 'ಅನೇಕ ಕೋಟಿ ಅಜಾಂಡವ' ಎಂಬುದಕ್ಕೆ ಅನಂತಕೋಟಿ ಬ್ರಹ್ಮಾಂಡಗಳನ್ನು ಎಂಬರ್ಥ-ವನ್ನು ಗ್ರಹಿಸಬೇಕು. *'ಲಕ್ಷ್ಯತೇಽಂತರ್ಗತಾಶ್ಚಾನ್ಯೇ ಕೋಟಿಶೋಹ್ಯಂಡರಾಶಯಃ'* (ಭಾಗ ೩-೧೨-೪೦) ಕೋಟಿ ಬ್ರಹ್ಮಾಂಡರಾಶಿಗಳು ಶ್ರೀಹರಿಯ ದೇಹದಲ್ಲಿ ಒಳಗೊಂಡಿರುವು-ದನ್ನು ಚತುರ್ಮುಖನು ಕಂಡನೆಂದು ಹೇಳುವ ಭಾಗವತಶ್ಲೋಕದ ತಾತ್ಪರ್ಯಭಾಗದಲ್ಲಿ ಶ್ರೀಮದಾಚಾರ್ಯರು ಹೀಗೇ ಹೇಳಿರುವರು :

'ಶರೀರಾಣಾಂ ಬಹುತ್ವೇನ ಅತೀತಾನಾಗತೈಸ್ತಥಾ । ದೇವಕಾರ್ಯೇಷು ಪ್ರತಿಪ್ರತಿ ಚ ದರ್ಶನಾತ್ । ವಿಷ್ಣುಸಾಮರ್ಥ್ಯತೋಽಂಡಾನಾಂ ಬಹುತ್ವಂ ನಾನ್ಯಥಾ ಭವೇತ್ ॥ (ಬ್ರಹ್ಮತರ್ಕ) ಮತ್ತು *'ಏಕಮಂಡಂ ಬಹುತ್ವೇನ ಪ್ರತ್ಯೇಕಂ ರೋಮಕೂಪಗಮ್ । ಬ್ರಹ್ಮಾಪಶ್ಯತ್ತಥಾಽಽತ್ಮಾನಂ ಹರೇಸ್ತೇಷು ಪೃಥಕ್ ಪೃಥಕ್'* (ಬ್ರಹ್ಮಾಂಡಪುರಾಣ) ವಾಕ್ಯಗಳನ್ನು ಉದಾಹರಿಸಿದ್ದಾರೆ. ಇವುಗಳ ಭಾವಾರ್ಥವೇನೆಂದರೆ:— ಶ್ರೀಹರಿಗೆ ಅನಂತರೂಪಗಳಿವೆ ಮತ್ತು ಬ್ರಹ್ಮಾಂಡವೆಂಬುದು ಪ್ರತಿ ಬ್ರಹ್ಮಕಲ್ಪದಲ್ಲಿ ಸೃಷ್ಟವಾಗುತ್ತದೆ — ಪ್ರಳಯದಲ್ಲಿ ನಷ್ಟವಾಗುತ್ತದೆ. ಹಿಂದೆ ಆಗಿಹೋದ ಮತ್ತು ಮುಂದಾಗುವ ಬ್ರಹ್ಮಾಂಡಗಳೂ ಅನಂತವಾಗಿವೆ - ಜಗತ್ಪ್ರವಾಹವು ನಿತ್ಯವಾದುದರಿಂದ. ಒಂದೊಂದು ರೂಪದಲ್ಲಿ ಸಹ ಚತುರ್ಮುಖನು, ಬ್ರಹ್ಮಾಂಡವನ್ನು ಕಂಡಿದ್ದಾನೆ. ಈ ಉಭಯವಿವಕ್ಷೆಯಿಂದ ಬ್ರಹ್ಮಾಂಡಕ್ಕೆ ಬಹುತ್ವವು ಹೇಳಲ್ಪಡುತ್ತದೆ - ಬೇರೆ ಪ್ರಕಾರದಿಂದಲ್ಲ. ಬ್ರಹ್ಮದೇವನು ತತ್ಕಾಲದಲ್ಲಿರುವ ಒಂದೇ ಬ್ರಹ್ಮಾಂಡವನ್ನು, ಶ್ರೀಹರಿಯ ರೋಮಕೂಪಗಳಲ್ಲಿ (ಒಂದೊಂದರಲ್ಲಿ ಒಂದೊಂದನ್ನು) ಬಹುಸಂಖ್ಯೆಯಲ್ಲಿ ಕಂಡನು. ಹೀಗೆ ಒಂದು ಕಾಲದಲ್ಲಿರುವ ಒಂದೇ ಬ್ರಹ್ಮಾಂಡವನ್ನು ಶ್ರೀಹರಿಯು ತನ್ನ ಅಚಿಂತ್ಯಸಾಮರ್ಥ್ಯದಿಂದ ಅನೇಕವಾಗಿ ಧರಿಸುತ್ತಾನೆ. *'ಬೃಹದಂಡಮಭೂದೇಕಂ'* (ಭಾರತ) ಎಂದೂ ಹೇಳಲಾಗಿದೆ.

ಅದರಿಂದ ಕೃಷ್ಣನಿಗೆ ಜನ್ಮವೆಂಬುದು ಸಲ್ಲ
ಮದನನಿವನ ಕುಮಾರನು
ಕದನದಿ ಕಣೆಗಳ ಇವನೆದೆಗೆಸೆವನೆ
ಸುದತೇರಿಗಿವನಿಂತು ಸಿಲುಕುವನೆ ॥ ಶೋಭಾನೆ ॥ ॥ ೪೩ ॥

ಅರ್ಥ:— ಅದರಿಂದ = ಶ್ರೀಕೃಷ್ಣನು ಈ ವಿಧವಾದ ಅದ್ಭುತ ಸಾಮರ್ಥ್ಯವುಳ್ಳವನಾದ್ದರಿಂದ, ಕೃಷ್ಣನಿಗೆ = ಶ್ರೀಕೃಷ್ಣನಿಗೆ, ಜನ್ಮವೆಂಬುದು = (ಪ್ರಾಕೃತರಂತೆ - ಅಜ್ಞಾನಿಗಳಂತೆ ಮಾತೃಗರ್ಭದಲ್ಲಿ ಬೆಳೆದು) ಹುಟ್ಟುವುದೆಂಬುದು, ಸಲ್ಲ = ಕೂಡುವುದಿಲ್ಲ (ಯುಕ್ತವಾಗುವುದಿಲ್ಲ), ಮದನನು = ಮನ್ಮಥನು, ಇವನ ಕುಮಾರನು = ಈ ಕೃಷ್ಣನ ಮಗನು ; ಕದನದಿ = (ಆತನು ತನ್ನ ಕಾರ್ಯಸಿದ್ಧಿಗಾಗಿ ನಡೆಸುವ) ಹೋರಾಟದಲ್ಲಿ, ಕಣೆಗಳ = ತನ್ನ ಬಾಣಗಳನ್ನು, ಇವನೆದೆಗೆ = (ತನ್ನ ತಂದೆಯಾದ) ಕೃಷ್ಣನ ಎದೆಗೆ, ಎಸೆವನೆ = ಬಿಡುವನೇ (ಶರತಾಡನದಿಂದ ಗೆಲ್ಲುವನೇ) — ಶ್ರೀಕೃಷ್ಣನು ಕಾಮವಶನಾಗುವನೇ ? ಸರ್ವಥಾ ಸಾಧ್ಯವಿಲ್ಲವೆಂದರ್ಥವನ್ನು ಪ್ರಶ್ನಾರ್ಥಕ 'ಕಾಕು' ಸ್ವರವು ಸೂಚಿಸುತ್ತದೆ) ; ಇಂತು = ಹೀಗೆ (ಮನ್ಮಥನಿಗೂ ಅಜೇಯನಾದ), ಇವನು = ಈ ಶ್ರೀಹರಿಯು, ಸುದತೇರಿಗೆ ಸ್ತ್ರೀಯರಿಗೆ, ಸಿಲುಕುವನೆ = ವಶನಾಗುವನೇ ? (ಸರ್ವಥಾ ಇಲ್ಲ).

ವಿಶೇಷಾಂಶ:— ಪೂರ್ಣಾನಂದಸ್ವರೂಪನಾದ ಶ್ರೀಹರಿಗೆ ಸ್ತ್ರೀಯರಲ್ಲಿ ಅತ್ಯುತ್ತಮಳಾದ ಲಕ್ಷ್ಮೀದೇವಿಯು ಸಹ, ರತಿಪ್ರದಳಲ್ಲ; ಅನ್ಯಸ್ತ್ರೀಯರನ್ನು ರತಿ ಸುಖಕ್ಕಾಗಿ ಅಪೇಕ್ಷಿಸುವನೇ ? ರತ್ಯರ್ಥವಾಗಿ ಸ್ತ್ರೀಯರ ಕಡೆಗೆ ಮನಸ್ಸನ್ನು ಸೆಳೆಯುವ ಕಾರ್ಯದಲ್ಲಿ, ಶ್ರೀಹರಿಯಿಂದಲೇ, ನಿಯೋಜಿತನಾದ ಮನ್ಮಥನು, ಶ್ರೀ ಕೃಷ್ಣನ ಮನಸ್ಸನ್ನು ವಿಕಾರಗೊಳಿಸಲು ಎಷ್ಟು ಮಾತ್ರಕ್ಕೂ ಶಕ್ತನಲ್ಲ. *"ರಮಯಾರಮಮಾಣೋಽಪಿ ತತ್ಸ್ಥೋsನ್ಯೈವ ಸ್ತ್ರೀಯಾತ್ಮನಾ । ರಮತೇ ನಾನ್ಯತಃ ಕ್ವಾಪಿ ರತಿರ್ವಿಷ್ಣೋಃಸುಖಾತ್ಮನಃ । ರಮಯಾ ರಮಣಂ ತಸ್ಮಾದ್ರಮಾಯಾ ರತಿಪಾತ್ರತಾ । ನೈವಾಸ್ಯಾ ರತಿದಾತೃತ್ವಂ ವಿಷ್ಣೋರ್ನಹ್ಯನ್ಯತೋ ರತಿಃ"* (ಐತರೇಯಭಾಷ್ಯ) ಎಂದರೆ, ಸ್ವರಮಣನಾದ ಶ್ರೀಹರಿಗೆ ಲಕ್ಷ್ಮೀದೇವಿಯೊಡನೆ ಕ್ರೀಡಿಸು- ವುದಾದರೂ, ಆಕೆಯಲ್ಲಿರುವ ತನ್ನ ಸ್ತ್ರೀರೂಪದೊಂದಿಗೇ ಆಗಿದೆ. ನಿತ್ಯಸುಖರೂಪನಾದ ವಿಷ್ಣುವಿಗೆ ಇತರರಿಂದ ಕ್ರೀಡಿಸುವುದೆಂಬುದು ಎಲ್ಲಿಯೂ ಇಲ್ಲ. ಆದ್ದರಿಂದ, ಲಕ್ಷ್ಮೀದೇವಿ- ಯಿಂದ ಕ್ರೀಡೆಯೆಂದರೆ, ಅಲ್ಲಿ ಲಕ್ಷ್ಮೀದೇವಿಯು ಕ್ರೀಡಾಪಾತ್ರಳೆಂದು ಮಾತ್ರ - ರತಿಪ್ರದತ್ವ (ಸುಖಪ್ರದಳೆಂಬುದು) ಇಲ್ಲವೇ ಇಲ್ಲವೆಂದು ತಿಳಿಯಬೇಕು. ವಿಷ್ಣುವಿನ ಕ್ರೀಡೆಗೆ ಪಾತ್ರ (ಯೋಗ್ಯ ಅಧಿಷ್ಠಾನ ಮಾತ್ರ)ಳಾಗಿರುತ್ತಾಳೆ. ಸುಖಪ್ರದಳಲ್ಲವೆಂದು ನಿರ್ಣಯಿಸಿ ಹೇಳಲಾಗಿದೆ. ಹೀಗಿರಲು, ಗೋಪಿಕಾಸ್ತ್ರೀಯರಾಗಲಿ, ಶ್ರೀಕೃಷ್ಣನ ಸಹಸ್ರಾರು ಪತ್ನಿಯ- ರಾಗಲಿ, ಆತನ ಮನಸ್ಸನ್ನು ಸೆಳೆಯಲು ಅಸಮರ್ಥರೆಂದು ಹೇಳಬೇಕಾದ್ದೇನಿದೆ ! ಮನ್ಮಥನ ಯಾವ ಯತ್ನವೂ (ಬಾಣಪ್ರಯೋಗಾದಿಗಳು) ಶ್ರೀಕೃಷ್ಣನ ವಿಷಯದಲ್ಲಿ, ಸಫಲವಾಗ- ಲಾರದೆಂಬುದನ್ನು, ತನ್ನನ್ನೇ ಸೃಷ್ಟಿಸಿದ ತಂದೆಯನ್ನೇ ಜಯಿಸಬಹುದೇ, ಅಥವಾ ತಂದೆಯ ಮೇಲಿನ ಪ್ರೀತಿಗೌರವಗಳಿರುವ ಮಗನು ಬಾಣಪ್ರಯೋಗದಿಂದ ತಂದೆಯನ್ನು ವಿರೋಧಿ ಸುವನೇ, ಉಭಯ ಪಕ್ಷಗಳೂ ಯುಕ್ತವಲ್ಲೆಂಬ ಯುಕ್ತಿಯನ್ನು ಸೂಚಿಸುತ್ತಾರೆ.

ಅದರಿಂದ ಕೃಷ್ಣನಿಗೆ ಪರನಾರಿ ಸಂಗ ಕೋ-
ವಿದರಾದ ಬುಧರು ನುಡಿವ-ರೆ
ಸದರವೆ ಈ ಮಾತು ಸರ್ವವೇದಂಗಳು
ಮುದದಿಂದ ತಾವು ಸ್ತುತಿಸುವುವು ॥ ಶೋಭಾನೆ ॥ ॥ ೪೬ ॥

ಅರ್ಥ:— ಅದರಿಂದ = ಹೀಗೆ ಶ್ರೀಕೃಷ್ಣನು ಪ್ರಾಕೃತದೇಹರಹಿತನೂ ಸ್ವರಮ- ಣನೂ ಆದ್ದರಿಂದ, ಕೃಷ್ಣನಿಗೆ, ಪರನಾರಿಸಂಗ = (ಲಕ್ಷ್ಮಿಯಲ್ಲಿ ಸಹ ತನ್ನ ಸ್ತ್ರೀರೂಪ- ದಿಂದಲೇ ರಮಿಸುವ ಶ್ರೀಹರಿಗೆ), ಅನ್ಯಸ್ತ್ರೀಯರಲ್ಲಿ ಕ್ರೀಡಿಸುವಿಕೆಯನ್ನು, ಕೋವಿದರಾದ ಬುಧರು = ವಿಚಕ್ಷಣರಾದ ಜ್ಞಾನಿಗಳು, ನುಡಿವರೆ = ಹೇಳುವರೇ (ಹಾಗೆಂದೂ ತಿಳಿಯರು

ಮತ್ತು ನುಡಿಯರು); ಈ ಮಾತು = (ಶ್ರೀಕೃಷ್ಣನು ಗೋಪಿಕಾದಿ ಅನ್ಯಸ್ತ್ರೀಸಂಗವುಳ್ಳ ಜಾರನೆಂಬ) ಈ ಮಾತು, ಸದರವೆ = ನಂಬಲು (ಅಥವಾ ಆರೋಪಿಸಲು ಸುಲಭವೇ ?) (ಬುದ್ಧಿಮೋಹವುಳ್ಳ ಅಜ್ಞಾನಿಗಳು ಶ್ರೀಕೃಷ್ಣನಲ್ಲಿ ಜಾರತ್ವಾದಿ ದೋಷಗಳನ್ನು ತಿಳಿಯಬಹುದಲ್ಲದೇ ಜ್ಞಾನಿಗಳು ಎಂದೂ ಒಪ್ಪುವ ಮಾತಲ್ಲ) ; ಸರ್ವವೇದಂಗಳು = ಸಕಲವೇದಗಳು (ಲಕ್ಷ್ಮೀದೇವಿಯೇ ಮೊದಲಾದ ಎಲ್ಲ ವೇದಾಭಿಮಾನಿ ದೇವತೆಗಳು), ಮುದದಿಂದ = ಸಂತೋಷದಿಂದ (ಬುದ್ಧಿಪೂರ್ವಕವಾಗಿ), ತಾವು = ತಾವೇ, ಸ್ತುತಿಸುವುವು = (ಶ್ರೀಕೃಷ್ಣನನ್ನು ನಿರ್ದೋಷನೆಂದು) ಸ್ತುತಿಸುತ್ತವೆ (ಹೊಗಳುತ್ತಾರೆ).

ವಿಶೇಷಾಂಶ:— 'ಗುಣಾಃಶ್ರುತಾಃಸುವಿರುದ್ಧಾಶ್ಚ ದೇವೇ ಸಂತ್ಯಶ್ರುತಾ ಅಪಿ ನೈವಾತ್ರಶಂಕಾ । ಚಿಂತ್ಯಾ ಅಚಿಂತ್ಯಾಶ್ಚ ತಥೈವ ದೋಷಾಃಶ್ರುತಾಶ್ಚ ನಾಜ್ಞೈರ್ಹಿ ತಥಾ ಪ್ರತೀತಾಃ' ಎಂಬ ಶ್ರುತಿಯು, 'ಲೋಕದೃಷ್ಟಿಯಲ್ಲಿ ಅತ್ಯಂತ ವಿರುದ್ಧಗಳೆಂಬ ಅಣುತ್ವ, ಮಹತ್ವಾದಿ ಶುಭಧರ್ಮಗಳು ಶ್ರೀಹರಿಯಲ್ಲಿವೆ ; ವೇದಗಳಲ್ಲಿ ಶ್ರುತಗಳಾದ (ಹೇಳಲ್ಪಡುವ) ಗುಣಗಳು ಮಾತ್ರವಲ್ಲ - ವೇದಾನುಕ್ತವಾದ ರಮಾಬ್ರಹ್ಮಾದಿಗಳಿಂದ ಚಿಂತ್ಯವಾದ (ಧ್ಯಾನಿಸಲ್ಪಡುವ) ಅಶ್ರುತಗುಣಗಳೂ ಶ್ರೀಹರಿಯಲ್ಲಿವೆ ; ಇಷ್ಟು ಮಾತ್ರವಲ್ಲ; ಇವರಿಂದ ಸಹ ಅಚಿಂತ್ಯವಾದ ಗುಣಗಳೂ ಇವೆ ; ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ ; ಶ್ರೀಹರಿಯಲ್ಲಿ ದೋಷಗಳು ಇಲ್ಲವೇ ಇಲ್ಲ; ಮಿಥ್ಯಾಜ್ಞಾನಿಗಳಿಗೆ ಮಾತ್ರ ದೋಷಗಳಿದ್ದಂತೆ ತೋರಬಹುದು.

ವೇದಗಳು ನಿರ್ದೋಷನೆಂದೇ ಹೇಳುತ್ತವೆ. ಅಜ್ಞಾನಿಗಳಿಂದ ಚಿಂತ್ಯವಾದ (ಕಲ್ಪಿಸಲ್ಪಡಬಹುದಾದ) ಯಾವ ದೋಷವೂ ಇಲ್ಲ; ಅಚಿಂತ್ಯವಾದ ದೋಷಗಳಿಲ್ಲವೆಂದು ಏನು ಹೇಳತಕ್ಕದ್ದು ಎಂದು ಹೇಳುತ್ತದೆ. '*ನ ದೋಷಃಪರಮೇ ಕಶ್ಚಿದ್ಗುಣಾ ಏವ ನಿರಂತರಾಃ*', '*ಯೇ ದೋಷಾ ಇತರತ್ರಾಪಿ ತೇ ಗುಣಾಃ ಪರಮೇ ಮತಾಃ*' ಎಂಬ ಶ್ರುತಿವಾಕ್ಯಗಳು, 'ಪರಮಾತ್ಮನಲ್ಲಿ ಯಾವ ದೋಷವೂ ಇಲ್ಲ ; ಅವನಿಂದ ಅಭಿನ್ನಗಳಾದ ಗುಣಗಳೇ ಇವೆ' 'ಇತರರಲ್ಲಿ (ಜೀವರಲ್ಲಿ) ಕಂಡುಬರುವ ದೋಷಗಳು ದೋಷಗಳೇ. (ಜೀವರಲ್ಲಿ ದೋಷವಿಲ್ಲೆಂದು ಕಲ್ಪಿಸಲು ಪ್ರಮಾಣಗಳಿಲ್ಲ) ; ಅಂತಹ ದೋಷಗಳು ಅಚಿಂತ್ಯಶಕ್ತಿಯುಳ್ಳ ಪರಮಾತ್ಮನಲ್ಲಿ ಗುಣರೂಪಗಳೇ ಆಗಿವೆ. (ಬಹುಭೋಕ್ತೃತ್ವವು ಜೀವರಲ್ಲಿ ದೋಷವೆನಿಸಿದರೂ ಸರ್ವಭಕ್ಷಕನಾದ ಶ್ರೀಹರಿಯಲ್ಲಿ, ಆತನ ಅಚಿಂತ್ಯಶಕ್ತಿಯುಳ್ಳ ಪರಮಾತ್ಮನಲ್ಲಿ ಗುಣರೂಪಗಳೇ ಆಗಿವೆ. (ಬಹುಭೋಕ್ತೃತ್ವವು ಜೀವರಲ್ಲಿ ದೋಷವೆನಿಸಿದರೂ ಸರ್ವಭಕ್ಷಕನಾದ ಶ್ರೀಹರಿಯಲ್ಲಿ, ಆತನ ಅಚಿಂತ್ಯಶಕ್ತಿದ್ಯೋತಕ ಗುಣವೇ ಆಗಿರುವಂತೆ).'

ಎಂದ ಭಾಗವತದ ಚೆಂದದ ಮಾತನು
ಮಂದಮಾನವ ಮನಸಿಗೆ
ತಂದುಕೊ ಜಗಕೆ ಕೈವಲ್ಯವನೀವ ಮು-
ಕುಂದಗೆ ಕುಂದು ಕೊರತಿಲ್ಲ॥ ಶೋಭಾನೆ ॥ ॥ ೪೭ ॥

ಅರ್ಥ:— ಎಂದ ಭಾಗವತದ = ಪರನಾರೀಸಂಗವನ್ನು ಮಾಡಿದನೆಂದು ಹೇಳುವ ಭಾಗವತದಲ್ಲಿರುವ, ಚೆಂದದ ಮಾತನು = ಶ್ರೀಕೃಷ್ಣನ ಮಹಿಮೆಯನ್ನೇ ಹೇಳುವ ಮಂಗಳಕರ ನುಡಿಯನ್ನು, ಮಂದಮಾನವ = ಹೇ ಮೂರ್ಖಮನುಷ್ಯ ! ಮನಸ್ಸಿಗೆ = ಮನಸ್ಸಿನಲ್ಲಿ, ತಂದುಕೊ = ವಿಚಾರಮಾಡು ; ಜಗಕೆ = ಸಜ್ಜನ ಲೋಕಕ್ಕೆ, ಕೈವಲ್ಯವನೀವ = ಮೋಕ್ಷವನ್ನು ಕೊಡುವ, ಮುಕುಂದಗೆ = (ಆದ್ದರಿಂದಲೇ) ಮುಕುಂದನೆಂದು ಕರೆಯ-ಲ್ಪಡುವ ಶ್ರೀಕೃಷ್ಣನಿಗೆ, ಕುಂದುಕೊರತೆ = ದೋಷವಾಗಲಿ, ಅಪೂರ್ಣತ್ವವಾಗಲಿ, ಇಲ್ಲ = ಹೇಳುವುದು ಯುಕ್ತವಲ್ಲ.

ವಿಶೇಷಾಂಶ:— ಶ್ರೀಹರಿಯು ದೋಷಶೂನ್ಯನು ಮಾತ್ರವಲ್ಲ — ಗುಣ-ಪೂರ್ಣನೂ ಆಗಿದ್ದಾನೆ. ಒಂದೊಂದು ಗುಣವೂ ಪೂರ್ಣವಾಗಿದೆ ; — ಅನಂತವಾಗಿದೆ. *"ಪ್ರತ್ಯೇಕಂ ತು ಗುಣಾಃ ಸರ್ವೇಽಪ್ಯನಂತಾನಂತಧಾ ಮತಾಃ"* (ಸ.ರ.ಮಾ.)-ಶ್ರೀಹರಿಯ ಜ್ಞಾನಾನಂದಾದಿ ಒಂದೊಂದು ಗುಣವೂ ಪ್ರತ್ಯೇಕವಾಗಿ ಅನಂತಾನಂತಪ್ರಕಾರವಾಗಿದ್ದು ಪೂರ್ಣವೇ ಆಗಿರುವುದು. "ಪ್ರತ್ಯೇಕಶೋ ಗುಣಾನಾಂ ತು ನಿಸ್ಸೀಮತ್ವಮುದೀರ್ಯತೇ" (ಭಾಗ. ಸಪ್ತ. ತಾ.) - ಶ್ರೀಹರಿಯ ಗುಣಗಳಿಗೆ, ಒಂದೊಂದಕ್ಕೂ ಪ್ರತ್ಯೇಕವಾಗಿ ನಿಸ್ಸೀಮತ್ವವು (ಅಪಾರತ್ವ - ಪರಿಪೂರ್ಣತ್ವವು) ವೇದಗಳಲ್ಲಿ ಹೇಳಲ್ಪಡುತ್ತದೆ.

ಹತ್ತು ವರ್ಷದ ಕೆಳಗೆ ಮಕ್ಕಳಾಟಿಕೆಯಲ್ಲಿ
ಚಿತ್ತ ಸ್ತ್ರೀಯರಿಗೆ ಎರಗುವುದೆ
ಅರ್ತಿಯಿಂದರ್ಚಿಸಿದ ಗೋಕುಲದ ಕನ್ಯೆಯರ
ಸತ್ಯಸಂಕಲ್ಪ ಬೆರೆತಿದ್ದ॥ ಶೋಭಾನೆ ॥ ॥ ೪೮ ॥

ಅರ್ಥ:— ಹತ್ತುವರ್ಷದ ಕೆಳಗೆ = ಹತ್ತುವರ್ಷಸಹ ತುಂಬದಿರುವಾಗ, ಮಕ್ಕಳಾಟಿಕೆಯಲ್ಲಿ = ಆಟಪಾಟಗಳಲ್ಲಿ ತೊಡಗಿದ ಮಕ್ಕಳಿಗೆ, ಚಿತ್ತ = ಮನಸ್ಸು, ಸ್ತ್ರೀಯರಿಗೆ ಎರಗುವುದೆ = ಸ್ತ್ರೀಯರನ್ನು (ಸಂಗಕ್ಕಾಗಿ) ಚಿಂತಿಸುವುದೇ ? (ಲೋಕದಲ್ಲಿ ಎಳೆಯ ಬಾಲಕರಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ) ; ಸತ್ಯಸಂಕಲ್ಪ = ಸತ್ಯ ಸಂಕಲ್ಪನಾದ ಶ್ರೀಕೃಷ್ಣ-ನಾದರೋ (ಕೇವಲ ಎಂಟು ವರ್ಷದ ಚಿಕ್ಕ ಬಾಲಕನಾಗಿದ್ದಾಗಲೇ), ಅರ್ತಿಯಿಂದ =

ಪ್ರೇಮದಿಂದ, ಅರ್ಚಿಸಿದ = ತನ್ನನ್ನು ಸೇವಿಸಿದ, ಗೋಕುಲದ ಕನ್ಯೆಯರ = ಗೋಕುಲದ ಕನ್ನಿಕೆಯರನ್ನು, ಬೆರೆತಿದ್ದ = ಕೂಡಿದನು.

ವಿಶೇಷಾಂಶ:— ಶ್ರೀಕೃಷ್ಣನು, ಉಪನಯನ ಸಂಸ್ಕಾರವನ್ನು ಹೊಂದುವ ಮೊದಲೇ ತನ್ನ ಅಂಗಸಂಗವನ್ನು ಪ್ರಾರ್ಥಿಸಿ, ವರವನ್ನು ಪಡೆದು, ಗೋಪಿಕಾ ಸ್ತ್ರೀಯರಾಗಿ ಹುಟ್ಟಿದ್ದ ಅಪ್ಸರೆಯರನ್ನು, ಸತ್ಯಸಂಕಲ್ಪನಾದ್ದರಿಂದ, ವರ ಕೊಟ್ಟಂತೆ ನಡೆಸಿಕೊಡಲಿಕ್ಕಾಗಿ, ಅವರನ್ನು ಅನುಗ್ರಹಿಸಿ, ಅಂಗಸಂಗವನಿತ್ತನು.

"*ಗೋಪಾಂಗನಾ ಅಪಿ ಪುರಾ ವರಮಾಪಿರೇ ಯತ್ । ಸಂಸ್ಕಾರತಃಪ್ರಥಮಮೇವ ಸುಸಂಗಮೋ ನೋ । ಭೂಯಾತ್ತವೇತಿ ಪರಮಾತ್ಸರಸಃಪುರಾ ಯಾಃ । ಕಾತ್ಯಾಯನೀ-ವ್ರತಧರಾಃ ಸ್ವಪತಿತ್ವಹೇತೋಃ । ಕನ್ಯಾ ಉವಾಹ ಭಗವಾನಪರಾಶ್ಚ ಗೋಪೀಃ ।* (ಭಾರತ-ತಾತ್ಪರ್ಯನಿರ್ಣಯ). ಇವುಗಳ ಭಾವಾರ್ಥ:— ಗೋಪಿಕಾ ಸ್ತ್ರೀಯರು, ಪೂರ್ವದಲ್ಲಿ ವರವನ್ನು ಪಡೆದಿದ್ದರು – ಶ್ರೀಕೃಷ್ಣಾವತಾರದಲ್ಲಿ ಉಪನಯನಕ್ಕೆ ಮೊದಲೇ ನಿನ್ನ ಅಂಗಸಂಗ ದೊರೆಯಲೆಂದು. ಈ ಸ್ತ್ರೀಯರು ಶ್ರೀಹರಿಯ ಅಂಗಸಂಗಕ್ಕೆ ಯೋಗ್ಯರಾದ ಉತ್ತಮ ಅಪ್ಸರೆಯರು. ಶ್ರೀಕೃಷ್ಣನೇ ತಮಗೆ ಪತಿಯಾಗಬೇಕೆಂದು ಕಾತ್ಯಾಯನೀವ್ರತವನ್ನು ಆಚ-ರಿಸುತ್ತಿದ್ದ ಗೋಪಕನ್ಯೆಯರನ್ನೂ (ಇವರೂ ಪರಮಾತ್ಮನ ಅಂಗಸಂಗಕ್ಕೆ, ಕಾಲವಿಶೇಷದಲ್ಲಿ ಲಕ್ಷ್ಮೀಸನ್ನಿಧಾನಬಲದಿಂದ, ಅರ್ಹರಾದ ಉತ್ತಮ ಅಪ್ಸರೆಯರ ಗುಂಪಿಗೆ ಸೇರಿದವರು) ವರ ಪಡೆದಿದ್ದ ಇತರ ಗೋಪಿಕಾಸ್ತ್ರೀಯರನ್ನೂ ಕೂಡಿ, (ಕನ್ಯೆಯರನ್ನು ವಿವಾಹ ಮಾಡಿಕೊಂಡು –ಉಪನಯನಾತ್ಪೂರ್ವದಲ್ಲಿಯೇ, ವಿವಾಹವಿಧಿಬದ್ಧನಲ್ಲದ ಸ್ವತಂತ್ರನೂ ಸತ್ಯಸಂಕಲ್ಪನೂ ಆದ್ದರಿಂದ), ಅವರೊಡನೆ ಕ್ರೀಡಿಸಿ ಆನಂದವನ್ನಿತ್ತನು. ಈ ವಿಧದ ಅಪ್ಸರೆಯರಿರುವರೆಂಬಲ್ಲಿಯೂ, ಅಂಥವರಲ್ಲದ ಇತರ ಸ್ತ್ರೀಯರು ಭಗವಂತನನ್ನು ತಮ್ಮ ಪತಿಯೆಂದು ಸ್ಮರಿಸುವುದು ಸಹ ಮಹಾದೋಷವೆಂಬಲ್ಲಿಯೂ, ಭಾಗವತತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಉದಾಹರಿಸಿರುವ ಪ್ರಮಾಣವಾಕ್ಯವು ಹೀಗಿದೆ :—

'*ಭಗವದ್ಭಾರ್ಯತಾಯೋಗ್ಯಾಃ ಕಾಶ್ಚಿದಪ್ಸರಸಃಸ್ತ್ರಿಯಃ । ರಮಾವೇಶಾತ್ಕದಾಚಿತ್ ಸ್ಯುಃ ತಾಸ್ವೇಕಾ ಪಿಂಗಳಾಽಭವತ್ । ತದನ್ಯಾಸಾಂ ಮಹಾದೋಷಃ ಭಗವದ್ಭರ್ತೃತಾ-ಸ್ಮೃತೌ ॥* (ಇತಿ ಸ್ವಾಭವ್ಯೇ) ಭಾವಾರ್ಥ:— 'ಭಗವಂತನ ಪತ್ನೀಭಾವವನ್ನು ಹೊಂದ-ಲರ್ಹರಾದ ಕೆಲವು ಅಪ್ಸರಸ್ತ್ರೀಯರಿದ್ದಾರೆ ; ರಮಾವೇಶದಿಂದ ಕಾಲವಿಶೇಷಮಾತ್ರದಲ್ಲಿ ಅವರು ಪತ್ನೀಭಾವವನ್ನು ಹೊಂದುತ್ತಾರೆ – ಶ್ರೀಹರಿಯ ಅಂಗಸಂಗವನ್ನು ಪಡೆಯುತ್ತಾರೆ. ಅಂಥವರ ಮಧ್ಯೆ ಪಿಂಗಳಾನಾಮಕ ವೇಶ್ಯೆಯೂ ಒಬ್ಬಳು. ಇತರರಿಗೆ (ಅನ್ಯ ಅಪ್ಸರೆಯರೇ ಮೊದಲಾದ ಸ್ತ್ರೀಯರಿಗೆ) ಭಗವಂತನನ್ನು ಪತಿಯನ್ನಾಗಿ ಚಿಂತಿಸುವುದು ಸಹ ಮಹಾದೋಷವು.

ಹತ್ತುಮತ್ತಾರು ಸಾವಿರ ಸ್ತ್ರೀಯರಲ್ಲಿ
ಹತ್ತುಹತ್ತೆನಿಪ ಕ್ರಮದಿಂದ
ಪುತ್ರರ ವೀರ್ಯದಲಿ ಸೃಷ್ಟಿಸಿದವರುಂಟೆ
ಅರ್ತಿಯ ಸೃಷ್ಟಿ ಹರಿಗಿದು ॥ ಶೋಭಾನೆ ॥ ॥ ೪೯ ॥

ಅರ್ಥ:— ಹತ್ತುಮತ್ತಾರುಸಾವಿರ = ಹದಿನಾರುಸಾವಿರ, ಸ್ತ್ರೀಯರಲ್ಲಿ = ತನ್ನ ಹೆಂಡತಿಯರಲ್ಲಿ, ಹತ್ತು ಹತ್ತೆನಿಪ ಕ್ರಮದಿಂದ = ಪ್ರತಿಯೊಬ್ಬ ಹೆಂಡತಿಯಲ್ಲಿ ಹತ್ತು ಹತ್ತರಂತೆ = (ಹೆಚ್ಚು ಕಡಿಮೆಯಿಲ್ಲದೇ), ಪುತ್ರರ = ಮಕ್ಕಳನ್ನು, ವೀರ್ಯದಲ್ಲಿ = ತನ್ನ ರೇತಸ್ಸಿನಿಂದ, ಸೃಷ್ಟಿಸಿದವರುಂಟೆ = ಹುಟ್ಟಿಸಿದವರು ಜಗತ್ತಿನಲ್ಲಿ ಯಾವ ಪುರುಷನಾದರೂ ಇರುವನೇ ? ಹರಿಗೆ = ಶ್ರೀಹರಿಗಾದರೋ, ಇದು = ಹೀಗೆ ಪ್ರತಿಯೊಬ್ಬರಿಗೂ ಹತ್ತು ಹತ್ತರಂತೆ ಮಕ್ಕಳನ್ನು ಅನುಗ್ರಹಿಸಿದುದು, ಅರ್ತಿಯ ಸೃಷ್ಟಿ = ಲೀಲೆಯ ಸೃಷ್ಟಿಯು.

ವಿಶೇಷಾಂಶ:— 'ಏಕೈಕಶಸ್ತಾಃ ಕೃಷ್ಣಸ್ಯ ಪುತ್ರಾನ್ ದಶ ದಶಾಬಲಾಃ । ಅಜೀಜನ್ನ ನವಮಾನ್ ಪಿತುಃ ಸರ್ವಾತ್ಮಸಂಪದಾ' (ಭಾಗವತ). ಆ ೧೬,೧೦೮ ಪತ್ನಿಯರು ಪ್ರತಿಯೊಬ್ಬರೂ ಹತ್ತು ಹತ್ತು ಗಂಡುಮಕ್ಕಳನ್ನು ಶ್ರೀಕೃಷ್ಣನಿಂದ ಪಡೆದರು - ಆ ಪುತ್ರರೆಲ್ಲರೂ ಸೌಂದರ್ಯದಲ್ಲಿ ಶ್ರೀಕೃಷ್ಣನಿಗೇನೂ ಕಡಿಮೆ ಇರಲಿಲ್ಲ (ಅನವಮಾನ್). ಶ್ರೀಕೃಷ್ಣನಂತೆ ಮಹಾಸುಂದರರಾಗಿದ್ದರೆಂದರ್ಥ. ಯಾವ ಲೌಕಿಕಪುರುಷನಿಗೂ ಇಲ್ಲದ ಶ್ರೀಕೃಷ್ಣನ ಈ ಅದ್ಭುತ ಸಾಮರ್ಥ್ಯವು, ಆತನು, 'ವಿಚಿತ್ರಶಕ್ತಿರ್ವಿವಿಧೈವ ಶ್ರೂಯತೇ' - 'ವಿಚಿತ್ರಶಕ್ತಿಯುಳ್ಳ ಶ್ರೀಹರಿಯ ಮಹಿಮೆಗಳು ಬಹುಪ್ರಕಾರವು' ಎಂದು ಶ್ರುತಿಯಲ್ಲಿ ಹೇಳಲಾದ ಪರಬ್ರಹ್ಮನೇ ಎಂಬುದನ್ನು ಸಾಧಿಸುತ್ತದೆಂಬ ಯುಕ್ತಿಯು ಸೂಚಿತವಾಗಿದೆ.

ರೋಮರೋಮಕೂಪ ಕೋಟಿವೃಕಂಗಳ
ನಿರ್ಮಿಸಿ ಗೋಪಾಲರ ತೆರಳಿಸಿದ
ನಮ್ಮ ಶ್ರೀಕೃಷ್ಣನು ಮಕ್ಕಳ ಸೃಜಿಸುವ
ಮಹಿಮೆ ಬಲ್ಲವರಿಗೆ ಸಲಹಲಿಕೆ ॥ ಶೋಭಾನೆ ॥ ॥ ೫೦ ॥

ಅರ್ಥ:— ರೋಮರೋಮಕೂಪ = ತನ್ನ ಪ್ರತಿರೋಮಕೂಪಗಳಿಂದ, ಕೋಟಿ = ಕೋಟಿಶಃ, ವೃಕಂಗಳ = ತೋಳಗಳನ್ನು, ನಿರ್ಮಿಸಿ = ಸೃಷ್ಟಿಸಿ, ಗೋಪಾಲರ = ಗೋಪಾಲಕರನ್ನು, ತೆರಳಿಸಿದ = (ಗ್ರಾಮವನ್ನು ಬಿಟ್ಟು) ಹೊರಡಿಸಿದ, ನಮ್ಮ ಶ್ರೀಕೃಷ್ಣನು = ನಮ್ಮ ಹೆಮ್ಮೆಯ ಕೃಷ್ಣಪ್ರಭು, ಮಕ್ಕಳ ಸೃಜಿಸುವ = (ಹಿಂದೆ ಹೇಳಿದಂತೆ ಹತ್ತುಹತ್ತರಂತೆ) ಮಕ್ಕಳನ್ನು ಸೃಷ್ಟಿಸುವ, ಮಹಿಮೆ = ಮಹಿಮೆಯು (ತನ್ನ ಅದ್ಭುತಶಕ್ತಿಯನ್ನು ಪ್ರಕಟಿಸಿದುದು), ಬಲ್ಲವರಿಗೆ = ವಿವೇಕಿಗಳಿಗೆ (ಭಕ್ತರ ಕಣ್ಣು ತೆರೆಸಿ), ಸಲಹಲಿಕೆ =

(ಅದರಿಂದ ಅವರಿಗೆ ತನ್ನ ಮಹಿಮಾಜ್ಞಾನವನ್ನುಂಟುಮಾಡಿ) ಅವರನ್ನು ರಕ್ಷಿಸುವುದಕ್ಕಾಗಿ, (ಬೇರಾವ ಕಾರಣವಿಲ್ಲ).

ವಿಶೇಷಾಂಶ:— ಶ್ರೀಕೃಷ್ಣನು ಇನ್ನೂ ೫-೬ ವರ್ಷದ ಬಾಲಕನಾಗಿರುವಾಗ, ಗೋಕುಲವನ್ನು ಬಿಟ್ಟು ಮನೋಹರವಾದ "**ವೃಂದಾವನ**"ವೆಂಬ ಕಾನನದಲ್ಲಿ ವಿಹರಿಸಲಿಚ್ಛಿಸಿದನು. ಗೋಪಾಲರು ಗೋಕುಲದಲ್ಲಿ ಎಷ್ಟೇ ಉತ್ಪಾತಗಳನ್ನು ಕಂಡರೂ, ಗ್ರಾಮವನ್ನು ತೊರೆದು ಅನ್ಯತ್ರ ಹೋಗಲು ಇಷ್ಟಪಡದಿರುವುದನ್ನು ಕಂಡು, ತನ್ನ ರೋಮಕೂಪಗಳಿಂದ ಕೋಟಿಶಃ ಉಗ್ರವಾದ ತೋಳಗಳನ್ನು ನಿರ್ಮಿಸಿದನು. ಆಗ ಅನ್ಯೋಪಾಯವಿಲ್ಲದೇ ಗೋಪಾಲಕರು ಗ್ರಾಮವನ್ನು ಕಿತ್ತು ಅನ್ಯತ್ರ ಹೋಗಿ ನೆಲೆಸಲು ಸಿದ್ಧರಾದರು. ಈ ಅದ್ಭುತ ಸೃಷ್ಟಿಯನ್ನು ಇಚ್ಛಾಮಾತ್ರದಿಂದ ಮಾಡಿದ ಶ್ರೀಕೃಷ್ಣನಿಗೆ ಹತ್ತು ಹತ್ತು ಮಕ್ಕಳನ್ನು ತನ್ನ ಹೆಂಡರಿಗೆ ಅನುಗ್ರಹಿಸುವುದೇನಾಶ್ಚರ್ಯವೆನ್ನುತ್ತಾರೆ. ಸ್ವಭಕ್ತರಿಗೆ ಸ್ವಮಹಿಮೆಯ ಜ್ಞಾನವನ್ನುಂಟುಮಾಡಿ ಅವರನ್ನು ಸಲಹಬೇಕೆಂಬ ಇಚ್ಛೆಯೇ ಈ ವಿಧ ಲೀಲೆಗಳ ರೂಪದಿಂದ ಪ್ರಕಟವಾಗುವುದೆಂದು ಹೇಳುತ್ತಾರೆ.

"*ವೃಂದಾವನಮಿಯಾಸುಃಸನ್ ನಂದಸೂನುರ್ಬೃಹದ್ವನೇ । ಸಸರ್ಜ ರೋಮಕೂಪೇಭ್ಯೋ ವೃಕಾನ್ ವ್ಯಾಘ್ರಸಮಾನ್ ಬಲೇ ॥ ಅನೇಕಕೋಟಿ ಸಂಘೈಸ್ತೈಃ ಪೀಡ್ಯ ಮಾನಾ ವ್ರಜಾಲಯಾಃ । ಯಯುರ್ವೃಂದಾವನಂ ನಿತ್ಯಾನಂದಮಾದಾಯ ನಂದಜಂ*" ಎಂದು (ಭಾ.ತಾ.ನಿ.) ಈ ಮಹಿಮೆಯ ವರ್ಣನೆಯಿದೆ. "ವೃಂದಾವನಕ್ಕೆ ಹೋಗಬೇಕೆಂದಿಚ್ಛಿಸಿದ ಶ್ರೀಕೃಷ್ಣನು, ತನ್ನ ರೋಮಕೂಪಗಳಿಂದ ಅನೇಕ ಕೋಟಿ, ಹುಲಿಗಳಂತಿರುವ ತೋಳಗಳನ್ನು ನಿರ್ಮಿಸಿದನು. ಅವುಗಳಿಂದ ಪೀಡಿತರಾದ ಗೋಪಾಲರು ನಂದಕುಮಾರನಾದ ನಿತ್ಯಾನಂದಸ್ವರೂಪೀ ಶ್ರೀಕೃಷ್ಣನನ್ನು ಕರೆದುಕೊಂಡು ವೃಂದಾವನಕ್ಕೆ ತೆರಳಿದರು" ಎಂಬುದು ಈ ವಾಕ್ಯಗಳ ಭಾವಾರ್ಥವಾಗಿದೆ.

ಮಣ್ಣನೇಕೆ ಮೆದ್ದೆಯೆಂಬ ಯಶೋದೆಗೆ
ಸಣ್ಣ ಬಾಯೊಳಗೆ ಜಗಂಗಳ
ಕಣ್ಣಾರೆ ತೋರಿದ ನಮ್ಮ ಶ್ರೀಕೃಷ್ಣನ
ಘನ್ನತೆ ಬಲ್ಲವರಿಗೆ ಸಲಹಲಿಕೆ ॥ ಶೋಭಾನೆ ॥ ॥ ೫೦ ॥

ಅರ್ಥ:— ಮಣ್ಣನು = ಮಣ್ಣನ್ನು, ಏಕೆ ಮೆದ್ದೆಯೆಂಬ = (ನಿನ್ನ ಜೊತೆ ಹುಡುಗರು ತಿಂದೆಯೆಂದು ಹೇಳುತ್ತಾರೆ) ಅದೇಕೆ ತಿಂದೆ ? ಎಂದು ಕೇಳಿದ ಯಶೋದೆಗೆ, ಸಣ್ಣ ಬಾಯೊಳಗೆ = ತನ್ನ ಚಿಕ್ಕಬಾಯನ್ನು ಅಗಲಿಸಿ, ಅದರೊಳಗೆ, ಜಗಂಗಳ = ಸಮಸ್ತಲೋಕಗಳನ್ನು (ವಿಶ್ವವನ್ನೇ), ಕಣ್ಣಾರೆ = ಪ್ರತ್ಯಕ್ಷವಾಗಿ, ತೋರಿದ = ತೋರಿಸಿದ, ನಮ್ಮ

ಕೃಷ್ಣನ = ಭಕ್ತರೊಡೆಯ ಶ್ರೀಕೃಷ್ಣನ, ಘನ್ನತೆ = ಮಹಿಮೆಯು (ಔದಾರ್ಯವು), ಬಲ್ಲವರ = ವಿವೇಕಿಗಳನ್ನು, ಸಲಹಲಿಕೆ = ರಕ್ಷಿಸುವುದಕ್ಕಾಗಿಯೇ ಸರಿ.

ವಿಶೇಷಾಂಶ:— ತನ್ನ ವಿಷಯಕವಾದ ಭಕ್ತರ ಅಜ್ಞಾನವನ್ನು ಪರಿಹರಿಸಲಿಕ್ಕಾಗಿಯೇ ಶ್ರೀಕೃಷ್ಣನು ಮಹಿಮೆಗಳನ್ನು ಪ್ರದರ್ಶಿಸುವನೆಂಬ ಪ್ರಮೇಯವನ್ನು ದೃಢಪಡಿಸಲಿಕ್ಕಾಗಿ ಅನ್ಯಮಹಿಮೆಗಳನ್ನು ನಿರೂಪಿಸುತ್ತಾರೆ. ಮಹಿಮಾಪ್ರದರ್ಶನವು ಈ ಉದ್ದೇಶಕ್ಕಾಗಿಯೇ ಎಂದು, *"ಸ ಕದಾಚಿಚ್ಛಿಶುಭಾವಂ ಕುರ್ವಂತ್ಯಾಮಾತುರಾತ್ಮನೋ ಭೂಯಃ । ಅಪನೇತುಂ ಪರಮೇಶೋ ಮೃದಂ ಜಘಾಸೇಕ್ಷತಾಂ ವಯಸ್ಯಾನಾಮ್ ॥"* (ಭಾ.ತಾ.ನಿ.) ಎಂಬಲ್ಲಿ ಸ್ಪಷ್ಟಗೊಳಿಸಿರುವರು. ಇದರ ಭಾವಾರ್ಥ ಹೀಗಿದೆ:— ತನ್ನಲ್ಲಿ ಅತಿಶಯವಾಗಿ ಶಿಶುಭಾವವನ್ನು ಹೊಂದಿದ ತನ್ನ ತಾಯಿ ಯಶೋದಾದೇವಿಯ ಆ ಶಿಶುಭಾವವನ್ನು (ತನ್ನ ಮಗನೆಂಬ ಭಾವವನ್ನು) ಪರಿಹರಿಸಲಿಕ್ಕಾಗಿ ತನ್ನ ಗೆಳೆಯರೆದುರಿಗೇ, ಶ್ರೀಕೃಷ್ಣನು ಮಣ್ಣನ್ನು ತಿಂದನು.

ನಾರದಸನಕಾದಿ ಮೇಲಾದ ಯೋಗಿಗಳು
ನಾರಿಯರಿಗೆ ಮರುಳಾಹರೆ
ಓರಂತೆ ಶ್ರೀಕೃಷ್ಣನಡಿಗಡಿಗೆರಗುವರೆ
ಆರಾಧಿಸುತ್ತ ಭಜಿಸುವರೆ ॥ ಶೋಭಾನೆ ॥ ॥ ೫೨ ॥

ಅರ್ಥ:— ನಾರದಸನಕಾದಿ ಮೇಲಾದ ಯೋಗಿಗಳು = ನಾರದ, (ಬ್ರಹ್ಮಮಾನಸ ಪುತ್ರರಾದ) ಸನಕ ಮೊದಲಾದ ಶ್ರೇಷ್ಠಜ್ಞಾನಯೋಗಿಗಳು, ನಾರಿಯರಿಗೆ = ಸ್ತ್ರೀಯರಿಗೆ, ಮರುಳಾಹರೆ = ಮರುಳಾಗುವರೇ ? (ಇಲ್ಲ), ಓರಂತೆ = (ಇಂಥ ಜ್ಞಾನಿಗಳು ಸಹ) ಏಕಪ್ರಕಾರವಾಗಿ (ನಿತ್ಯವೂ - ತಪ್ಪದೇ), ಶ್ರೀಕೃಷ್ಣನ, ಅಡಿಗಡಿಗೆ = ಹೆಜ್ಜೆ ಹೆಜ್ಜೆಗೂ, ಎರಗುವರೆ = (ಶ್ರೀಕೃಷ್ಣನು ಸ್ತ್ರೀಜಿತನಾಗಿದ್ದರೆ) ನಮಸ್ಕರಿಸುತ್ತಿದ್ದರೇ ? ಆರಾಧಿಸುತ್ತ = ಪೂಜಿಸುತ್ತ, ಭಜಿಸುವರೆ = ಸೇವಿಸುತ್ತಿದ್ದರೇ ?

ವಿಶೇಷಾಂಶ:— (೧) ನಾರದಸನಕಾದಿಗಳು ಶುಕ್ಲಶೋಣಿತಕಲುಷಿತವಲ್ಲದ ಶುದ್ಧ ದೇಹವುಳ್ಳವರು - ಪ್ರಸಿದ್ಧ ಜ್ಞಾನಯೋಗಿಗಳು *'ಸನಕಾದ್ಯಾ ಜ್ಞಾನಯೋಗಾ ಭಕ್ತಿಯೋಗಾಶ್ಚ ದೇವತಾಃ । ಮಾನುಷಾಃಕರ್ಮಯೋಗಾಶ್ಚ ತ್ರಿಧೈತೇ ಯೋಗಿನಸ್ಮೃತಾಃ । ಸರ್ವೇಷಾಂ ಸರ್ವಯೋಗೈಶ್ಚ ಪ್ರಾಪ್ಯಾ ಮುಕ್ತಿರ್ನ ಸಂಶಯಃ । ತಥಾಽಪಿ ತು ವಿಶೇಷೇಣ ಸ ತೇಷಾಮಭಿಧೀಯತೇ ॥* (ಭಾಗ. ತಾ) ಸನಕಾದಿಗಳು ಜ್ಞಾನಯೋಗಿಗಳು ; ದೇವತೆಗಳು ಭಕ್ತಿಯೋಗಿಗಳು ; ಯೋಗಿಗಳೆಂಬುವರು ಹೀಗೆ ಮೂರು ವಿಧರಾಗಿರುವರು. ಎಲ್ಲ ಯೋಗಗಳಿಂದ (ಮೂರು ಯೋಗಗಳು ಕೂಡಿಕೊಂಡೇ) ಈ ಎಲ್ಲರಿಂದಲೂ ಮುಕ್ತಿಯು

ಹೊಂದಲ್ಪಡುತ್ತದೆ. ಹಾಗಿದ್ದರೂ, (ಜ್ಞಾನ, ಭಕ್ತಿ, ಕರ್ಮಗಳ ಪ್ರಾಚುರ್ಯದಿಂದ) ಯಾರಲ್ಲಿ ಯಾವುದು ಅಧಿಕವೋ ಅವರು 'ಆ ಯೋಗಿಗಳೆಂದು ಕರೆಯಲ್ಪಡುವರು' ಎಂಬುದು ಈ ಪ್ರಮಾಣವಾಕ್ಯಗಳ ಅರ್ಥ.

(೨) ವಿಷಯಾಸಕ್ತಿಯು (ವೈರಾಗ್ಯವಿಲ್ಲದಿರುವುದು) ಮೋಕ್ಷಪ್ರಾಪ್ತಿಗೆ ಪ್ರಬಲವಾದ ವಿರೋಧಿಯು. ಸ್ತ್ರೀವ್ಯಾಮೋಹವು ವಿಷಯಾಶೆಗಳಲ್ಲಿ ಬಲಿಷ್ಠವಾದುದು. ಈ ಕಾರಣದಿಂದ 'ಸ್ತ್ರೀಸಂಗ' ಎಂಬುದರಿಂದ 'ವಿಷಯಾಸಕ್ತಿ' ಯೇ ಹೇಳಲ್ಪಡುತ್ತದೆ. ಕೇವಲ ಸ್ತ್ರೀಮಾತ್ರವಲ್ಲ-ಜ್ಞಾನವಿರೋಧಿಯಾದ ಸ್ತ್ರೀಸಂಗಕ್ಕಿಂತ, ಇದೇ 'ಸ್ತ್ರೀ' ಶಬ್ದವಾಚ್ಯವಾದ **'ಅನ್ಯಥಾಜ್ಞಾನ'** (ಮಿಥ್ಯಾಜ್ಞಾನವು) ಯಥಾರ್ಥಜ್ಞಾನಕ್ಕೆ ಪ್ರಬಲವಿರೋಧಿಯು. ಈ ಉಭಯವಿಧ ದೋಷಗಳಿಲ್ಲದ ನಿರ್ಮಲಜ್ಞಾನಿಗಳು – ಜ್ಞಾನಯೋಗಿಗಳು. ಹೀಗೆಂಬಲ್ಲಿ ಭಾಗವತದ ಸ್ಪಷ್ಟನಿರೂಪಣೆಯಿದೆ. *"ಸ್ತ್ರೀಸಂಗಸಂಗೀನಾಂ ಸಂಗಂ ತ್ಯಕ್ತ್ವಾ ದೂರತ ಆತ್ಮವಾನ್"* – ಸ್ತ್ರೀಸಂಗವನ್ನೂ, ಸ್ತ್ರೀಸಂಗಿಗಳ ಸಂಗವನ್ನೂ ದೂರದಲ್ಲಿಟ್ಟು ಯತ್ನಶೀಲನಾಗಬೇಕು. (ಶ್ರೀಹರಿಧ್ಯಾನದಲ್ಲಿ ತೊಡಗಬೇಕು). ಸ್ತ್ರೀಸಂಗವೆಂಬುದರ ಅರ್ಥವು ಭಾಗವತತಾತ್ಪರ್ಯ-ದಲ್ಲಿ ಸಪ್ರಮಾಣವಾಗಿ ನಿರ್ಣಯಿಸಲ್ಪಟ್ಟಿದೆ.

"ಕೇಶವೇತ್ವನ್ಯಥಾ ಬುದ್ಧಿಃ ಸೈವ ಸ್ತ್ರೀಸಂಪ್ರಕೀರ್ತಿತಾ । ತ್ರಿಕಾಲದುಃಖದತ್ವೇನ ಪುಂಸಾ ಸಹ ನಿವಾಸನಾತ್ । ಜುಷ್ಟತ್ವಾದ್ಯೋಷಿದಿತ್ಯುಕ್ತಾ ವನನಾದ್ವನಿತೇತಿ ಚ । ಪ್ರಮಾದ ಕರಣತ್ವಾತ್ತು ಪ್ರಮದೇತಿ ಚ ಗೀಯತೇ ॥" ಎಂದರೆ, ತ್ರಿಕಾಲಗಳಲ್ಲಿ ದುಃಖವನ್ನು ಕೊಡು-ವುದೆಂಬುದರಿಂದಲೂ, ಪುರುಷನೊಂದಿಗೆ ವಾಸಿಸುವ ಕೇಶವವಿಷಯಕ ಅನ್ಯಥಾ-ಬುದ್ಧಿಯೇ 'ಸ್ತ್ರೀ' ಎನಿಸುತ್ತದೆ. ಭಗವದ್ ವಿಷಯಕ ಅನ್ಯಥಾಜ್ಞಾನವು ಮಿಥ್ಯಾಜ್ಞಾನಿಗಳಿಂದ ಆದರಿಸಲ್ಪಡುವುದರಿಂದ **"ಯೋಷಿತ್"** ಎಂದೂ, ವಿಶೇಷವಾಗಿ ಆಕರ್ಷಿಸಿ ತನ್ನ ಸೇವೆ-ಯಲ್ಲಿ ತೊಡಗಿಸುವುದರಿಂದ **"ವನಿತಾ"** ಎಂದೂ, ಪ್ರಮಾದಜನಕವಾದ್ದರಿಂದ (ಕರ್ತವ್ಯ-ಗಳ ವಿಸ್ಮರಣೆಗೆ ಕಾರಣವಾಗುವುದರಿಂದ) **"ಪ್ರಮದಾ"** ಎಂದೂ ಕರೆಯಲ್ಪಡುತ್ತದೆ. ಶ್ರೀಹರಿಯನ್ನು, ಸ್ತ್ರೀಸಂಗರಹಿತರಾದ ಜ್ಞಾನಯೋಗಿಗಳು ಸಹ ಶರಣುಹೊಂದಿ ಸೇವಿಸು-ವುದರಿಂದ, ಆತನು ದುಃಖಾಜ್ಞಾನಾದಿದೋಷದೂರನೆಂದೂ, ಸರ್ವಜ್ಞನೂ ಸರ್ವೋತ್ತ-ಮನೂ ಎಂದೂ ಸಿದ್ಧವಾಗುವುದಿಲ್ಲವೇ ? ಎಂಬ ಯುಕ್ತಿಯೂ ನಿರೂಪಿತವಾಗಿದೆ.

ಅಂಬುಜಸಂಭವ ತ್ರಿಯಂಬಕ ಮೊದಲಾದ
ನಂಬಿದವರಿಗೆ ವರವಿತ್ತ
ಸಂಭ್ರಮದ ಸುರರು ಎಳ್ಳಷ್ಟು ಕೋಪಕ್ಕೆ
ಇಂಬಿದ್ದರಿವನ ಭಜಿಸುವರೆ ॥ ಶೋಭಾನೆ ॥ ॥ ೫೩ ॥

ಅರ್ಥ:— ಅಂಬುಜಸಂಭವ = ಕಮಲಸಂಭವನೂ (ಬ್ರಹ್ಮ), ತ್ರಿಯಂಬಕ = ತ್ರಿನೇತ್ರನೂ (ರುದ್ರ), ಮೊದಲಾದ = ಇವರೇ ಪ್ರಧಾನರಾಗಿವುಳ್ಳ ಇತರ ದೇವತೆಗಳಾದ, ನಂಬಿದವರಿಗೆ = ತನ್ನನ್ನೇ ನಂಬಿದ ಭಕ್ತರಿಗೆ, ವರವಿತ್ತ = ಅಭೀಷ್ಟಪ್ರದನಾದ, ಇವನ = ಈ ಶ್ರೀಹರಿಯನ್ನು, ಸಂಭ್ರಮದ ಸುರರು = ಜಗತ್ತಿನಿಂದಲೇ ಪೂಜ್ಯರಾದ ದೇವತೆಗಳು (ವೈಭವಸಂಪನ್ನರಾದ ದೇವತೆಗಳು), ಎಳ್ಳಷ್ಟು ಕೋಪಕ್ಕೆ = ಅತ್ಯಲ್ಪ ಕೋಪಕ್ಕೆ (ಕೋಪಾ-ದಿಗಳಿಗೆ), ಇಂಬಿದ್ದರೆ = ಶ್ರೀಹರಿಯಲ್ಲಿ ಆಶ್ರಯವಿದ್ದರೆ, ಭಜಿಸುವರೆ = ಸೇವಿಸುವರೇ ? (ಕ್ರೋಧಾದಿ ಅರಿಷಡ್ವರ್ಗಗಳಿಗೆ - ಯಾವ ವಿಧದ ದೋಷಕ್ಕೂ ಶ್ರೀಹರಿಯಲ್ಲಿ ಎಳ್ಳಷ್ಟೂ ಅವಕಾಶವಿಲ್ಲವೆಂಬುದನ್ನು, ಬ್ರಹ್ಮಾದಿವಂದ್ಯತ್ವವೆಂಬ ಹೇತುವಿನಿಂದ ಸಾಧಿಸುವ ಯುಕ್ತಿಯಿದು).

ಆವನಂಗುಷ್ಠವ ತೊಳೆದ ಗಂಗಾದೇವಿ
ಪಾವನಳೆನಿಸಿ ಮೆರೆಯಳೆ
ಜೀವನ ಸೇರುವ ಪಾಪವ ಕಳೆವರು
ಈ ವಾಸುದೇವಗೆ ಎಣೆಯುಂಟೆ ॥ ಶೋಭಾನೆ ॥ ॥ ೫೪ ॥

ಅರ್ಥ:— ಆವನಂಗುಷ್ಟವ = ಯಾವ ಶ್ರೀಹರಿಯ ಪಾದಾಂಗುಷ್ಟವನ್ನು, ತೊಳೆದ = (ತನ್ನ ಜಲದಿಂದ) ತೊಳೆದ, ಗಂಗಾದೇವಿ = ಗಂಗಾದೇವಿಯು, ಪಾವನಳೆನಿಸಿ = ಪವಿತ್ರಳಾಗಿ (ಜಗತ್ತನ್ನೇ ಪಾವನಗೊಳಿಸುತ್ತ), ಮೆರೆಯಳೆ =ಪ್ರಸಿದ್ಧಳಾಗಿ ವಿರಾಜಿಸು-ತ್ತಿಲ್ಲವೇ ? ಜೀವನ ಸೇರುವ = ಜೀವರನ್ನು ಮುತ್ತುವ (ಹೊಂದುವ), ಪಾಪವ = ಪಾಪಗಳನ್ನು, ಕಳೆವರು = (ಆತನ ಪಾದಾಶ್ರಿತರಾದ ಈ ಗಂಗಾದೇವತೆಗಳು) ಪರಿಹರಿಸು-ವರು, ಈ ವಾಸುದೇವಗೆ = ಈ ವಿಧ ಮಹಿಮೆಯುಳ್ಳ ವಾಸುದೇವನಿಗೆ (ಶ್ರೀಕೃಷ್ಣನಿಗೆ), ಎಣೆಯುಂಟೆ = ಸಮರುಂಟೇ ? (ಇಲ್ಲ–ಆತನೇ ಸರ್ವೋತ್ತಮನು).

ಕಿಲ್ಬಿಷವಿದ್ದರೆ ಅಗ್ರಪೂಜೆಯನು
ಸರ್ಬರಾಯರ ಸಭೆಯೊಳಗೆ
ಉಬ್ಬಿದ ಮನದಿಂದ ಧರ್ಮಜ ಮಾಡುವನೆ
ಕೊಬ್ಬದಿರೆಲೋ ಪರವಾದಿ ॥ ಶೋಭಾನೆ ॥ ॥ ೫೫ ॥

ಅರ್ಥ:— ಕಿಲ್ಬಿಷವಿದ್ದರೆ = (ಶ್ರೀಕೃಷ್ಣನಲ್ಲಿ) ಯಾವ ದೋಷವಾದರೂ ಇದ್ದಿದ್ದರೆ, ಧರ್ಮಜ = ಧರ್ಮರಾಜನು, ಉಬ್ಬಿದ ಮನದಿಂದ = ಅತ್ಯಂತ ಉತ್ಸಾಹದಿಂದ, ಸರ್ಬರಾಯರ = ಸರ್ವರಾಜರ, ಸಭೆಯೊಳಗೆ = ಸಭೆಯಲ್ಲಿ, ಅಗ್ರಪೂಜೆಯನು = (ಶ್ರೀಕೃಷ್ಣನಿಗೇ) ಮೊದಲ ಪೂಜೆಯ ಮರ್ಯಾದೆಯನ್ನು, ಮಾಡುವನೆ = ಮಾಡುತ್ತಿದ್ದನೇ ?

ಎಲೋ ಪರವಾದಿ = ಹೇ ಪರವಾದಿಯೇ ! (ಶ್ರೀಕೃಷ್ಣನಿಗೆ ಸರ್ವೋತ್ತಮತ್ವವನ್ನೂ ನಿರ್ದೋಷತ್ವವನ್ನೂ ಒಪ್ಪದಿರುವ ದುರ್ವಾದಿಯೇ !), ಕೊಬ್ಬದಿರು = ಉನ್ಮತ್ತನಾಗಬೇಡ.

ವಿಶೇಷಾಂಶ:— ಧರ್ಮರಾಜನು ರಾಜಸೂಯಯಾಗವನ್ನು ಕೈಗೊಂಡಾಗ, ಬ್ರಹ್ಮರುದ್ರಾದಿದೇವತೆಗಳೂ, ಭೂಲೋಕದ ಎಲ್ಲ ರಾಜರೂ, ವೇದವ್ಯಾಸರೂ, ಪರಶು-ರಾಮದೇವರೂ ಇತರ ಋಷಿಶ್ರೇಷ್ಠರೂ ಮಿಳಿತರಾದ ದಿವ್ಯ ಸಭೆಯಲ್ಲಿ ಶ್ರೀಕೃಷ್ಣನಿಗೇ ಅಗ್ರಪೂಜೆಯನ್ನು ಸಲ್ಲಿಸಿದನು. "**ವೇದವ್ಯಾಸರು ಮತ್ತು ಪರಶುರಾಮರು**" ಶ್ರೀಕೃಷ್ಣನಿಂದ ಅಭಿನ್ನವಾದ ಭಗವದ್ರೂಪಗಳೇ ಆಗಿ, ಅಗ್ರಪೂಜೆಗೆ ಅರ್ಹರಾಗಿದ್ದರೂ, ಅವರಿಬ್ಬರಲ್ಲಿ ಒಬ್ಬರಿಗೆ ಅಗ್ರಪೂಜೆಯನ್ನು ಸಲ್ಲಿಸಿದ್ದರೆ, ಉಭಯರೂ ಬ್ರಾಹ್ಮಣರಾದ್ದರಿಂದ, ಸಭೆಯಲ್ಲಿ ಯಾವ ವಿರೋಧವೂ ಬರುತ್ತಿರಲಿಲ್ಲ, ಆದರೆ ವಿರೋಧ ಪರಿಹಾರದಿಂದ ಸರ್ವೋ-ತ್ತಮತ್ವವು ಸಿದ್ಧವಾಗಬೇಕಾದುದು ಜ್ಞಾನದಾರ್ಢ್ಯಕ್ಕೆ ಅವಶ್ಯಕವೆಂದು ಮನಗಂಡ ಭೀಷ್ಮರು, ಶ್ರೀಕೃಷ್ಣನನ್ನೇ ಅಗ್ರಪೂಜಾರ್ಹನೆಂದು ಧರ್ಮರಾಜನಿಗೆ ಹೇಳಿದರು. ಶಿಶುಪಾಲಾದಿಗಳಿಂದ ಪ್ರಬಲ ವಿರೋಧವೂ ಬಂತು. ಶಿಶುಪಾಲವಧೆಯಿಂದ ಅದರ ಪರಿಹಾರವಾಗಿ, ಶ್ರೀ ಕೃಷ್ಣನ ಸರ್ವೋತ್ತಮತ್ವವು ಸ್ಥಾಪಿತವಾಯಿತು. ಇದನ್ನು ವಿರೋಧಿಸುವ ಪರವಾದಿಗಳಿಗೆ, ಶ್ರೀಕೃಷ್ಣನನ್ನು ನಾನಾಪರಿಯಾಗಿ ನಿಂದಿಸಿ, ತಮಸ್ಸನ್ನೇ ಹೊಂದಿದ ಶಿಶುಪಾಲನಂತೆ, ದುರ್ಗತಿಯು ತಪ್ಪಿದ್ದಲ್ಲವೆಂದೂ ಸೂಚಿತವಾಗಿದೆ.

ಸಾವಿಲ್ಲದ ಹರಿಗೆ ನರಕಯಾತನೆ ಸಲ್ಲ
ಜೀವಂತರಿಗೆ ನರಕದಲಿ
ನೋವನೇ ಈವನು ನಿಮ್ಮ ಯಮದೇವನು
ಗೋವ ನೀ ಹರಿಯ ಗುಣವರಿಯ ! ॥ ಶೋಭಾನೆ ॥ ॥ ೫೬ ॥

ಅರ್ಥ:— ಸಾವಿಲ್ಲದ ಹರಿಗೆ = ಮರಣವೇ ಇಲ್ಲದ ಶ್ರೀಹರಿಗೆ, ನರಕಯಾತನೆ = ನರಕದುಃಖವು, ಸಲ್ಲ = ಕೂಡುವುದಿಲ್ಲ ; ಜೀವಂತರಿಗೆ = ಪ್ರಾಕೃತದೇಹದಲ್ಲಿರುವವರಿಗೆ, ನಿಮ್ಮ ಯಮದೇವನು = ನೀವೂ ಒಪ್ಪುವ ಶಾಸ್ತ್ರಪ್ರತಿಪಾದ್ಯನಾದ ಯಮದೇವನು (ಅಥವಾ ನಿಮ್ಮನ್ನು ಶಿಕ್ಷಿಸಲಿಕ್ಕಾಗಿಯೇ ಇರುವ ಯಮದೇವನು) ನರಕದಲಿ = ನರಕಗಳಲ್ಲಿ, ನೋವನೇ = ದುಃಖವನ್ನೇ, ಈವನು = ಕೊಡುವನು ; ಗೋವ = (ಹೇ ಪಶುಪ !) ದನಕಾಯುವವನೇ ! ನೀ = ನೀನು (ಗೊಲ್ಲನಂತೆ ಅಜ್ಞಾನಿಯಾದ ಹೇ ಮೂರ್ಖ !), ಹರಿಯ = ಶ್ರೀಹರಿಯ, ಗುಣವರಿಯ = ನಿರ್ದುಃಖನಿತ್ಯಸ್ವರೂಪನೆಂದು ತಿಳಿದಿಲ್ಲವೇ ?

ವಿಶೇಷಾಂಶ:— ಶ್ರೀಹರಿಗೆ ದುಃಖಾದಿ ದೋಷಗಳನ್ನು ತಿಳಿಯುವವನನ್ನು ಶುದ್ಧಮೂರ್ಖನೆಂದು ನಿಂದಿಸುತ್ತಾ ನರಕವು (ದುಃಖವು) ದೇಹಯೋಗವಿಯೋಗವುಳ್ಳ

(ಜನನಮರಣಗಳುಳ್ಳ) ಜೀವರಿಗಲ್ಲದೇ, ನಿತ್ಯಾನಂದಸ್ವರೂಪನಾದ ಶ್ರೀಹರಿಗೆ ದುಃಖಸ್ಪರ್ಶಕ್ಕೆ ಅವಕಾಶವೇ ಇಲ್ಲವೆಂಬ ಯುಕ್ತಿಯನ್ನೂ ಸೂಚಿಸುತ್ತಾರೆ.

ಜೀವಂತರಿಗೆ – ಪ್ರಾಕೃತ ದೇಹವುಳ್ಳವರಿಗೆ, ಮರಣದಿಂದ ಸ್ಥೂಲದೇಹ ವಿಯೋಗವಾದರೂ, ಸೂಕ್ಷ್ಮಯಾತನಾದೇಹವುಳ್ಳವರಾಗಿಯೇ ನರಕದುಃಖಗಳನ್ನು ಪಾಪಿಗಳು ಅನುಭವಿಸುತ್ತಾರೆ – ಆಗಲೂ ಅವರು ಜೀವಂತರೇ.

ನರಕವಾಳುವ ಯಮಧರ್ಮರಾಯ ನಿನ್ನ
ನರಜನ್ಮದೊಳಗೆ ಪೊರಳಿಸಿ
ಮರಳಿ ತನ್ನರಕದಲಿ ಪೊರಳಿಸಿ ಕೊಲುವನು
ಕುರು ನಿನ್ನ ಕುಹಕ ಕೊಳದಲ್ಲಿ ॥ ಶೋಭಾನೆ ॥ ॥ ೫೭ ॥

ಅರ್ಥ:— ನರಕವಾಳುವ = ನರಲೋಕದ ಪ್ರಭುವಾದ ; ಯಮಧರ್ಮ ರಾಯ = ಶ್ರೀಹರಿಯು ; ನಿನ್ನ = ನಿನ್ನನ್ನು, ನರಜನ್ಮದೊಳಗೆ = ಮನುಷ್ಯದೇಹದಲ್ಲಿ, ಪೊರಳಿಸಿ = ಸುತ್ತಿಸಿ, ಮರಳಿ = ಪುನಃ, ತನ್ನರಕದಲಿ = ಆ ದೇಹಗಳಲ್ಲಿ ಮಾಡಿದ ಪಾಪ-ಗಳಿಗೆ ಉಚಿತವಾದ ನರಕಗಳಲ್ಲಿ, ಪೊರಳಿಸಿ = ಹೊರಳಾಡಿಸಿ (ನಾನಾವಿಧ ದುಃಖಗಳಿಂದ ಪೀಡಿಸಿ), ಕೊಲುವನು = ಕೊಲ್ಲುವನು ; ನಿನ್ನ ಕುಹಕ = ನಿನ್ನ ಕಪಟವನ್ನು (ವಂಚನೆ-ಯನ್ನು), ಕುರು = ಎಷ್ಟಾದರೂ ಮಾಡು, ಕೊಳದು ಅಲ್ಲಿ = ಅದು ಯಾವುದೂ ಅಲ್ಲಿ ನಡೆಯುವುದಿಲ್ಲ (ಸಾರ್ಥಕವಾಗುವುದಿಲ್ಲ – ಅದರಿಂದ ಯಮನನ್ನು ವಂಚಿಸಲಾರೆ).

ವಿಶೇಷಾಂಶ:— (೧) ''ಯಮನೇ ರಾಮನು ಸಂದೇಹ ಬೇಡ'' ಎಂದಿರುವರು ಹಿರಿಯ ದಾಸರು. ಯಮ ಮತ್ತು ಧರ್ಮ, ಎಂಬೆರಡು ರೂಪಗಳುಳ್ಳವನು **''ಯಮಧರ್ಮ''**. ಯಮಧರ್ಮನಿಗೆ ಅಧಿಕಾರವಿತ್ತವನು **ಶ್ರೀಹರಿಯೇ.** ಅವನಲ್ಲಿ ನಿಂತು ಸ್ವತಂತ್ರನಾದ ತಾನು, ಅವನ ದ್ವಾರಾ ಶಾಸಕನಾಗಿರುವನು.

(೨) ಮನುಷ್ಯದೇಹವೇ ಸಾಧನದೇಹ. ಪಶ್ವಾದಿ ಇತರ ಯೋನಿಗಳು ಭೋಗದೇಹಗಳು ಮಾತ್ರ – ಪಾಪಸಾಧನೆಯು ಮನುಷ್ಯದೇಹದಿಂದಲೇ, ಈ ಪಾಪಗಳ ಫಲರೂಪವಾದುದು ದುಃಖಭೋಗವು ; ಅದಕ್ಕಾಗಿ ವ್ಯವಸ್ಥಿತವಾಗಿವೆ ಯಮದೇವನ ಆಧಿಪತ್ಯದಲ್ಲಿ ವಿವಿಧ ನರಕಗಳು. ಪಾಪಗಳನ್ನು ಮಾಡಿ, ಯಮನನ್ನು ವಂಚಿಸಿ ಉಳಿದುಕೊಳ್ಳಲು ಯಾವನೂ ಸಮರ್ಥನಲ್ಲ. ಪಾಪಾನುಗುಣವಾದ ದುಃಖಭೋಗಾವಸಾನದಲ್ಲಿ ಯಾತನಾದೇಹವೂ ಬಿದ್ದುಹೋಗುವುದು. ಲಿಂಗದೇಹದ ಮೇಲಿದ್ದು ದೇಹದಿಂದ ದೇಹಕ್ಕೆ ಜೀವನನ್ನು ಅನುಸರಿಸಿ ಬರುವ ಸೂಕ್ಷ್ಮ ಅನಿರುದ್ಧ ದೇಹದೊಂದಿಗೆ ಮುಂದಿನ ಗತಿಗೆ ತೆರಳುತ್ತಾನೆ – ಜೀವ.

(೩) ಶ್ರೀಹರಿಯಲ್ಲಿ ದುಃಖ ಅಜ್ಞಾನಗಳನ್ನು ಚಿಂತಿಸುವುದಕ್ಕಿಂತ ಅಧಿಕವಾದ ಪಾಪವಿಲ್ಲ.

ಬೊಮ್ಮನ ನೂರುವರ್ಷಪರಿಯಂತ ಪ್ರಳಯದಲಿ
ಸುಮ್ಮನೆಯಾಗಿ ಮಲಗಿಪ್ಪ
ನಮ್ಮ ನಾರಾಯಣಗೆ ಹಸಿತೃಷೆಜರೆಮರಣದು-
ಷ್ಕರ್ಮದುಃಖಂಗಳು ತೊಡಸುವರೆ ॥ ಶೋಭಾನೆ ॥ ॥ ೫೮ ॥

ಅರ್ಥ:— ಬೊಮ್ಮನ ನೂರುವರ್ಷಪರಿಯಂತ = ಬ್ರಹ್ಮದೇವನ ನೂರು ವರ್ಷಗಳಷ್ಟೇ ಅವಧಿಯ, ಪ್ರಳಯದಲಿ = ಪ್ರಳಯಕಾಲದಲ್ಲಿ, ಸುಮ್ಮನೆಯಾಗಿ = (ಜಗತ್ತೆಲ್ಲವನ್ನೂ ಲಯಗೊಳಿಸಿ ಸೂಕ್ಷ್ಮರೂಪದಿಂದಿರುವ ಆ ಎಲ್ಲವನ್ನೂ ತನ್ನ ಉದರದಲ್ಲಿ ಧರಿಸಿರುವುದರಿಂದ) ತತ್ಸಂಬಂಧವಾದ ಯಾವ ಕ್ರಿಯೆಯಿಲ್ಲದವನಾಗಿ, ಮಲಗಿಪ್ಪ = ಮಲಗಿರುವನು (ಯೋಗನಿದ್ರೆಯಲ್ಲಿರುವನು = ಅತ್ಯಂತಜಾಗ್ರತನಾಗಿದ್ದರೂ ನಿದ್ರಿಸುವ-ನಂತಿರುವನು); ನಮ್ಮ ನಾರಾಯಣಗೆ = (ಹೀಗಿರುವ ಇಷ್ಟು ದೀರ್ಘಕಾಲ ಮಲಗುವ) ನಮ್ಮ ಪ್ರಭು ನಾರಾಯಣನಿಗೆ, ಹಸಿತೃಷೆಜರಾಮರಣ ದುಷ್ಕರ್ಮದುಃಖಂಗಳು = ಹಸಿವೆ, ನೀರಡಿಕೆ, ಮುಪ್ಪು, ಮರಣ, ದುಷ್ಕರ್ಮ ನಿಮಿತ್ತಕ ದುಃಖ ಮೊದಲಾದ ದೋಷಗಳನ್ನು, ತೊಡಸುವರೆ = ಹೇಳಬಹುದೆ ? (ಅವನಲ್ಲಿ ಈ ವಿಧ ದೋಷಗಳನ್ನು, ಸೇರಿಸಲು – ಅವನ ಶುದ್ಧ ಸ್ವರೂಪಕ್ಕೆ ಜೋಡಿಸಲು ಯತ್ನಿಸುವುದು ಯೋಗ್ಯವಾದೀತೆ ? ಸರ್ವಥಾ ಕೂಡುವುದಿಲ್ಲ.)

ವಿಶೇಷಾಂಶ:— ಮನುಷ್ಯ ಮಾನದ ಒಂದು ವರ್ಷಕಾಲವು ದೇವಮಾನದ ಒಂದು ದಿನ ; ದೇವಮಾನದ ೧೦೦೦ ವರ್ಷಗಳು (೩,೬೦,೦೦೦ ಮಾನವ ವರ್ಷ-ಗಳು) ಕಲಿಯುಗದ ಪ್ರಮಾಣವು. ದ್ವಾಪರವು ದೇವಮಾನದ ೨೦೦೦ ವರ್ಷಗಳು ; ತ್ರೇತೆಯು ೩,೦೦೦, ಕೃತಯುಗವು ೪೦೦೦ ವರ್ಷಗಳು. ಈ ನಾಲ್ಕು ಯುಗಗಳ ಮಧ್ಯದ ಸಂಧಿಕಾಲಗಳೂ ಸೇರಿ ಒಟ್ಟು ನಾಲ್ಕು **ಯುಗಗಳಿಂದ ೧೨,೦೦೦ ವರ್ಷಗಳು** – ಮನುಷ್ಯಮಾನದಿಂದ ೪೩,೨೦,೦೦೦ ವರ್ಷಗಳ ಕಾಲವಾಗುವುವು. ಈ ನಾಲ್ಕು ಯುಗಗಳು ಒಂದಾವರ್ತಿ ಸುತ್ತಿದರೆ ಒಂದು **'ಮಹಾಯುಗ'**ವೆನ್ನುವರು. ೧೦೦೦ ಮಹಾಯುಗಗಳ ಕಾಲವು, ಸತ್ಯಲೋಕದಲ್ಲಿರುವ ಬ್ರಹ್ಮದೇವನಿಗೆ ಒಂದು ಹಗಲು – ಅಷ್ಟೇ ರಾತ್ರಿ ಕಾಲ. ಈ ಬ್ರಹ್ಮನಿಗೆ ಈ ಪ್ರಮಾಣದ ೧೦೦ ವರ್ಷಗಳ ಆಯುಷ್ಯವು. ಈತನ ಆಯುರ್ಮಾನವು 'ಪರ' ವೆಂದು ಕರೆಯಲ್ಪಡುತ್ತದೆ. **ಮೊದಲಿನ ೫೦ ವರ್ಷಗಳು ಪ್ರಥಮ 'ಪರಾರ್ಧ'** ವೆಂದೂ ನಂತರ ೫೦ ವರ್ಷಗಳ ಕಾಲವು **'ದ್ವಿತೀಯ ಪರಾರ್ಧ'**ವೆಂದೂ

ಕರೆಯಲ್ಪಡುತ್ತವೆ. ಈಗ ದ್ವಿತೀಯಪರಾರ್ಧದ ಮೊದಲನೆ ವರ್ಷದ, ಶ್ವೇತವರಾಹ-ಕಲ್ಪವೆಂಬ ಹೆಸರಿನ ಮೊದಲದಿನದಲ್ಲಿ ಬೆಳಗಿನಿಂದ ೧೩ ಘಳಿಗೆ ೪೨ ಪಳಗಳು ಕಳೆಯು-ತ್ತಿವೆಯೆಂದು ಕಾಲಜ್ಞರು ಹೇಳುತ್ತಾರೆ. 'ಪರ' ನಾಮಕ ಬ್ರಹ್ಮನ ಆಯುರ್ಮಾನದಷ್ಟೇ ದೀರ್ಘಕಾಲವು, ಮಹಾಪ್ರಳಯಕಾಲದ ಅವಧಿಯು. ಬ್ರಹ್ಮನ ಆಯುಷ್ಯವು ಮುಗಿ-ದೊಡನೆ ಮಹಾಪ್ರಳಯವಾಗುತ್ತದೆ. ಆ ಪ್ರಳಯದಲ್ಲಿ ಯಾವ ವ್ಯಾಪಾರವೂ ಇಲ್ಲದೇ ಆನಂದಪೂರ್ಣನಾಗಿ ಸುಮ್ಮನೆ ಮಲಗಿರುವ ನಾರಾಯಣನಿಗೆ, ಹಸಿತೃಷೆ ಮೊದಲಾದ ದೋಷಗಳನ್ನು ಅಲ್ಪ ಮಾನವನು ಕಲ್ಪಿಸಬಹುದೇ ?(ಸರ್ವಥಾ ಅಸಂಭಾವ್ಯವೆಂಬ ಯುಕ್ತಿಯನ್ನು ಸೂಚಿಸುವರೆಂದು ತಿಳಿಯಬೇಕು.)

ರಕ್ಕಸಾಸ್ತ್ರಗಳಿಂದ ಗಾಯಗಳೊಡೆಯದ
ಅಕ್ಷಯಕಾಯದ ಶ್ರೀಕೃಷ್ಣ
ತುಚ್ಛ ಯಮಭಟರ ಶಸ್ತ್ರಕಳುಕುವನಲ್ಲ
ಹುಚ್ಚ ನೀ ಹರಿಯ ಗುಣವರಿಯ ॥ ಶೋಭಾನೆ ॥ ॥ ೫೯ ॥

ಅರ್ಥ:— ರಕ್ಕಸಾಸ್ತ್ರಗಳಿಂದ = ರಾಕ್ಷಸರ ಅಸ್ತ್ರಗಳಿಂದ, ಗಾಯಗಳೊಡೆಯದ = ಸೀಳಿ ಗಾಯವಾಗದ, ಅಕ್ಷಯಕಾಯದ = ನಾಶರಹಿತವಾದ ನಿತ್ಯ (ಚಿದಾನಂದಾತ್ಮಕ) ದೇಹವುಳ್ಳ, ಶ್ರೀಕೃಷ್ಣ = ಶ್ರೀಕೃಷ್ಣನು, ತುಚ್ಛ ಯಮಭಟರ = ಅಲ್ಪರಾದ ಯಮದೂತರ, ಶಸ್ತ್ರಕೆ = ಆಯುಧಗಳಿಗೆ, ಅಳುಕುವವನಲ್ಲ = ಅಲ್ಲಾಡುವವನಲ್ಲ (ನೋವನ್ನು ಹೊಂದು-ವವನಲ್ಲ) ; ಹುಚ್ಚ = ಹೇ ಉನ್ಮತ್ತ ! ನೀ = ನೀನು, ಹರಿಯ = ಶ್ರೀಹರಿಯ, ಗುಣವರಿಯ = ಮಹಿಮೆಯನ್ನು ತಿಳಿದಿಲ್ಲವೇ ?

ವಿಶೇಷಾಂಶ:— (೧) ಮಹಾರಾಕ್ಷಸರು, ಬ್ರಹ್ಮರುದ್ರಾದಿಗಳ ವರಬಲದಿಂದ ಪಡೆದ ಅಸ್ತ್ರಗಳಿಂದ ದೃಪ್ತರಾಗಿ, ದಿಕ್ಪಾಲಕರಾದ ಇಂದ್ರಾದಿ ದೇವತೆಗಳನ್ನು ಸಹ, ಬಗೆಯರು. ಆ ಎಲ್ಲರೂ ರಾವಣಾದಿರಾಕ್ಷಸರಿಂದ, ಭಯಗೊಂಡು ಅವರ ಅಸ್ತ್ರಗಳನ್ನು ಎದುರಿಸಲು ಅಸಮರ್ಥರಾದುದು ಇತಿಹಾಸಪ್ರಸಿದ್ಧವಿದೆ. ಯಮನೇ ಅವರಿಗೆ ಅಂಜುತ್ತಿರಲು, ಯಮದೂತರ ಪಾಡೇನು ?

(೨) ಜರಾಸಂಧ – ಶಿಶುಪಾಲಾದಿ ದೈತ್ಯರು ಶ್ರೀಕೃಷ್ಣನನ್ನು, ರಣದಲ್ಲಿ, ಕ್ಷಣಮಾತ್ರ-ದಲ್ಲಿ ಯಮಸದನಕ್ಕೆ ಕಳುಹಿಸುವೆವೆಂಬ ಹೆಮ್ಮೆಯ ಕೂಗುಗಳನ್ನು ಕೂಗಿರುವುದುಂಟು. ಮನುಷ್ಯಮಾತ್ರನೆಂದು ಭ್ರಮಿಸಿ, ಈ ದುರುಳರು ಬೊಗಳಿದ ಮಾತುಗಳಿಗೆ ಮರುಳಾಗಬೇಡಿರೆಂದು ದುರ್ವಾದಿಗಳನ್ನು ಎಚ್ಚರಿಸುತ್ತಾರೆ. ಶ್ರೀಕೃಷ್ಣನನ್ನು, ರಾಕ್ಷಸರು ಸಚ್ಚಿದಾನಂದವಿಗ್ರಹನೆಂದು ಒಪ್ಪುವುದಿಲ್ಲ– ಸಾಮಾನ್ಯ ಮನುಷ್ಯನೆಂದೇ ವಾದಿಸುತ್ತಾರೆ.

(೩) 'ಸ ಪರ್ಯಗಾಚ್ಛುಕ್ರಂ ಅಕಾಯಂ ಅವ್ರಣಂ ಅಸ್ನಾವಿರಂ ಶುದ್ಧಂ ಅಪಾಪವಿದ್ಧಂ' (ಈಶಾವಾಸ್ಯೋಪನಿಷತ್ತು). ಪರಮಾತ್ಮನ ರೂಪಗಳನ್ನು, ಶೋಕರಹಿತ-ವೆಂದೂ, (ಶುಕ್ರಂ), ಲಿಂಗದೇಹರಹಿತವೆಂದೂ (ಅಕಾಯಂ), ಛೇದ ಭೇದಾದಿವ್ರಣ-ರಹಿತವೆಂದೂ (ಅವ್ರಣಂ), ಸ್ಥೂಲ (ಪ್ರಾಕೃತ) ದೇಹರಹಿತವೆಂದೂ (ಅಸ್ನಾವಿರಂ), ಸಚ್ಚಿದಾನಂದಾತ್ಮಕವೆಂದೂ (ಶುದ್ಧಂ), ಪಾಪಲೇಪರಹಿತವೆಂದೂ (ಅಪಾಪವಿದ್ಧಂ), ವರ್ಣಿಸಿ, ಇಂಥ ಮಹಿಮೋಪೇತನಾದ ಪರಮಾತ್ಮನನ್ನು ಜ್ಞಾನಿಯು ಹೊಂದುತ್ತಾನೆಂದು ಹೇಳುತ್ತದೆ.

ಕಿಚ್ಚನು ನುಂಗಿದನು ನಮ್ಮ ಶ್ರೀಕೃಷ್ಣನು
ತುಚ್ಛ ನರಕದೊಳು ಅನಲನಿಗೆ
ಬೆಚ್ಚುವನಲ್ಲ ಅದರಿಂದವಗೆ ನರಕ
ಮೆಚ್ಚುವರಲ್ಲ ಬುಧರೆಲ್ಲ॥ ಶೋಭಾನೆ ॥ ॥ ೬೦ ॥

ಅರ್ಥ:— ಕಿಚ್ಚನು = ಕಾಡ್ಗಿಚ್ಚನ್ನು, ನಮ್ಮ ಶ್ರೀಕೃಷ್ಣನು = ನಮ್ಮ ಸ್ವಾಮಿ ಶ್ರೀಕೃಷ್ಣನು, ನುಂಗಿದನು = ಕುಡಿದು (ಗೋಪಾಲರನ್ನೂ ಗೋವುಗಳನ್ನೂ) ರಕ್ಷಿಸಿದನು, ತುಚ್ಛನರಕ-ದೊಳು = (ಆತನ ಇಚ್ಛಾಧೀನವಾದ ಅಸ್ತಿತ್ವವುಳ್ಳ, ಅತ ಏವ) ಕೀಳಾದ ನರಕದಲ್ಲಿರುವ, ಅನಲನಿಗೆ = ಅಗ್ನಿಗೆ, ಬೆಚ್ಚುವನಲ್ಲ = ಹೆದರುವನಲ್ಲ; ಅದರಿಂದ = ಆದ್ದರಿಂದ, ಅವಗೆ = ಶ್ರೀಕೃಷ್ಣನಿಗೆ, ಬುಧರೆಲ್ಲ = ಎಲ್ಲ ಜ್ಞಾನಿಗಳೂ, ನರಕ = ನರಕದುಃಖವುಂಟೆಂಬುದನ್ನು, ಮೆಚ್ಚುವರಲ್ಲ = ಎಂದೂ ಒಪ್ಪುವುದಿಲ್ಲ.

ವಿಶೇಷಾಂಶ:— (೧) ಶ್ರೀಕೃಷ್ಣನು ಪ್ರಾಕೃತದೇಹವುಳ್ಳ ಮನುಷ್ಯನಲ್ಲವೆಂಬಲ್ಲಿ, ಭಕ್ತಾನುಗ್ರಹಕ್ಕಾಗಿಯೇ ಆತನು ಪ್ರಕಟಿಸಿದ ಲೋಕದೃಷ್ಟಿಯಿಂದ ಅದ್ಭುತಗಳಾದ, ಸಾಮರ್ಥ್ಯದ್ಯೋತಕಮಹಿಮೆಗಳನ್ನಾದರೂ ನೋಡಿರೆನ್ನುತ್ತಾರೆ :

"ತಥಾಪ್ಯನನ್ಯದೇವತಾಸಮಂ ನಿಜಂ ಬಲಂ ಪ್ರಭುಃ । ಪ್ರಕಾಶಯನ್ ಪುನಃಪುನಃ ಪ್ರದರ್ಶಯತ್ಯಜೋ ಗುಣಾನ್ ॥ (ಭಾ.ತಾ.ನಿ.) (ಬ್ರಾಹ್ಮಣ, ರಾಜ, ಗೋಪಾಲಕ ಮೊದಲಾದ ರೂಪದಿಂದ ಅವತರಿಸಿ, ಆಯಾ ಗುಂಪಿನ ಸಾಮಾನ್ಯ ಜನರಂತೆ ವರ್ತಿಸು-ತ್ತಿದ್ದರೂ), ಯಾವ ದೇವತೆಗೂ ಇಲ್ಲದ ಶಕ್ತಿಯನ್ನು ಆಗಾಗ ಪ್ರದರ್ಶಿಸುತ್ತಾ, ತಾನು ಜನನಾದಿ ದೋಷರಹಿತನೆಂದೂ, ಕಲ್ಯಾಣಗುಣ ಪೂರ್ಣನೆಂದೂ, ತನ್ನ ಭಕ್ತರು ಅರಿಯಲು ಅವಕಾಶಮಾಡಿಕೊಡುತ್ತಾನೆ.

"ತಾಂ ರಾತ್ರಿಮತ್ರ ನಿವಸನ್ ಯಮುನಾತಟೇ ಸ । ದಾವಾಗ್ನಿ ಮುದ್ಧತಬಲಂ ಚ ಪಪೌ ವ್ರಜಾರ್ಥೇ ।" ಮತ್ತು *"ವಹ್ನಿಂ ಪಪೌ ಪುನರಪಿ ಪ್ರದಹಂತಮುಚ್ಚೈ -*

ಗೋಪಾಂಶ್ಚ ಗೋಗಣಮಗಣ್ಯಗುಣಾರ್ಣವೋಽಪಾತ್ ।'' ಎಂದು (ಭಾ.ತಾ.ನಿ.) ಶ್ರೀಕೃಷ್ಣನು ಕಾಡ್ಗಿಚ್ಚನ್ನು ಪಾನಮಾಡಿದ ಮಹಿಮೆಯು ವರ್ಣಿತವಾಗಿದೆ. ಕಾಳೀಯ ಸರ್ಪವನ್ನು ನಿಗ್ರಹಮಾಡಿದ ರಾತ್ರಿ, ನಂದಗೋಪ, ಇತರ ಗೋಪಾಲಕರು, ಗೋವುಗಳು, ಗೋಪಿಕಾಸ್ತ್ರೀಯರೊಂದಿಗೆ, ಯಮುನಾತೀರದಲ್ಲಿ ತಂಗಿದ್ದಾಗ, ಸುತ್ತಲೂ ಹಬ್ಬುತ್ತ ಬಂದ ಕಾಡ್ಗಿಚ್ಚನ್ನು ಪಾನಮಾಡಿದನು. ಪುನಃ ಪ್ರಲಂಬಾಸುರನನ್ನು ನಿಗ್ರಹಿಸಿದ ನಂತರ, ಕಾನನದಲ್ಲಿ ಮಲಗಿರಲು ಪ್ರಬಲವಾದ ದಾವಾಗ್ನಿಗೆ ಎಲ್ಲರೂ ಸಿಕ್ಕರು. ಆಗ ಭಯಗ್ರಸ್ಥರಾದ ಗೋಪಾಲರಿಂದ ಪ್ರಾರ್ಥಿತನಾಗಿ ಶ್ರೀಕೃಷ್ಣನು, ಆ ಕಿಚ್ಚನ್ನು ಪಾನಮಾಡಿ, ಸರ್ವರನ್ನೂ ರಕ್ಷಿಸಿದನು.

(೨) '*ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಂ । ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ*' ॥ (ಗೀತಾ) 'ಮೂರ್ಖರು ನನ್ನನ್ನು ಮನುಷ್ಯದೇಹವನ್ನು ಆಶ್ರಯಿಸಿದ ಪ್ರಾಕೃತಮನುಷ್ಯನೆಂದು ತಿಳಿದು ನನ್ನ ವಿಷಯದಲ್ಲಿ ತಿರಸ್ಕಾರಬುದ್ಧಿಯುಳ್ಳವರಾಗುತ್ತಾರೆ ; ಸಕಲಜಗನ್ನಿಯಾಮಕನಾದ ನನ್ನ ಉತ್ಕೃಷ್ಟಸ್ವರೂಪ-ವಿದೆಂದು ತಿಳಿಯುವುದಿಲ್ಲ' ವೆಂದು ಶ್ರೀಕೃಷ್ಣನೇ ಹೇಳಿರುತ್ತಾನೆ. ತನ್ನ ಸ್ವರೂಪವನ್ನು ಯಥಾರ್ಥವಾಗಿ ತಿಳಿದು, ತದನುಸಾರವಾಗಿ ತನ್ನ ಜನ್ಮಕರ್ಮಗಳನ್ನೂ ಲೋಕವಿಲಕ್ಷಣ-ಗಳೆಂದು ತಿಳಿದವರು, ಸಂಸಾರದಿಂದ ಮುಕ್ತರಾಗಿ ನನ್ನನ್ನೇ ಹೊಂದುವರೆಂಬ ಫಲವನ್ನೂ ಹೇಳಿದ್ದಾನೆ.

''*ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ । ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ* ॥ (ಗೀತಾ) ಎಂಬುದು ಫಲವನ್ನು ನಿರೂಪಿಸುವ ಆ ವಾಕ್ಯವು.

ಮನೆಯಲ್ಲಿ ಕ್ಷಮೆಯನೆ ತಾಳ್ದ ವೀರಭಟ
ರಣರಂಗದಲ್ಲಿ ಕ್ಷಮಿಸುವನೆ
ಅಣುವಾಗಿ ನಮ್ಮ ಹಿತಕೆ ಮನದೊಳಗಿನ ಕೃಷ್ಣ
ಮುನಿವ ಕಾಲಕ್ಕೆ ಮಹತ್ತಾಹ ॥ ಶೋಭಾನೆ ॥ ॥ ೬೧ ॥

ಅರ್ಥ:— ಮನೆಯಲ್ಲಿ = ಮನೆಯಲ್ಲಿರುವಾಗ, ಕ್ಷಮೆಯನೆ ತಾಳ್ದ = ಕ್ಷಮಾ-ಗುಣವುಳ್ಳ (ಇತರರ ವಿರೋಧಗಳನ್ನು ಸಹಿಸುವ), ವೀರಭಟ = ರಣವೀರನು, ರಣರಂಗದಲ್ಲಿ = ಯುದ್ಧರಂಗದಲ್ಲಿ, ಕ್ಷಮಿಸುವನೆ = (ಮೇಲೆ ಬೀಳುವ ಪ್ರತಿಭಟನನ್ನು) ಸಹಿಸಿ ಸುಮ್ಮನಿರುವನೇ ? (ಶತ್ರುವಿಗೆ ಯೋಗ್ಯಶಾಸನ ಮಾಡುವನಷ್ಟೆ) ; (ಹಾಗೆಯೇ), ಅಣುವಾಗಿ = ಸೂಕ್ಷ್ಮರೂಪದಿಂದ, ಮನದೊಳಗಿನ ಕೃಷ್ಣ = ನಮ್ಮ ಮನಸ್ಸಿನಲ್ಲಿರುವ

ಶ್ರೀಹರಿಯು, ನಮ್ಮ ಹಿತಕೆ = ನಮ್ಮ ಹಿತಸಾಧಕನಾಗಿಯೇ ಇರುತ್ತಿದ್ದು, ಕಾಲಕ್ಕೆ = (ಬುದ್ಧಿಸ್ಥನಾಗಿ ಅಣು [ಸೂಕ್ಷ್ಮ] ರೂಪದಿಂದ ಅಂತಃಪ್ರೇರಕನಾಗಿ ಧರ್ಮಾಧರ್ಮಗಳನ್ನು ಉಸಿರುವ ಆತನ ಹಿತೋಪದೇಶಗಳನ್ನು ದುರ್ಲಕ್ಷಿಸಿ ಪ್ರತಿಭಟಿಸಿ ನಿಂತಾಗ) ವಿರೋಧಿಸುವ ಕಾಲಕ್ಕೆ (ಅಧರ್ಮಕ್ಕೆ ಬಿದ್ದಾಗ), ಮುನಿವ = ಜೀವನ ಮೇಲೆ ಕುಪಿತನಾಗುವನು ; ಮಹತ್ತಾಹ = (ತನ್ನ ಮಹತ್ವವನ್ನು – ಪ್ರಭುತ್ವವನ್ನು ಪ್ರದರ್ಶಿಸಿ) ಮಹಾದಂಡವನ್ನೇ ವಿಧಿಸುವನು. (ಬಾಹ್ಯದಲ್ಲಿ ಯಮದೇವನೇ ಮೊದಲಾದವರ ದ್ವಾರಾ ಯೋಗ್ಯಶಿಕ್ಷೆಯನ್ನೂ ವಿಧಿಸುವನು).

ವಿಶೇಷಾಂಶ:— ಶ್ರೀಹರಿಯು ಅಂತರ್ಬಾಹಿರರೂಪಗಳಿಂದ ಜೀವರನ್ನು ರಕ್ಷಿಸುವ ಮತ್ತು ಶಿಕ್ಷಿಸುವ ಪ್ರಕಾರವನ್ನು ವರ್ಣಿಸಿರುವರು.

ತಾಯ ಪೊಟ್ಟೆಯಿಂದ ಮೂಲರೂಪವ ತೋರಿ
ಆಯುಧಸಹಿತ ಪೊರವಂಟ
ನ್ಯಾಯಕೋವಿದರು ಪುಟ್ಟಿದನೆಂಬರೆ
ಬಾಯಿಗೆ ಬಂದಂತೆ ಬೊಗಳದಿರು ॥ ಶೋಭಾನೆ ॥ ॥ ೬೨ ॥

ಅರ್ಥ:— ತಾಯ ಪೊಟ್ಟೆಯಿಂದ = (ಶ್ರೀಕೃಷ್ಣನು) ತನ್ನ ತಾಯಿಯ (ದೇವಕಿಯ) ಹೊಟ್ಟೆಯಿಂದ, ಆಯುಧಸಹಿತ = ಚಕ್ರ, ಗದಾದಿ ಆಯುಧಗಳಿಂದ ಕೂಡಿದ, ಮೂಲರೂಪವ = ತನ್ನ ಮೂಲರೂಪವನ್ನು, ತೋರಿ = ಪ್ರಕಟಮಾಡಿ, ಪೊರವಂಟ = ಹೊರಗೆ ಬಂದನು ; ನ್ಯಾಯಕೋವಿದರು = ಯುಕ್ತಿಚತುರರು, ಪುಟ್ಟಿದನೆಂಬರೆ = (ಶ್ರೀಕೃಷ್ಣನ ಈ ವಿಧ ಜನ್ಮವನ್ನು) "**ಹುಟ್ಟಿದ**"ನೆಂದು ಕರೆಯುವರೆ ? (ಈ ವಿಲಕ್ಷಣಜನ್ಮವು, ಪ್ರಾಕೃತಶಿಶುಗಳಿಗುಂಟೆ !)

ಉಟ್ಟ ಪೀತಾಂಬರ ತೊಟ್ಟ ಭೂಷಣಗಳು
ಇಟ್ಟ ನವರತ್ನದ ಕಿರೀಟವು
ಮೆಟ್ಟಿದ ಕುರುಹು ಎದೆಯಲ್ಲಿ ತೋರ್ದ ಶ್ರೀ-
ವಿಟ್ಠಲ ಪುಟ್ಟಿದನೆನಬಹುದೆ ॥ ಶೋಭಾನೆ ॥ ॥ ೬೩ ॥

ಅರ್ಥ:— ಉಟ್ಟ ಪೀತಾಂಬರ = ಉಟ್ಟಿರುವ ಪೀತಾಂಬರವನ್ನೂ, ತೊಟ್ಟ ಭೂಷಣಗಳು = ಧರಿಸಿದ ಕಂಕಣಾದಿ ಆಭರಣಗಳನ್ನೂ, ಇಟ್ಟ ನವರತ್ನದ ಕಿರೀಟವು = ತಲೆಯಲ್ಲಿ ಧರಿಸಿದ ನವರತ್ನಖಚಿತಕಿರೀಟವನ್ನೂ, ಎದೆಯಲ್ಲಿ = ಎದೆಯ ಮೇಲೆ (ವಕ್ಷಸ್ಥಳದಲ್ಲಿ), ಮೆಟ್ಟಿದ ಕುರುಹು = ಮೂಡಿದ ಮಚ್ಚೆಯನ್ನೂ (ಶ್ರೀವತ್ಸಚಿನ್ಹೆಯನ್ನೂ),

ತೋರ್ದ = (ಹುಟ್ಟಿದಾಗಲೇ) ತೋರಿಸಿದ, ಶ್ರೀವಿಟ್ಠಲ = ಶ್ರೀಹರಿಯು, ಪುಟ್ಟಿದನೆನ-ಬಹುದೆ = ಹುಟ್ಟಿದನೆಂದು ಹೇಳಬಹುದೇ ? (ಇಲ್ಲ - ಆ ರೂಪದಿಂದ ಪ್ರತ್ಯಕ್ಷನಾದ-ನೆಂದು ಮಾತ್ರ ಹೇಳಬೇಕಲ್ಲವೇ ?).

ವಿಶೇಷಾಂಶ:— ಶ್ರೀಕೃಷ್ಣನ ಅದ್ಭುತ ಜನ್ಮವನ್ನು ತಿಳಿದ ಯಾವ ವಿವೇಕಿಯೂ, ಅವನನ್ನು ಮನುಷ್ಯದೇಹವುಳ್ಳವನೆಂದು ತಿಳಿಯಲಾರನೆಂದು ಹೇಳುತ್ತಾರೆ. ಹಾಗೆ ತಿಳಿದವನು ಅನ್ಯಥಾಜ್ಞಾನಿಯೇ ಸರಿ. *'ಪ್ರತ್ಯಕ್ಷತ್ವಂ ಹರೇರ್ಜನ್ಮ ನ ವಿಕಾರಿ ಕಥಂಚನ ।'* ಮತ್ತು *'ಜನ್ಮ ಕರ್ಮ ಚ ಮೇ ದಿವ್ಯಂ'* ಇತ್ಯಾದಿ ಈ ಹಿಂದೆ ಉದಾಹರಿಸಲಾಗಿರುವ ಪ್ರಮಾಣಗಳನ್ನು ದೃಷ್ಟಾಂತೀಕರಿಸುತ್ತದೆ - ಶ್ರೀಕೃಷ್ಣನ ಅದ್ಭುತಜನ್ಮವು. ಶ್ರೀಕೃಷ್ಣನ ಅವತಾರವನ್ನು ಶ್ರೀಮದ್ಭಾಗವತವು ಹೀಗೆ ನಿರೂಪಿಸುತ್ತದೆ :—

'ಆವಿರಾಸೀದ್ಯಥಾ ಪ್ರಾಚ್ಯಾಂ ದಿಶೀಂದುರಿವ ಪುಷ್ಕಲಃ' 'ಪೂರ್ವ ದಿಕ್ಕಿನಲ್ಲಿ ಪೂರ್ಣಚಂದ್ರನು ಉದಯಿಸುವಂತೆ, ಅಭಿವ್ಯಕ್ತನಾದನು (ಪ್ರತ್ಯಕ್ಷ ತೋರಿದನು)' ಎಂದು ಹೇಳಿ, ಹಾಗೆ ಅವತರಿಸಿದನೆಂಬ (ಲೌಕಿಕಶಿಶುಗಳಂತೆ ಪ್ರಾಕೃತದೇಹದಿಂದ ಹುಟ್ಟಿದವನಲ್ಲ-ವೆಂಬ) ಪ್ರಮೇಯವನ್ನು ದೃಢಪಡಿಸುತ್ತಾ, ಆ ದಿವ್ಯರೂಪವನ್ನು ವರ್ಣಿಸುತ್ತದೆ.

'ತಮದ್ಭುತಂ ಬಾಲಕಮಂಬುಜೇಕ್ಷಣಂ ಚತುರ್ಭುಜಂ ಶಂಖಗದಾದ್ಯುದಾಯು-ಧಮ್ । ಶ್ರೀವತ್ಸಲಕ್ಷ್ಮಂ ಗಲಶೋಭಿ ಕೌಸ್ತುಭಂ ಪೀತಾಬರಂ ಸಾಂದ್ರಪಯೋದಸೌಭ-ಗಮ್ । ಮಹಾರ್ಹವೈಡೂರ್ಯಕಿರೀಟಕುಂಡಲತ್ವಿಷಾ ಪರಿಷ್ವಕ್ತಸಹಸ್ರಕುಂತಲಮ್ । ಉದ್ದಾಮಕಾಂಚ್ಯಂಗದಕಂಕಣಾದಿಭಿರ್ವಿರೋಮಾಂಚನಂ ವಸುದೇವ ಐಕ್ಷತ ॥'

ಈ ಶ್ಲೋಕಗಳ ಭಾವಾರ್ಥವೇನೆಂಧರೆ:— ಹಾಗೆ ಅವತರಿಸಿದ ಆ ಅದ್ಭುತ ಬಾಲಕನನ್ನು, ವಸುದೇವನು, ಚತುರ್ಭುಜಗಳುಳ್ಳವನನ್ನಾಗಿಯೂ, ಕಮಲದಂತೆ ವಿಕಸಿತ-ನೇತ್ರಗಳುಳ್ಳವನನ್ನಾಗಿಯೂ, ಶಂಖಗದಾದಿ ಆಯುಧಗಳನ್ನು ಧರಿಸಿದವನನ್ನಾಗಿಯೂ, ಶ್ರೀವತ್ಸಚಿಹ್ನೆಯುಳ್ಳವನನ್ನಾಗಿಯೂ, ಕಂಠದಲ್ಲಿ ಶೋಭಿಸುವ ಕೌಸ್ತುಭಮಣಿಯುಳ್ಳವ-ನನ್ನಾಗಿಯೂ, ಪೀತಾಂಬರವನ್ನು ಧರಿಸಿದ ನೀಲಮೇಘದ ಕಾಂತಿಯುಳ್ಳವನನ್ನಾಗಿಯೂ, ಅನರ್ಘ್ಯವಾದ ವೈಡೂರ್ಯಾದಿಗಳಿಂದ ರಚಿತವಾದ ಕಿರೀಟಕುಂಡಲಗಳ ಕಾಂತಿಯಿಂದ ಒಪ್ಪುವ ಗುಂಗುರುಮುಂಗುರುಳುಳ್ಳವನನ್ನಾಗಿಯೂ, ಎದ್ದು ತೋರುವ ಕಾಂಚಿ, ಕಂಕಣ ಮೊದಲಾದ ದಿವ್ಯಾಭರಣಗಳಿಂದ ಶೋಭಿಸುವ ದಿವ್ಯಪ್ರಭೆಯುಳ್ಳವನನ್ನಾಗಿಯೂ, ಕಂಡನು. ದೇವಕಿಯೂ ಸಹ ಈ ಅದ್ಭುತರೂಪವನ್ನು ಕಂಡು ಪರಮಾನಂದಭರಿತಳಾಗಿ, ಶಂಖಚಕ್ರಗದಾಪದ್ಮಗಳಿಂದ ಶೋಭಿಸುವ ಚತುರ್ಭುಜಗಳುಳ್ಳ, ಶ್ರೀವತ್ಸಲಾಂಛನದ ಈ ಅಲೌಕಿಕ ರೂಪವನ್ನು ಉಪಸಂಹಾರಗೊಳಿಸು (ಎಲ್ಲರಿಗೆ ಕಾಣದಂತೆ ಮಾಡಿ, ಸಾಮಾನ್ಯ

ಶಿಶುರೂಪದಿಂದ ಸಂತೋಷಗೊಳಿಸು), ಎಂದು ಪ್ರಾರ್ಥಿಸುತ್ತಾಳೆ. ಶ್ರೀಕೃಷ್ಣನಾದರೂ, ಆ ರೂಪದಿಂದ ದರ್ಶನಕೊಟ್ಟು ಲೌಕಿಕಶಿಶುವಿನಂತೆ, ದೇವಕಿಯ ಮಡಲಲ್ಲಿ ಮಲಗುತ್ತಾನೆ. ಶ್ರೀಕೃಷ್ಣನ ಮಾತಿದು :—

'ಏತದ್ವಾಂ ದರ್ಶಿತಂ ರೂಪಂ ಪ್ರಾಗ್ಜನ್ಮಸ್ಮರಣಾಯ ಮೇ ।
ನಾನ್ಯಥಾ ಮದ್ಭವಂ ಜ್ಞಾನಂ ಮರ್ತ್ಯಲಿಂಗೇನ ಜ್ಞಾಯತೇ ॥'

ಹೇ ದೇವಕಿ ! ನೀನು ಹಿಂದೆ ಸ್ವಾಯಂಭುವಮನ್ವಂತರದಲ್ಲಿ **'ಪೃಶ್ನಿ'** ಎಂಬ ಸ್ತ್ರೀಯಾಗಿದ್ದಿ ; ಆಗ ಈ ವಸುದೇವನು, **'ಸುತಪ'** ಎಂಬ ನಾಮದಿಂದ ನಿನ್ನ ಪತಿಯಾಗಿದ್ದನು. ನಿಮ್ಮ ತಪಸ್ಸಿಗೆ ಪ್ರಸನ್ನನಾದ ನಾನು, **'ಪೃಶ್ನಿಗರ್ಭ'** ನೆಂಬ ನಾಮದಿಂದ ನಿಮ್ಮ ಮಗನಾದೆನು ; ಆಗ ನಾನು ಉಪೇಂದ್ರ (ವಾಮನ) ನಾಮದಿಂದ ನಿಮ್ಮ ಮಗನಾದೆನು ; ಈಗ ನಿಮ್ಮ ಮೂರನೇ ಜನ್ಮದಲ್ಲಿ ಪುನಃ ಮಗನಾಗಿ ಹುಟ್ಟಿ ನನ್ನ ವರವನ್ನು ಸತ್ಯಗೊಳಿಸಿದ್ದೇನೆ ; 'ಹಿಂದಿನ ಜನ್ಮಗಳ ಸ್ಮರಣೆಯನ್ನಿತ್ತು ನನ್ನ ನಿಜಸ್ವರೂಪವನ್ನು ತಿಳಿಸಲಿಕ್ಕಾಗಿಯೇ ಈ ರೂಪವನ್ನು ತೋರಿಸಿದೆನು. ಹಾಗಿಲ್ಲದಿದ್ದರೆ, ಮಾನವಚಿನ್ಹೆಗಳಿಂದ, ನನ್ನನ್ನು ತಿಳಿಯಲು ನಿಮಗೆ ಸಾಧ್ಯವೇ ಆಗುತ್ತಿರಲಿಲ್ಲ'ವೆಂದರ್ಥ.

ಋಷಭ ಹಂಸ ಮೇಷ ಮಹಿಷ ಮೂಷಕವಹ ಮಾ-
ನಿಸರಂತೆ ಸುಳಿದ ಸುರರೆಲ್ಲ
ಎಸೆವ ದೇವೇಶಾನರ ಸಹಸಕ್ಕೆ ಮಣಿದರು
ಕುಸುಮನಾಭನಿಗೆ ಸರಿಯುಂಟೆ ॥ ಶೋಭಾನೆ ॥ ॥ ೬೪ ॥

ಅರ್ಥ:— ಋಷಭ = ಗೂಳಿ (ಎತ್ತು), ಹಂಸ = ಹಂಸ, ಮೇಷ = ಕುರಿ, ಮಹಿಷ = ಕೋಣ, ಮೂಷಕ = ಇಲಿ, (ಇತ್ಯಾದಿ) ವಹ = ವಾಹನಗಳುಳ್ಳ, (ರುದ್ರ, ಬ್ರಹ್ಮ, ಅಗ್ನಿ, ಯಮ, ವಿಘ್ನೇಶ, ಮೊದಲಾದವರು), ಮಾನಿಸರಂತೆ = ಮನುಷ್ಯರಂತೆ, ಸುಳಿವ = ತೋರುವ, ಸುರರೆಲ್ಲ = ಎಲ್ಲ ದೇವತೆಗಳು, ಎಸೆವ = ವಿರಾಜಿಸುವ, ದೇವೇ-ಶಾನರ = ರಮಾನಾರಾಯಣರ (ಈಶಾನಾ = ಲಕ್ಷ್ಮೀದೇವಿ), ಸಹಸಕ್ಕೆ = ಸಾಮರ್ಥ್ಯಕ್ಕೆ, ಮಣಿದರು = ಕೆಳಗೆ ಬಿದ್ದರು ; (ಸೋತರು), ಹೀಗಿರಲು ಕುಸುಮನಾಭನಿಗೆ = ಪದ್ಮ-ನಾಭನಿಗೆ, (ಶ್ರೀಹರಿಗೆ), ಸರಿಯುಂಟೆ = ಸಮಾನರುಂಟೇ ? (ಇಲ್ಲ ಆತನೇ ಸರ್ವೋತ್ತಮನು).

ವಿಶೇಷಾಂಶ:— (೧) ಬ್ರಹ್ಮದೇವನಿಗೆ ಶ್ರೀಹರಿಯಾಜ್ಞೆಯಿಂದಲೇ ಅವತಾರವಿಲ್ಲ. ಆದ್ದರಿಂದ, ಮನುಷ್ಯರಂತೆ ಸುಳಿವ ದೇವತೆಗಳಲ್ಲಿ ಹಂಸವಾಹನನಾದ ಬ್ರಹ್ಮದೇವನನ್ನು ಸೇರಿಸಿರುವುದನ್ನು ಬ್ರಹ್ಮಾವೇಶವುಳ್ಳ ಇತರ ದೇವತೆಗಳ ಅವತಾರವೆಂದು ಗ್ರಹಿಸಬೇಕು.

'*ದತ್ತಂ ದೂರ್ವಾಸಸಂ ಸೋಮಂ ಆತ್ಮೇಶ ಬ್ರಹ್ಮಸಂಭವಾನ್*' (ಭಾಗವತ) ಎಂಬಲ್ಲಿ, ದತ್ತ ದೂರ್ವಾಸ, ಸೋಮ ಎಂಬ ನಾಮಗಳಿಂದ ಶ್ರೀಹರಿಯೂ (ಆತ್ಮ), ರುದ್ರದೇವನೂ (ಈಶ), ಬ್ರಹ್ಮನೂ ಅತ್ರಿಋಷಿಗಳಿಂದ ಅವತರಿಸಿದರು' ಎಂದು ಹೇಳಲಾಗಿದ್ದರೂ, ಬ್ರಹ್ಮನು, ಸೋಮ (ಚಂದ್ರ)ನಲ್ಲಿ ಆವೇಶಮಾತ್ರದಿಂದ ಇದ್ದನೆಂದು ತಿಳಿಯುವಂತೆ, ಇಲ್ಲಿಯೂ ತಿಳಿಯಬೇಕು.

(೨) ಈ ಮೊದಲಾದ ಎಲ್ಲ ದೇವತೆಗಳೂ ಕೃಷ್ಣಾವತಾರಕಾಲದಲ್ಲಿ, ಪಾಂಡವರು, ಭೀಷ್ಮ, ಅಶ್ವತ್ಥಾಮಾದಿರೂಪಗಳಿಂದ ಅವತರಿಸಿರುವರು. ಇವರೆಲ್ಲರೂ ಕ್ಷಣಮಾತ್ರದಲ್ಲಿ ಶ್ರೀಕೃಷ್ಣನಿಂದ ಪರಾಜಿತರಾಗಿದ್ದಾರೆ. ಶ್ರೀಕೃಷ್ಣನು ರುಕ್ಮಿಣೀಸಮೇತನಾಗಿ ರೈವತಕಪರ್ವತದ ಉಪವನದಲ್ಲಿ ವಿರಾಜಮಾನನಾಗಿದ್ದಾಗ, ವನವಿಹಾರೋತ್ಸವಕ್ಕಾಗಿ, ಪಾಂಡವರು, ಭೀಷ್ಮದ್ರೋಣಕರ್ಣಾದಿ ಸಕಲ ದೇವಾಂಶರೂ ಸಕಲ ರಾಜರೂ ಪ್ರಾಪ್ತರಾಗಿದ್ದರು. ಆಗ ನಾರದರು ಬಂದು ಶ್ರೀಕೃಷ್ಣನನ್ನು **'ಧನ್ಯೋಽಸಿ-ಆಶ್ಚರ್ಯೋಽಸಿ'** ಎಂದು ಸಂಬೋಧಿಸಿದರು. **'ದಕ್ಷಿಣಾಭಿಃಸಾಕಂ'** ಎಂದು ಶ್ರೀಕೃಷ್ಣನು ಉತ್ತರಿಸಿದನು. ಈ ಮಾತುಗಳ ಅರ್ಥವಿವರಣೆ-ಯನ್ನು ಎಲ್ಲರೂ ಅಪೇಕ್ಷಿಸಿದಾಗ, ಶ್ರೀಕೃಷ್ಣನ ಆಜ್ಞೆಯಂತೆ ನಾರದರೇ ವಿವರಿಸಿದರು. ಶ್ರೀಕೃಷ್ಣನಿಗೆ ಸದೃಶಶರೀರವಿಲ್ಲವೆಂದೂ ಆತನೇ ಸರ್ವೋತ್ತಮನೆಂದೂ ಹೇಳಿದ್ದಕ್ಕೆ, ಶ್ರೀಕೃಷ್ಣನು, ತನ್ನ ಅರ್ಧನಾರೀರೂಪದಲ್ಲಿ ಸ್ಥಿತಳಾದ ದಕ್ಷಿಣಾನಾಮಕ ಉತ್ಕೃಷ್ಟಲಕ್ಷ್ಮೀ-ರೂಪಗಳ ದೆಸೆಯಿಂದ ಸಹ ತಾನು ಉತ್ತಮನೆಂದು ಹೇಳಿದನೆಂದು ವಿವರಿಸಿದರು. ಆಗ, ಕುಂತೀದೇವಿಯು, ಸರ್ವೋತ್ತಮನೆಂಬುದನ್ನು ತನ್ನ ವೀರ್ಯಪ್ರದರ್ಶನದಿಂದ ಪ್ರತ್ಯಕ್ಷ-ನಿದರ್ಶನಮಾಡಿಕೊಡಬೇಕೆಂದು ಶ್ರೀಕೃಷ್ಣನನ್ನು ಪ್ರಾರ್ಥಿಸಿದಳು. ಶ್ರೀಕೃಷ್ಣನು ಆ ಎಲ್ಲರನ್ನೂ ಕ್ಷಣಮಾತ್ರದಲ್ಲಿ ಪರಾಜಯಗೊಳಿಸಿ, ಆಕೆಯನ್ನು ಸಂತೋಷಗೊಳಿಸಿದನೆಂಬ ಭಾರತ ಕಥೆಯು, ಈ ನುಡಿಯಿಂದ ಸೂಚಿತವೆಂದು ತಿಳಿಯಬಹುದಾಗಿದೆ. ಈ ಪ್ರಮೇಯವನ್ನು ನಿರೂಪಿಸುವ ಭಾರತತಾತ್ಪರ್ಯನಿರ್ಣಯವಾಕ್ಯಗಳು ಹೀಗಿವೆ :—

''ಪ್ರತ್ಯಕ್ಷಂ ವೋ ವೀರ್ಯಮಸ್ಯಾಪಿ ಕುಂತ್ಯಾ ಯುಧೇಽರ್ಥಿತಃ ಕೇಶವೋ ವೀರ್ಯಮಸ್ಯೈ ॥ ಅದರ್ಶಯತ್ಪಾಂಡವಾನ್ ಧಾರ್ತರಾಷ್ಟ್ರಾನ್ ಭೀಷ್ಮದ್ರೋಣ-ದ್ರೌಣಿಕೃಪಾನ್ ಸಕರ್ಣಾನ್ । ನಿರಾಯುಧಾಂಶ್ಚಕ್ರ ಏಕಃ ಕ್ಷಣೇನ ಲೋಕಶ್ರೇಷ್ಠಾನ್ ದೈವತ್ಯೈರಪ್ಯಜೇಯಾನ್ ॥'' —

ಅರ್ಥ:— ಕುಂತ್ಯಾ = ಕುಂತೀದೇವಿಯಿಂದ, ಅರ್ಥಿತಃ = ಪ್ರಾರ್ಥಿಸಲ್ಪಟ್ಟ ಕೇಶವಃ = ಶ್ರೀಕೃಷ್ಣನು, ಯುಧೇ = ಯುದ್ಧದಲ್ಲಿ, ವೀರ್ಯಂ = ತನ್ನ ಪರಾಕ್ರಮವನ್ನು, ಅಸ್ಯೈ = ಕುಂತಿಗೋಸ್ಕರ, ಅದರ್ಶಯತ್ = ತೋರಿಸಿದನು ; ಪಾಂಡವಾನ್ = ಪಾಂಡವರನ್ನೂ, ಧಾರ್ತರಾಷ್ಟ್ರಾನ್ = ದುರ್ಯೋಧನಾದಿಗಳನ್ನೂ ; ಸಕರ್ಣಾನ್ ಭೀಷ್ಮದ್ರೋಣ-

ದ್ರೌಣಿಕೃಪಾನ್ = ಕರ್ಣನಿಂದ ಸಹಿತರಾದ ಭೀಷ್ಮ, ದ್ರೋಣ, ಅಶ್ವತ್ಥಾಮಾದಿ, ಲೋಕ ಶ್ರೇಷ್ಠಾನ್ = ಜಗತ್ತಿನಲ್ಲಿ ಶ್ರೇಷ್ಠರೆನಿಸಿದ, ದೈವತ್ಯೈರಪಿ = ದೇವತೆಗಳಿಂದ ಸಹ, ಅಜೇ-ಯಾನ್ = ಜಯಿಸಲಶಕ್ಯರಾದ ಸರ್ವರನ್ನೂ, ಏಕಃ = ತಾನೊಬ್ಬನೇ, ಕ್ಷಣೇನ = ಕ್ಷಣ-ಮಾತ್ರದಲ್ಲಿ, ನಿರಾಯುಧಾನ್ = ಆಯುಧರಹಿತರನ್ನಾಗಿ, ಚಕ್ರೇ = ಮಾಡಿದನು. ಅಸ್ಯ = ಈ ಶ್ರೀಕೃಷ್ಣನ, ವೀರ್ಯಂ = ಪರಾಕ್ರಮವು, ವಃ = ನಮ್ಮೆಲ್ಲರಿಗೆ, ಪ್ರತ್ಯಕ್ಷಂ = ಪ್ರತ್ಯಕ್ಷವೇ ಆಯಿತಲ್ಲವೇ ! ಎಂದು ನಾರದರು ನುಡಿದರು.

(೩) **'ದೇವೇಶಾನರ'** ಎಂಬುದರಿಂದ ರಮಾನಾರಾಯಣರು ನಿತ್ಯ ಅವಿಯೋಗಿಗಳೆಂಬುದು ಸೂಚಿತವಾಗಿದೆ. ಹೀಗೆ ಸದಾ ಸರ್ವತ್ರ ಶ್ರೀಹರಿಯೊಂದಿಗಿದ್ದರೂ, ಲಕ್ಷ್ಮೀದೇವಿಯು ಶ್ರೀಹರಿಗೆ ಅನಂತಗುಣಗಳಿಂದ ಅವರಳು (ಕಡಿಮೆ). ಆದ್ದರಿಂದ ಆಕೆಯು, ಶ್ರೀಹರಿಗೆ **'ಸಮಾಸಮಳು'** ಎನಿಸುವಳು – ಸಮಳೂ, ಅಸಮಳೂ ಅಹುದು ;

(೪) ಶ್ರೀಹರಿಯಿಂದ, ಸಕಲ ದೇವತೆಗಳೂ ಒಬ್ಬೊಬ್ಬರಾಗಿ ಮತ್ತು ಎಲ್ಲರೂ ಮಿಳಿತರಾಗಿ, ಲೀಲೆಯಿಂದ ಸೋಲಿಸಲ್ಪಟ್ಟ ನಿದರ್ಶನಗಳು ಪುರಾಣಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಆದ್ದರಿಂದ ಶ್ರೀಹರಿಯೇ ಸರ್ವೋತ್ತಮನು – ಸರ್ವಶ್ರೇಷ್ಠನು.

ಒಂದೊಂದು ಗುಣಗಳು ಇದ್ದಾವು ಇವರಲ್ಲಿ
ಸಂದಣಿಸಿವೆಕೋ ಬಹುದೋಷ ।
ಕುಂದೆಳ್ಳಷ್ಟಿಲ್ಲದ ಮುಕುಂದನೆ ತನಗೆಂದು
ಇಂದಿರೆ ಪತಿಯ ನೆನೆದಳು ॥ ಶೋಭಾನೆ ॥ ॥ ೬೫ ॥

ಅರ್ಥ:— ಇವರಲ್ಲಿ = ಈ ದೇವತೆಗಳಲ್ಲಿ, ಒಂದೊಂದು ಗುಣಗಳು = ಕೆಲವು ಗುಣಗಳು, ಇದ್ದಾವು = ಇರಬಹುದು (ಇರುತ್ತವೆ), (ಆದರೆ) ಬಹುದೋಷ = ಬಹು ದೋಷಗಳು, ಸಂದಣಿಸಿವೆಕೋ = ತುಂಬಿಕೊಂಡಿರುತ್ತವೆ ನೋಡು ; ಕುಂದು = ದೋಷವು, ಎಳ್ಳಷ್ಟಿಲ್ಲದ = ಲೇಶವೂ ಇಲ್ಲದ, ಮುಕುಂದನೆ = ಶ್ರೀಹರಿಯೇ, ತನಗೆಂದು – ತನಗೆ ಯೋಗ್ಯವರನೆಂದು, ಇಂದಿರೆ = (ಕ್ಷೀರಸಮುದ್ರದಿಂದ ಉದ್ಭವಿಸಿದ) ಆ ಲಕ್ಷ್ಮೀದೇವಿಯು, ನೆನೆದಳು = ಯೋಚಿಸಿದಳು (ಸಂಕಲ್ಪಿಸಿದಳು). (೨೯ನೇ ನುಡಿಯಲ್ಲಿ ಹೇಳಿದ ಭಾಗವು ನಿಶ್ಚಯರೂಪದ ಸಂಕಲ್ಪವನ್ನು ಹೊಂದಿತು).

ಇಂತು ಚಿಂತಿಸಿ ರಮೆ ಸಂತ ಮನಪದವ
ಸಂತೋಷಮನದಿ ನೆನೆವುತ್ತ

ಸಂತೋಷಮನದಿ ನೆನೆವುತ್ತ ತನ್ನ ಶ್ರೀ-
ಕಾಂತನಿದ್ದೆಡೆಗೇ ನಡೆದಳು ॥ ಶೋಭಾನೆ ॥ ॥ ೬೬ ॥

ಅರ್ಥ:— ಇಂತು = ಹೀಗೆ, ಚಿಂತಿಸಿ = ಯೋಚಿಸಿ ನಿಶ್ಚಯಿಸಿ, ಸಂತರ ಮನಪದವ = ಸತ್ಪುರುಷರ ಮನದಲ್ಲಿ ಸಂಸ್ಥಾಪಿತವಾದ ಶ್ರೀಹರಿಯ ಪಾದಗಳನ್ನು (ಅಥವಾ ಸಜ್ಜನರು ಸದಾ ಧ್ಯಾನಿಸುವ ಸ್ವರೂಪವುಳ್ಳ ಶ್ರೀಹರಿಯನ್ನು), ಸಂತೋಷ ಮನದಿ ನೆನೆವುತ್ತ = ಹರ್ಷಚಿತ್ತಳಾಗಿ ಸ್ಮರಿಸುತ್ತಾ (ಅಥವಾ ನಿತ್ಯಾನಂದಪೂರ್ಣವಾದ ತನ್ನ ಮನಸ್ಸಿನಲ್ಲಿ ಚಿಂತಿಸಿ ಆನಂದೋದ್ರೇಕವನ್ನು ಹೊಂದುತ್ತಾ), ತನ್ನ ಶ್ರೀಕಾಂತನಿದ್ದೆಡೆಗೆ = ತನ್ನ ಮೂಲ ರೂಪದ ಪತಿಯಾದ **'ಅಜಿತ'** ರೂಪನಿದ್ದಲ್ಲಿಗೆ (ತನ್ನ ಸಕಲ ಸೌಭಾಗ್ಯದ ಒಡೆಯನಿದ್ದಲ್ಲಿಗೆ), ನಡೆದಳು = ನಡೆದುಹೋದಳು.

ವಿಶೇಷಾಂಶ:— ನಾನಾ ಸುಸಂಪನ್ನಯುಕ್ತಿಗಳಿಂದ ಶ್ರೀಹರಿಯ ಸರ್ವೋತ್ತಮತ್ವ-ವನ್ನು ಸಾಧಿಸಿ, ಮಿಥ್ಯಾಜ್ಞಾನಿಗಳನ್ನು ನಿಂದಿಸಿ, ಕ್ಷೀರಸಮುದ್ರದಲ್ಲಿ ಅವತರಿಸಿದ, ಸರ್ವಾಲಂಕಾರಭೂಷಿತಳಾದ ಮಹಾಲಕ್ಷ್ಮೀದೇವಿಯು, ತನ್ನ ರಮಣನಾದ ಮುಕುಂದನನ್ನೇ ವರಿಸಿದಳೆಂಬ ಕಥೆಯನ್ನು ಮುಂದುವರಿಸುತ್ತಾರೆ.

ಕಂದರ್ಪಕೋಟಿಗಳ ಗೆಲುವ ಸೌಂದರ್ಯದ
ಚೆಂದವಾಗಿದ್ದ ಚೆಲುವನ ।
ಇಂದಿರೆ ಕಂಡು ಇವನೆ ತನಗೆ ಪತಿ-
ಯೆಂದವನ ಬಳಿಗೆ ನಡೆದಳು ॥ ಶೋಭಾನೆ ॥ ॥ ೬೭ ॥

ಅರ್ಥ:— ಕಂದರ್ಪಕೋಟಿಗಳ = ಕೋಟಿಮನ್ಮಥರನ್ನು (ಮನ್ಮಥಸಮೂಹಗಳ ಸೌಂದರ್ಯವನ್ನು ಒಟ್ಟುಗೂಡಿಸಿದರೂ, ಅದನ್ನು), ಗೆಲ್ಲುವ = ಮೀರಿಸುವ ; ಸೌಂದರ್ಯದ = ಸೌಂದರ್ಯವುಳ್ಳ, ಚೆಂದವಾಗಿದ್ದ = ಮನೋಹರನಾದ, ಚೆಲುವನ – ಸುಂದರನನ್ನು, ಇಂದಿರೆ = ಲಕ್ಷ್ಮೀದೇವಿಯು, ಕಂಡು = (ಸಮುದ್ರಮಥನದಲ್ಲಿ ತೊಡಗಿದ ದೇವತೆಗಳಲ್ಲಿ) ನೋಡಿ ಗುರ್ತಿಸಿ, ಇವನೆ ತನಗೆ ಪತಿಯೆಂದು = ಈತನೇ ನನ್ನ ಪತಿಯೆಂದು, ಅವನ ಬಳಿಗೆ ನಡೆದಳು = ಅವನ ಹತ್ತಿರಕ್ಕೆ ಹೋದಳು.

ಇತ್ತರದ ಸುರರ ಸುತ್ತ ನೋಡುತ್ತ ಲಕ್ಷ್ಮಿ
ಚಿತ್ತವ ಕೊಡದೆ ನಸುನಗುತ
ಚಿತ್ತವ ಕೊಡದೆ ನಸುನಗುತ ಬಂದು ಪುರು-
ಷೋತ್ತಮನ ಕಂಡು ನಮಿಸಿದಳು ॥ ಶೋಭಾನೆ ॥ ॥ ೬೮ ॥

ಅರ್ಥ:— ಇತ್ತರದ = (ಲಕ್ಷ್ಮೀಯು ನಡೆದು ಬರುವಾಗ) ಎರಡು ಪಕ್ಕಗಳಲ್ಲಿ ಸಾಲಾಗಿ ನಿಂತಿದ್ದ ಸುರರ = ದೇವತೆಗಳನ್ನು, ಸುತ್ತ ನೋಡುತ್ತಾ = ಸುತ್ತಲೂ ನೋಡುತ್ತಾ, ಚಿತ್ತವ ಕೊಡದೆ = ಮನಸ್ಸಿನಿಂದ ಯಾರನ್ನೂ ಒಲಿಯದೆ, ನಸು ನಗುತ = ಮಂದಹಾಸವನ್ನು ಬೀರುತ್ತಾ, ಬಂದು = ('ಅಜಿತ'ನ ಬಳಿಗೆ) ಬಂದು, ಪುರುಷೋತ್ತಮನ ಕಂಡು = ಶ್ರೀಹರಿಯನ್ನು ನೋಡಿ, ನಮಿಸಿದಳು = ನಮಸ್ಕರಿಸಿದಳು.

ನಾನಾಕುಸುಮಗಳಿಂದ ಮಾಡಿದ ಮಾಲೆಯ
ಶ್ರೀನಾರಿ ತನ್ನ ಕರದಲ್ಲಿ
ಪೀನಕಂಧರದ ತ್ರಿವಿಕ್ರಮರಾಯನ ಕೊರ-
ಳಿನ ಮೇಲಿಟ್ಟು ನಮಿಸಿದಳು ॥ ಶೋಭಾನೆ ॥ ॥ ೬೯ ॥

ಅರ್ಥ:—ನಾನಾಕುಸುಮಗಳಿಂದ = ಬಹುವಿಧ ಸುಗಂಧಪುಷ್ಪಗಳಿಂದ, ಮಾಡಿದ = ರಚಿತವಾದ, ಮಾಲೆಯ = ಮಾಲೆಯನ್ನು (ಹಾರವನ್ನು), ಶ್ರೀನಾರಿ = ಲಕ್ಷ್ಮೀ-ದೇವಿಯು, ತನ್ನ ಕರದಲ್ಲಿ = ತನ್ನ ಕೈಯಲ್ಲಿ ಹಿಡಿದು, ಪೀನಕಂಧರದ = ತುಂಬಿದ ಕುತ್ತಿಗೆಯುಳ್ಳ, ತ್ರಿವಿಕ್ರಮರಾಯನ = ಶ್ರೀಹರಿಯ, ಕೊರಳಿನ ಮೇಲಿಟ್ಟು = ಕಂಠದಲ್ಲಿ ಹಾಕಿ, ನಮಿಸಿದಳು = ನಮಸ್ಕರಿಸಿದಳು.

ವಿಶೇಷಾಂಶ:— (೧) ಪುರುಷರಲ್ಲಿ ಮನ್ಮಥನೂ, ಸ್ತ್ರೀಯರಲ್ಲಿ ರತೀದೇವಿಯೂ ಅತಿಸುಂದರರೆಂದು ಲೋಕದಲ್ಲಿ ಪ್ರಸಿದ್ಧರು. ಇದು ಸಾಮಾನ್ಯ ಪ್ರಜೆಗಳ ದೃಷ್ಟಿಯಿಂದ ಮಾತ್ರ. ಸೌಂದರ್ಯವೆಂಬುದೂ ಸದ್ಗುಣಗಳಲ್ಲಿ ಒಂದು. ತಾರತಮ್ಯದಲ್ಲಿ ರತೀಮನ್ಮಥರಿಗಿಂತ ಉತ್ತಮರಾದವರಲ್ಲಿ ಈ ಗುಣವು ಅಧಿಕವಾಗಿರುತ್ತದೆಂಬುದು ಲಕ್ಷಣಶಾಸ್ತ್ರದ ನಿರ್ಣಯ ವಾಗಿದೆ. ಆದ್ದರಿಂದ ರತೀದೇವಿಗಿಂತ ಪಾರ್ವತೀ, ಸರಸ್ವತೀ ಮೊದಲಾದವರು ಹೆಚ್ಚು ಸುಂದರಿಯರು. ಶ್ರೀಮಹಾಲಕ್ಷ್ಮೀಯು, ಈ ಎಲ್ಲ ಸ್ತ್ರೀಯರಿಗಿಂತ, ಕೋಟಿಗುಣಾಧಿಕ-ಸೌಂದರ್ಯವುಳ್ಳವಳು. ಶ್ರೀಹರಿಯು ಈಕೆಗಿಂತ ಅನಂತಗುಣಾಧಿಕಸುಂದರನು. *'ಸೌಂದರ್ಯಸಾರೈಕರಸಂ ರಮಾಪತೇಃ'* (ಸುಮಧ್ವವಿಜಯ) ಎಂದರೆ ಅಖಂಡ-ಸೌಂದರ್ಯರಾಶಿಗಳ ಸಾರವನ್ನು ತೆಗೆದು ನಿರ್ಮಿಸಿದ ಮೂರ್ತಿಯಂತಿರುವನೆಂದು ವರ್ಣಿಸಲ್ಪಟ್ಟಿರುವನು. ಶ್ರೀಹರಿಯ ಸ್ತ್ರೀರೂಪಗಳು ಲಕ್ಷ್ಮಿಗಿಂತ ಅನಂತಾಧಿಕಸ್ತ್ರೀ ಸೌಂದರ್ಯವುಳ್ಳವು. ಕೋಟಿ–ಒಂದು ಕೋಟಿ ಸಂಖ್ಯಾ ಅಥವಾ ರಾಶಿ (ಸಮೂಹ) ಎಂಬರ್ಥವುಳ್ಳದ್ದು. ಲಕ್ಷ್ಮೀದೇವಿಗೂ ಮೋಹಕವಾದ ಸೌಂದರ್ಯವುಳ್ಳವನು, ಶ್ರೀಹರಿ.

(೨) "**ಚಿತ್ತವ ಕೊಡದೆ ನಸುನಗುತ**" ಎಂಬ ಶಬ್ದಗಳು ಗಂಭೀರ ಭಾವಗಳನ್ನು ಸೂಚಿಸುತ್ತವೆ. ದೇವತೆಗಳಾರೂ, ಲಕ್ಷ್ಮೀದೇವಿಯನ್ನು ಇಚ್ಛಿಸಿದವರಲ್ಲ – ಮಾತೃಭಾವ-

ದಿಂದ ಕೇವಲ ಆಕೆಯ ಅನುಗ್ರಹವನ್ನು ಮಾತ್ರ ಅಪೇಕ್ಷಿಸಿ, ಕೃಪಾದೃಷ್ಟಿಯನ್ನು ಮಾತ್ರ ನಿರೀಕ್ಷಿಸುತ್ತಿದ್ದರು. ಮಹಾಲಕ್ಷ್ಮಿಯಾದರೋ, "ಸ್ವಲ್ಪ ತಾಳಿರಿ, ನನ್ನ ಪತಿಯನ್ನು ಸೇರಿ, ಅಲ್ಲಿಂದ ನಿಮ್ಮ ಈ ಅಪೇಕ್ಷೆಯನ್ನು ಪೂರೈಸುವೆನು" ಎಂದು ಸೂಚಿಸುವುದಕ್ಕಾಗಿ ಮಂದಹಾಸವನ್ನು ಧರಿಸಿದಳೆಂಬ ಅರ್ಥವು ಲಭಿಸುತ್ತದೆ.

'*ಶ್ರಿಯಾ ವಿಲೋಕಿತಾ ದೇವಾಃ ಸಪ್ರಜಾಪತಯಃಪ್ರಜಾಃ । ಶೀಲಾದಿಗುಣ-ಸಂಪನ್ನಾ ಲೇಭಿರೇ ನಿರ್ವೃತಿಂ ಪರಾಮ್ ॥*' (ಭಾಗವತ) 'ಲಕ್ಷ್ಮೀದೇವಿಯಿಂದ ನೋಡಲ್ಪಟ್ಟ ದೇವತೆಗಳು, ಪ್ರಜಾಪತಿಗಳಿಂದ ಸಹಿತರಾದ ಇತರ ದೇವಸ್ವಭಾವದ ಪ್ರಜೆಗಳು, ಸದ್ಗುಣಶೀಲರಾದ್ದರಿಂದ, ಪರಮಾನಂದವನ್ನು ಹೊಂದಿದರು. ನಿರ್ಲಜ್ಜರಾದ ವಿಷಯಲೋಲುಪರಾದ ದೈತ್ಯದಾನವರು, ಲಕ್ಷ್ಮಿಯಿಂದ ಉಪೇಕ್ಷಿತರಾಗಿ ನಿರಾಶರಾದರು, ಎಂಬುದಾಗಿ, ಲಕ್ಷ್ಮೀಸ್ವಯಂವರದ ಕಾಲದಲ್ಲಿ ದೇವದೈತ್ಯರೆಂಬ ಉಭಯವರ್ಗದಲ್ಲಿ ಉಂಟಾದ ಪ್ರತಿಕ್ರಿಯೆಯು ವರ್ಣಿತವಾಗಿದೆ. ಸೀತಾಸ್ವಯಂವರಕಾಲಕ್ಕೆ ದೇವತೆಗಳೆಲ್ಲರೂ ಬಂದಿದ್ದರೆಂಬ ವಿಷಯವನ್ನು ಪ್ರಸ್ತಾಪಿಸುತ್ತಾ— 'ವಿಜಾನಮಾನಾ ಜಗತಾಂ ಹಿ ಮಾತರಂ ಪುರಾರ್ಥಿತುಂ ನಾಯಯುರತ್ರ ದೇವತಾಃ । ತದಾ ತು ರಾಮಂ ರಾಮಯಾ ಯುತಂ ಪ್ರಭುಂ ದಿದೃಕ್ಷವಶ್ಚಕ್ರುರಲಂ ನಭಸ್ತಲಮ್ । ಯಥಾ ಪುರಾ ಸಾಗರಜಾಸ್ವಯಂವರೇ ಸುಮಾನಸಾನಾಮಭವತ್ಸಮಾಗಮಃ ॥' (ಭಾ.ತಾ.ನಿ.) ಎಂದರೆ. 'ಸೀತಾದೇವಿಯನ್ನು ಜಗನ್ಮಾತೆಯೆಂದು ಬಲ್ಲ ದೇವತೆಗಳು, ಸೀತೆಯನ್ನು ವರಿಸಲು, ಮೊದಲು ಬರಲಿಲ್ಲ ; ಈಗಲಾದರೋ, ತಮ್ಮ ಪ್ರಭು ರಾಮಚಂದ್ರನು ರಮಾಸಮೇತನಾಗಿರುವುದನ್ನು ನೋಡಿ ಆನಂದಪಡಲು ಆಕಾಶದಲ್ಲಿ ನೆರೆದರು ; ಹಿಂದೆ ಸಾಗರದಿಂದ ಹುಟ್ಟಿ ಬಂದ ಲಕ್ಷ್ಮೀ ಸ್ವಯಂವರದಲ್ಲಿ ದೇವತೆಗಳು ಈ ಮನೋಭಾವದಿಂದಲೇ ಇದ್ದರು ಎಂದು ಹೇಳಲಾಗಿದೆ. ಇದನ್ನೇ ಶ್ರೀವಾದಿರಾಜರು ತಮ್ಮ **ಭಾವಪ್ರಕಾಶಿಕೆಯಲ್ಲಿ**, 'ಲಕ್ಷ್ಮ್ಯಪೇಕ್ಷಯಾ ಇತಿ ಸೂಚಯತಿ' ಎಂದರೆ, 'ಸ್ವಯಂವರವನ್ನು ನೋಡಬೇಕೆಂದೇ ಉಭಯಪಾರ್ಶ್ವಗಳಲ್ಲಿ ಸಾಲಾಗಿ ನಿಂತಿದ್ದರಲ್ಲದೆ, ಲಕ್ಷ್ಮೀದೇವಿಯ ಅಪೇಕ್ಷೆಯಿಂದಲ್ಲ' ಎಂದು ಸ್ಪಷ್ಟಗೊಳಿಸಿದ್ದಾರೆ.

ಲಕ್ಷ್ಮಿದೇವಿಯು ಶ್ರೀಹರಿಯ ಕಂಠದಲ್ಲಿ ಹಾರವನ್ನು ಅರ್ಪಿಸಿ, ತನ್ನ ಪತಿಯ ವಕ್ಷಸ್ಥಳವನ್ನಾಶ್ರಯಿಸಿ ನಿಂತ ಮೇಲೆ, ದೇವತೆಗಳನ್ನು ತನ್ನ ಕೃಪಾದೃಷ್ಟಿಯಿಂದ ಅನುಗ್ರಹಿಸಿದ-ಳೆಂದೂ ಭಾಗವತದಲ್ಲಿ ಹೇಳಲಾಗಿದೆ. '*ಶ್ರೀಃ ಸ್ವಾಃಪ್ರಜಾಃಸಕರುಣೇನ ನಿರೀಕ್ಷಣೇನ ಯತ್ರ ಸ್ಥಿತಾ ಐಧಯತ ಸಾಧಿಪತೀನ್ ತ್ರಿಲೋಕಾನ್*' 'ಶ್ರೀಹರಿಯನ್ನು ಹೊಂದಿ ಅಲ್ಲಿ ನಿಂತ ಲಕ್ಷ್ಮೀದೇವಿಯು ಲೋಕಾಧಿಪತಿಗಳಾದ ದೇವತೆಗಳನ್ನು ಕೃಪಾದೃಷ್ಟಿಯಿಂದ ಅನು-ಗ್ರಹಿಸಿದಳು.

(೩) **'ನಸುನಗುತ'** ಎಂಬುದನ್ನು **'ಬಂದು'** ಎಂಬುದಕ್ಕೆ ಕ್ರಿಯಾ ವಿಶೇಷಣ-

ವನ್ನಾಗಿಟ್ಟುಕೊಂಡರೆ, ಸ್ತ್ರೀಯು ತನ್ನ ಪತಿಸಮೀಪಕ್ಕೆ ಹೋಗುವಾಗ ಲಜ್ಜಾಯುಕ್ತಮಂದಹಾಸ ಮುಖವುಳ್ಳವಳಾಗಿರಬೇಕೆಂಬ ಲೋಕನೀತಿಯನ್ನು ಶಿಕ್ಷಿಸುತ್ತಾ, ಲಕ್ಷ್ಮೀದೇವಿಯು, ಶ್ರೀಹರಿಯ ಸಮೀಪಕ್ಕೆ ನಡೆದು ಬಂದಳೆಂಬರ್ಥವನ್ನೂ ತಿಳಿಯಬಹುದಾಗಿದೆ.

ಉಟ್ಟ ಪೊಂಬಟ್ಟೆಯ ತೊಟ್ಟಾಭರಣಂಗಳು
ಇಟ್ಟ ನವರತ್ನದ ಮುಕುಟವು
ದುಷ್ಟಮರ್ದನನೆಂಬ ಕಡೆಯ ಪೆಂಡೆಗಳ
ವಟ್ಟಿದ್ದ ಹರಿಗೆ ವಧುವಾದಳು ॥ ಶೋಭಾನೆ ॥ ॥ ೭೦ ॥

ಅರ್ಥ:— ಪೊಂಬಟ್ಟೆಯ = ಸುವರ್ಣವಸ್ತ್ರವನ್ನು (ಜರತಾರಿಪೀತಾಂಬರವನ್ನು), ಉಟ್ಟ= ಉಟ್ಟುಕೊಂಡಿದ್ದ ಆಭರಣಂಗಳು = ಭೂಷಣಾಭರಣಗಳನ್ನು, ತೊಟ್ಟ= ಧರಿಸಿದ, ನವರತ್ನದ ಮುಕುಟವು = ರತ್ನಖಚಿತ ಕಿರೀಟವನ್ನು, ಇಟ್ಟ= (ಶಿರಸ್ಸಿನಲ್ಲಿ) ಧರಿಸಿದ, ದುಷ್ಟಮರ್ದನನೆಂಬ = ಈತನೇ ದುಷ್ಟಶಿಕ್ಷಕನೆಂಬುವರ, ಕಡೆಯ = ಪಕ್ಷದವರ (ದೇವತೆಗಳ), ಪೆಂಡೆಗಳ ವಟ್ಟಿದ್ದ= ಭಾರವನ್ನು ಹೊತ್ತಿದ್ದ ಹರಿಗೆ = ಶ್ರೀಹರಿಗೆ, ವಧುವಾದಳು = ಭಾರ್ಯಳಾದಳು. (ಶ್ರೀಹರಿಯನ್ನು ವರಿಸಿದ ಕನ್ಯೆಯಾದಳು).

ವಿಶೇಷಾಂಶ:— ಪೆಂಡೆ = ತಲೆಹೊರೆ ; ವಟ್ಟು = ಹೇರು. ತಮ್ಮ ಸ್ವಭಾವಶತ್ರುಗಳಾದ ದೈತ್ಯದಾನವರನ್ನು ನಿಗ್ರಹಿಸಿ, ಆಗಾಗ ಅವರಿಂದ ಒದಗುವ ವಿಪತ್ತುಗಳಿಂದ ತಮ್ಮನ್ನು ರಕ್ಷಿಸುವ ಭಾರವನ್ನು, ದೇವತೆಗಳು ಸದಾ ಶ್ರೀಹರಿಯ ಮೇಲೆಯೇ ಹೇರಿರುವರು. ದುಷ್ಟಜನಮರ್ದಕನಾದ್ದರಿಂದ ಶ್ರೀಹರಿಯು ಜನಾರ್ದನನೆಂದೂ ಪ್ರಸಿದ್ಧನು. ತನ್ನನ್ನು ಕಾಮಿಸಿದ ದುಷ್ಟರಾದ ದೈತ್ಯದಾನವರನ್ನು ಮೆಟ್ಟಿ ರಕ್ಷಿಸುವುದರಲ್ಲಿ ಸಮರ್ಥನಾದ ಶ್ರೀಹರಿಯನ್ನೇ ಆಶ್ರಯಿಸಿದಳು. ತುಚ್ಛವಾದ ದೈತ್ಯಸಮೂಹವನ್ನು ಭ್ರೂಭಂಗಮಾತ್ರದಿಂದ ನಿರ್ನಾಮಗೊಳಿಸಲು ಸ್ವಯಂ ಸಮರ್ಥಳಾದರೂ, ಲಕ್ಷ್ಮೀದೇವಿಯು, ಎಷ್ಟೇ ಸಮರ್ಥಳಾದರೂ, ತನ್ನ ಅವತಾರಗಳಲ್ಲಿ, ಪತಿಯಿಂದಲೇ ರಕ್ಷಣೆಯನ್ನು ಹೊಂದಬೇಕೆಂಬ ಲೋಕ ನೀತಿಯನ್ನು ಪ್ರದರ್ಶಿಸುತ್ತಾಳೆ. ಸೀತಾದೇವಿಗೆ ದುರುಳ ರಾವಣನನ್ನು ನಿಗ್ರಹಿಸುವ ಶಕ್ತಿಯಿರಲಿಲ್ಲವೇ ?

ಕೊಂಬುಚೊಂಬುಕಹಳೆಗಳು ತಾಳಮದ್ದಳೆಗಳು
ತಂಬಟೆಭೇರಿಪಟಹಗಳು
ಭೊಂಭೊಂ ಎಂಬ ಶಂಖಡೊಳ್ಳುಮೌರಿಗಳು
ಅಂಬುಧಿಮನೆಯಲ್ಲೆ ಸೆದವು ॥ ಶೋಭಾನೆ ॥ ॥ ೭೧ ॥

ಅರ್ಥ:— ಕೊಂಬು, ಚೊಂಬು, ಕಹಳೆಗಳು, ತಾಳ, ಮದ್ದಳೆಗಳು, ತಂಬಟೆ, ಭೇರಿ, ಪಟಹಗಳು, ಭೊಂ ಭೊಂ ಎಂಬ (ಎಂದು ಶಬ್ದಮಾಡುವ) ಶಂಖ, ಡೊಳ್ಳು, ಮೌರಿಗಳು, ಇವೇ ಮೊದಲಾದ ವಾದ್ಯವಿಶೇಷಗಳು, ಅಂಬುಧಿಯ ಮನೆಯಲ್ಲಿ= ಸಮುದ್ರರಾಜನ (ವರುಣನ) ಅರಮನೆಯಲ್ಲಿ ಎಸೆದವು = ಮೊಳಗಿದವು (ಉತ್ಸವ-ಸೂಚಕ ಧ್ವನಿಗೈದವು).

ವಿಶೇಷಾಂಶ:— ಸಮುದ್ರದಿಂದ ಹುಟ್ಟಿದ್ದರಿಂದ, ಲಕ್ಷ್ಮೀದೇವಿಯೇ, ಸಮುದ್ರ-ರಾಜನ ಮಗಳು (ಕ್ಷೀರಸಾಗರಕನ್ಯೆಯು) ; ಆಕೆಯು ಈ ಹಿಂದೆ ವರ್ಣಿಸಿದಂತೆ, ತಾನೇ ಶ್ರೀಹರಿಯನ್ನು ವರಿಸಿದ ನಂತರ, ವರುಣನು ಅವರ ವಿವಾಹೋತ್ಸವವನ್ನು ವಿಜೃಂಭಣೆ-ಯಿಂದ ನೆರವೇರಿಸಿ, ಆನಂದಿಸಿ, ಸರ್ವರಿಗೂ ಸಂತೋಷವನ್ನುಂಟುಮಾಡಿದ ಪ್ರಕಾರವನ್ನು ವರ್ಣಿಸುತ್ತಾರೆ.

ಅರ್ಘ್ಯ ಪಾದ್ಯಾಚಮನ ಮೊದಲಾದ ಷೋಡಶಾ-
ನರ್ಘ್ಯ ಪೂಜೆಯಿತ್ತನಳಿಯಂಗೆ
ಒಗ್ಗಿದ ಮನದಿಂದ ಧಾರೆಯೆರೆದನೆ ಸಿಂಧು
ಸದ್ಗತಿಯಿತ್ತು ಸಲಹೆಂದ ॥ ಶೋಭಾನೆ ॥ ॥ ೬೨ ॥

ಅರ್ಥ:— ಅರ್ಘ್ಯಪಾದ್ಯಾಚಮನಮೊದಲಾದ ಷೋಡಶ = ಅರ್ಘ್ಯ, ಪಾದ್ಯ, ಆಚಮನ, ಮೊದಲಾದ ಹದಿನಾರು, ಅನರ್ಘ್ಯ = ಅಮೌಲ್ಯವಾದ (ಮಹಾವೈಭವ-ಯುಕ್ತವಾದ), ಪೂಜೆಯ = ಪೂಜೆಯನ್ನು, ಅಳಿಯಂಗೆ = ಅಳಿಯನಾದ ಶ್ರೀಹರಿಗೆ, ಇತ್ತನು = ಅರ್ಪಿಸಿದನು ; ಸಿಂಧು = ಸಮುದ್ರನು (ವರುಣನು) ಒಗ್ಗಿದ ಮನದಿಂದ = (ತನ್ನ ಮಗಳು ಆರಿಸಿಕೊಂಡ ವರನನ್ನು ತಾನು ಪೂರ್ಣವಾಗಿ ಒಪ್ಪಿ) ಅತಿ ಸಂತೋಷದಿಂದ (ಹಿಗ್ಗಿದ ಮನದಿಂದ), ಧಾರೆಯೆರೆದನೆ = ಕನ್ಯೆಯನ್ನು (ಲಕ್ಷ್ಮಿಯನ್ನು) ಧಾರೆಯೆರೆದು-ಕೊಟ್ಟವನಾಗಿ (ಜಲಧಾರಾಪೂರ್ವಕ ಕನ್ಯಾದಾನ ಮಾಡಿದ ಮೇಲೆ) ; ಸದ್ಗತಿಯಿತ್ತು= ನನಗೆ ಸದ್ಗತಿಯನ್ನು ದಯಪಾಲಿಸಿ, ಸಲಹೆಂದ = ರಕ್ಷಿಸೆಂದು ಪ್ರಾರ್ಥಿಸಿದನು.

ವಿಶೇಷಾಂಶ:— *'ಅರ್ಘ್ಯಂ ಪಾದ್ಯಂ ಚಾಚಮನಂ ಮಧುಪರ್ಕಂ ತಥೈವ ಚ । ಪುನರಾಚಮನಂ ಸ್ನಾನಂ ವಸನಂ ಭೂಷಣಂ ತಥಾ । ಉಪವೀತಾಸನೇ ಗಂಧಪುಷ್ಪೇ ವೈ ಧೂಪದೀಪಕೌ । ನೈವೇದ್ಯಂ ನಮನಂ ಚೈತೇ ಉಪಚಾರಾಶ್ಚ ಷೋಡಶ ॥'* ಎಂದು ಹೇಳಿದಂತೆ, ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಪುನರಾಚಮನ, ಸ್ನಾನ, ವಸ್ತ್ರ ಭೂಷಣ, ಉಪವೀತ (ಜನಿವಾರ ಅಥವಾ ಮೇಲೆ ಹೊದೆಯುವ ವಸ್ತ್ರ), ಆಸನ, ಗಂಧ, ಪುಷ್ಪ ಧೂಪ, ದೀಪ, ನೈವೇದ್ಯ, ನಮಸ್ಕಾರಗಳೆಂಬ ಹದಿನಾರು, ಪೂಜಾಪ್ರಕಾರಗಳು.

ವೇದೋಕ್ತಮಂತ್ರ ಪೇಳಿ ವಸಿಷ್ಠನಾರದ
ಮೊದಲಾದ ಮುನೀಂದ್ರರು ಮುದದಿಂದ
ವಧೂವರರ ಮೇಲೆ ಶೋಭನದಕ್ಷತೆಯನು
ಮೋದವೀವುತ್ತ ತಳಿದರು ॥ ಶೋಭಾನೆ ॥ **॥ ೭೩ ॥**

ಅರ್ಥ:— ವಸಿಷ್ಠ, ನಾರದ ಮೊದಲಾದ ಮುನೀಂದ್ರರು = ವಸಿಷ್ಠ ನಾರದಾದಿ ಮುನಿಶ್ರೇಷ್ಠರು, ವೇದೋಕ್ತಮಂತ್ರ ಪೇಳಿ = ವೇದೋಕ್ತವಾದ (ವಿವಾಹಕಾಲದಲ್ಲಿ ವಧೂವರರಿಗೆ ಅಕ್ಷತಾರ್ಪಣೆ ಮಾಡುವಾಗ ಹೇಳಬೇಕೆಂದು ವಿಧಿಸಲ್ಪಟ್ಟಿರುವ) ಮಂತ್ರ-ವನ್ನು ಉಚ್ಚರಿಸಿ, ಮುದದಿಂದ = ಸಂತೋಷವಾಗಿ, ಶೋಭನದಕ್ಷತೆಯನು = ಮಂಗಳಾ-ಕ್ಷತೆಗಳನ್ನು, ಮೋದವೀವುತ್ತ = ಎಲ್ಲರಿಗೂ ಸಂತೋಷವನ್ನುಂಟುಮಾಡುತ್ತಾ, ವಧೂ-ವರರ ಮೇಲೆ = ಲಕ್ಷ್ಮೀನಾರಾಯಣರ ಮೇಲೆ, ತಳಿದರು = ಹಾಕಿದರು.

ವಿಶೇಷಾಂಶ:— *"ಇಹೈವಸ್ತಂ ಮಾವ್ಯೌಷ್ಟಂ ವಿಶ್ವಮಾಯುರ್ವ್ಯಶ್ನುತಂ । ಕ್ರೀಡಂತೌ ಪುತ್ರೈರ್ನಪ್ತೃಭಿರ್ಮೋದಮಾನೌ ಸ್ವೇಗೃಹೇ । ಆನಃ ಪ್ರಜಾಂ ಜನಯತು ಪ್ರಜಾಪತಿರಾಜರಸಾಯ ಸಮನಕ್ತ್ವರ್ಯಮಾಮ್ । ಪದಂ ಮಂಗಲೀಃಪತಿಲೋಕಮಾವಿಶ ಶನ್ನೋ ಭವದ್ವಿಪದೇ ಶಂ ಚತುಷ್ಪದೇ ॥"* ಇತ್ಯಾದಿ ಮಂತ್ರಗಳು ಉಚ್ಚರಿಸಲ್ಪಡುತ್ತವೆ.

ಭಾವಾರ್ಥ:— (ಸೋಮನಿಂದ ಗಂಧರ್ವನಿಗೂ, ಗಂಧರ್ವನಿಂದ ಅಗ್ನಿಗೂ, ಅಗ್ನಿಯಿಂದ ಮನುಷ್ಯನಿಗೂ ದತ್ತಳಾದ, ನೀನು ಸಂಪತ್ತು ಪುತ್ರಸಂತಾನಾದಿಗಳನ್ನು ಹೊಂದಿ, ಇತ್ಯಾದಿ ಪೂರ್ವಮಂತ್ರಗಳಿಂದ ಹೇಳಿ), "ಈ ನಿನ್ನ ಪತಿಯೊಡನೆ ಸುಖದಿಂದ ಪೂರ್ಣಾಯುಷ್ಮಂತಳಾಗಿ ಬಾಳು ; ನೀವಿಬ್ಬರೂ (ದಂಪತಿಗಳು) ಪುತ್ರಪೌತ್ರಾದಿ ಸಂತಾನ-ವನ್ನು ಪಡೆದು ಸುಖಿಸಿರಿ ; ಗೃಹಸ್ಥಾಶ್ರಮಧರ್ಮಗಳನ್ನು ಪಾಲಿಸುತ್ತಾ ವಿರಾಜಿಸಿರಿ ; ನಿಮಗೆ ಶ್ರೀಹರಿಯು ಬಹು ಪ್ರಜೆಗಳನ್ನು ಕೊಟ್ಟು, ನಮ್ಮನ್ನು ಸಂತೋಷಗೊಳಿಸಲಿ ; ಅಂತ್ಯದಲ್ಲಿ ಪರಮ ಮಂಗಳಕರವಾದ ಪತಿಲೋಕವನ್ನು ಹೊಂದುವವಳಾಗು ; ನಿಮ್ಮಿಂದ ಮನುಷ್ಯ ಪಶ್ವಾದಿ ಸಕಲರಿಗೂ ಸುಖವುಂಟಾಗಲಿ".

ಸಂಭ್ರಮದಿಂದಂಬರದಿ ದುಂದುಭಿ ಮೊಳಗಲು
ತುಂಬುರುನಾರದರು ಸ್ತುತಿಸುತ್ತ
ತುಂಬುರುನಾರದರು ಸ್ತುತಿಸುತ್ತ ಪಾಡಿದರು ಪೀ-
ತಾಂಬರಧರನ ಮಹಿಮೆಯನು ॥ ಶೋಭಾನೆ ॥ **॥ ೭೪ ॥**

ಅರ್ಥ:— ಅಂಬರದಿ = ಅಂತರಿಕ್ಷದಲ್ಲಿ, ಸಂಭ್ರಮದಿಂದ = ಸಡಗರದಿಂದ (ಉತ್ಸಾಹಪೂರ್ವಕ), ದುಂದುಭಿ = ದೇವದುಂದುಭಿಗಳು (ವಾದ್ಯವಿಶೇಷಗಳು)

ಮೊಳಗಲು = ಧ್ವನಿಗೈಯುತ್ತಿರಲು, ತುಂಬುರುನಾರದರು = ತುಂಬುರು ನಾರದರೆಂಬ (ಗಾನವಿಶಾರದ) ಋಷಿಗಳು, ಸ್ತುತಿಸುತ್ತ = ಸ್ತೋತ್ರಮಾಡುತ್ತ, ಪೀತಾಂಬರಧರನ = ಪೀತಾಂಬರಧಾರಿಯ (ಶ್ರೀಹರಿಯ), ಮಹಿಮೆಯನು = ಮಹಿಮೆಯನ್ನು (ಗುಣ-ಗಳನ್ನು), ಪಾಡಿದರು = ಹಾಡಿದರು.

ದೇವನಾರಿಯರೆಲ್ಲ ಬಂದೊದಗಿ ಪಾಠಕರು
ಓವಿಪಾಡುತ್ತಾ ಕುಣಿದರು
ದೇವತರುವಿನ ಹೂವಿನ ಮಳೆಗಳ
ಶ್ರೀವರನ ಮೇಲೆ ಕರೆದರು ॥ ಶೋಭಾನೆ ॥ ॥ ೭೫ ॥

ಅರ್ಥ:— ದೇವನಾರಿಯರೆಲ್ಲ = ದೇವಸ್ತ್ರೀಯರೆಲ್ಲರೂ, ಬಂದೊದಗಿ = (ಹಸೆಮಣೆಯನ್ನು ಸುತ್ತುಗಟ್ಟಿ ಆರತಿ ಬೆಳಗುತ್ತ) ವಧೂವರರ ಸಮೀಪಕ್ಕೆ ಬಂದು, ಪಾಠಕರು = (ರಾಜನ) ಸ್ತುತಿಪಾಠಕರು, ಓವಿ ಪಾಡುತ್ತ = ಹರಿಮಹಿಮೆಯನ್ನು ಗೌರವ-ದಿಂದ ಕೀರ್ತಿಸುತ್ತ, ಕುಣಿದರು = ಕುಣಿಯುತ್ತಿದ್ದರು ; ಶ್ರೀವರನ ಮೇಲೆ = ವಧೂ-ಸಮೇತನಾದ ವರನ ಮೇಲೆ, ದೇವತರುವಿನ = (ಮಂದಾರ ಪಾರಿಜಾತಾದಿ) ದೇವವೃಕ್ಷಗಳ, ಹೂವಿನ ಮಳೆಗಳ ಪುಷ್ಪವೃಷ್ಟಿಯನ್ನು, ಕರೆದರು = ಸುರಿಸಿದರು.

ಮುತ್ತು ರತ್ನಗಳಿಂದ ಕೆತ್ತಿದ ಹಸೆಯ ನವ-
ರತ್ನ ಮಂಟಪದಿ ಪಸರಿಸಿ
ರತ್ನ ಮಂಟಪದಿ ಪಸರಿಸಿ ಕೃಷ್ಣನ
ಮುತ್ತೈದೆಯರೆಲ್ಲ ಕರೆದರು ॥ ಶೋಭಾನೆ ॥ ॥ ೭೬ ॥

ಅರ್ಥ:— ಮುತ್ತುರತ್ನಗಳಿಂದ = ಮುತ್ತುರತ್ನಗಳಿಂದ, ಕೆತ್ತಿದ = ಖಚಿತವಾದ (ಅವುಗಳಿಂದ ನಿರ್ಮಿತವಾದ), ನವರತ್ನ ಮಂಟಪದಿ = ವಜ್ರವೈಡೂರ್ಯಾದಿ ನವರತ್ನ-ಗಳಿಂದ ಶೋಭಿಸುವ ಮಂಟಪದಲ್ಲಿ, ಹಸೆಯ ಪಸರಿಸಿ = ಹಸೆಮಣೆಯನ್ನು ವಿಸ್ತರಿಸಿ (ಹಾಕಿ ಅಲಂಕರಿಸಿ), ಮುತ್ತೈದೆಯರೆಲ್ಲ = ಎಲ್ಲ ಸುಮಂಗಳೆಯರು, ಕೃಷ್ಣನ = ಶ್ರೀಹರಿ-ಯನ್ನು, ಕರೆದರು = (ಅಲ್ಲಿ ಬಂದು ಕೂಡಲು) ಕರೆದರು.

ಕನ್ಯಾದಾನ ಮಾಡಿಕೊಟ್ಟನಂತರ, ಆರತಿ, ಅಕ್ಷತೆ, ಉರುಟಣೆ, ಸಂತರ್ಪಣೆ ಇತ್ಯಾದಿ ಉತ್ಸವಗಳು ಮಹಾವೈಭವದಿಂದ ನಡೆದುವೆಂದು, ಈ ನುಡಿಯಿಂದ ಆರಂಭಿಸಿ ಮುಂದೆ ನಿರೂಪಿಸುತ್ತಾರೆ.

ಶೇಷಶಯನನೆ ಬಾ ದೋಷದೂರನೆ ಬಾ
ಭಾಸುರಕಾಯ ಹರಿಯೇ ಬಾ
ಭಾಸುರಕಾಯ ಹರಿಯೇ ಶ್ರೀಕೃಷ್ಣ ವಿ-
ಲಾಸದಿಂದೆಮ್ಮ ಹಸೆಗೆ ಬಾ ॥ ಶೋಭಾನೆ ॥ ॥ ೭೭ ॥

ಅರ್ಥ:— ಶೇಷಶಯನನೆ = ಹೇ ಅನಂತಪದ್ಮನಾಭ ! (ಶೇಷಶಾಯಿ), ಬಾ = ದಯಮಾಡಿಸು, ದೋಷದೂರನೆ = (ಚಿಂತಾಸಂತಾಪಾದಿ) ದೋಷಗಳಿಂದ ಅತಿದೂರ-ನಾದ ಹೇ ಸ್ವಾಮಿ, ಬಾ = ಬಾರೈಯ್ಯ ; ಭಾಸುರಕಾಯ ಹರಿಯೇ = ದಿವ್ಯಕಾಂತಿ-ಸ್ವರೂಪನಾದ ಹೇ ಹರೇ !, ಬಾ = ಬೇಗ ಬಾರಪ್ಪ ; ಶ್ರೀಕೃಷ್ಣ = ಹೇ ಶ್ರೀಕೃಷ್ಣ !, ವಿಲಾಸದಿಂದ = ಆನಂದವನ್ನು ಬೀರುತ್ತಾ (ಅಥವಾ ಅಲಂಕಾರ ಭೂಷಿತನಾಗಿ), ನಮ್ಮ ಹಸೆಗೆ = ನಾವು ಆದರದಿಂದ ಸಿದ್ಧಗೊಳಿಸಿರುವ ರತ್ನಪೀಠಕ್ಕೆ, ಬಾ = ಬಂದು ಅಲಂಕರಿಸು.

ವಿಶೇಷಾಂಶ:— (೧) ಇಲ್ಲಿಂದ ಮುಂದಿನ ೧೪ ನುಡಿಗಳಲ್ಲಿ ಸುಮಂಗಳೆಯರು ಶ್ರೀಹರಿಯನ್ನು ಹಸೆಗೆ ಕರೆಯುವ ವರ್ಣನೆಯಿದೆ. ಈ ಆದರದ ಕರೆಯಲ್ಲಿ ಶ್ರೀಹರಿಯ ಗುಣೋತ್ಕರ್ಷಜ್ಞಾಪಕಗಳಾದ ಹರಿಲೀಲೆಗಳ ಪ್ರಸಂಗವೆಲ್ಲ ತುಂಬಿದೆ. ಸಜ್ಜನರಲ್ಲಿ ಮಾಹಾತ್ಮ್ಯಜ್ಞಾನಪೂರ್ವಕವಾದ ಭಕ್ತಿಯನ್ನು ಉದ್ರೇಕಗೊಳಿಸಲು ಬಹು ಉಪಯುಕ್ತ-ವಾಗಿದೆ. ಶ್ರೀಹರಿಯಿಂದ ದತ್ತವಾದ ಸಂಪದಾದಿಗಳನ್ನು ಶ್ರೀಹರಿಸೇವೆಯೆಂಬ ಅನುಸಂಧಾನಯುಕ್ತರಾಗಿ, ಉತ್ಸಾಹದಿಂದ ವಿವಾಹೋತ್ಸವಗಳಲ್ಲಿ ಯಥೋಚಿತವಾಗಿ ವಿನಿಯೋಗಿಸಿ ಹರ್ಷಿಸಬೇಕೆಂಬ ನೀತಿಯಿದೆ. ಶ್ರೀನಿವಾಸಕಲ್ಯಾಣ, ಸೀತಾಕಲ್ಯಾಣ ಇತ್ಯಾದಿ ರಮಾನಾರಾಯಣರ ಕಲ್ಯಾಣೋತ್ಸವಗಳನ್ನು ಆಚರಿಸುವುದರಿಂದ ದೊರೆಯುವ ಆನಂದದ ಹೊನಲನ್ನು ಇಲ್ಲಿ ಕಾಣುತ್ತೇವೆ.

(೨) ಶೇಷಶಾಯಿಯಾದ ಶ್ರೀಅನಂತಪದ್ಮನಾಭನೇ ಶ್ರೀಹರಿಯ ಎಲ್ಲ ಅವತಾರಗಳ ಮೂಲನೆಂದು ಹೇಳಲ್ಪಟ್ಟಿದೆ. ಈತನಿಂದಲೇ ಕಾಲಕಾಲಕ್ಕೆ ನಾನಾ ಅವತಾರ ರೂಪಗಳು ಈತನ ಇಚ್ಛಾನುಸಾರವಾಗಿ ಲೋಕದಲ್ಲಿ ಪ್ರಕಟವಾಗುತ್ತವೆ.

ಕಂಜಲೋಚನ ಬಾ ಮಂಜುಳಮೂರ್ತಿಯೇ ಬಾ
ಕುಂಜರವರದಾಯಕನೇ ಬಾ
ಕುಂಜರವರದಾಯಕನೆ ಬಾ ಶ್ರೀಕೃಷ್ಣ ನಿ-
ರಂಜನ ನಮ್ಮ ಹಸೆಗೆ ಬಾ ॥ ಶೋಭಾನೆ ॥ ॥ ೭೮ ॥

ಅರ್ಥ:— ಕಂಜಲೋಚನ = ಹೇ ಪುಂಡರೀಕಾಕ್ಷ ; ಬಾ = ದಯಮಾಡಿಸು ; ಮಂಜುಳಮೂರ್ತಿಯೆ – (ಭಕ್ತಾಕರ್ಷಕ) ಮನೋಹರಮೂರ್ತಿಯೇ !, ಬಾ =

ಬಾರಯ್ಯ, ; ಕುಂಜರವರದಾಯಕನೆ = ಗಜೇಂದ್ರವರದ !, ಶ್ರೀಕೃಷ್ಣ = ಹೇ ಅಜಿತ ! (ದೇವತೆಗಳೊಂದಿಗೆ ಸಮುದ್ರ ಮಥನಮಾಡಿದ ಹೇ ಹರೇ!), ನಮ್ಮ ನಿರಂಜನ = ದೋಷರಹಿತನೇ ! ಹಸೆಗೆ ಬಾ = ಈ ನಮ್ಮ ಮುಂದಿರುವ ಪೀಠವನ್ನಲಂಕರಿಸು.

ಆದಿಕಾಲದಲ್ಲಿ ಆಲದೆಲೆಯ ಮೇಲೆ
ಶ್ರೀದೇವಿಯರೊಡನೆ ಪವಡಿಸಿದ
ಶ್ರೀದೇವಿಯರೊಡನೆ ಪವಡಿಸಿದ ಶ್ರೀಕೃಷ್ಣ
ಮೋದದಿಂದೆಮ್ಮ ಹಸೆಗೆ ಬಾ ॥ ಶೋಭಾನೆ ॥ ॥ ೭೯ ॥

ಅರ್ಥ:— ಆದಿಕಾಲದಲ್ಲಿ ಸೃಷ್ಟಿಗೆ ಮೊದಲು (ಪ್ರಳಯಕಾಲದಲ್ಲಿ), ಆಲದೆಲೆಯ ಮೇಲೆ = ಆಲದ ಎಲೆಯಲ್ಲಿ, ಶ್ರೀದೇವಿಯರೊಡನೆ = ಲಕ್ಷ್ಮೀಸಹಿತನಾಗಿ, ಪವಡಿಸಿದ = ಮಲಗಿದ, ಶ್ರೀಕೃಷ್ಣ = ಹೇ ಕೃಷ್ಣ !, ಮೋದದಿಂದ = ನಮಗೆ ಆನಂದವನ್ನುಂಟುಮಾಡುತ್ತ (ನಮ್ಮ ಕರೆಯನ್ನು ಮನ್ನಿಸಿ ಸಂತೋಷದಿಂದ), ಎಮ್ಮ ಹಸೆಗೆ ಬಾ = ನಮ್ಮ ಈ ಪೀಠಕ್ಕೆ ಬಂದು ಕೂಡು.

ವಿಶೇಷಾಂಶ:— ಆಲದೆಲೆಯು, ಲಕ್ಷ್ಮೀದೇವಿಯ ಒಂದು ರೂಪವೇ. ಪ್ರಳಯೋದಕದಲ್ಲಿ ಶ್ರೀಹರಿಯು ಮಲಗುವಾಗ, ಉದಕ-ವಾಯು-ವಟಪತ್ರ ಎಲ್ಲ ರೂಪಗಳೂ ಶ್ರೀಲಕ್ಷ್ಮಿಯೇ ಆಗಿರುವಳು. ಆಕೆಯನ್ನು ಬಿಟ್ಟು ಬೇರಾವ ವಸ್ತುವೂ ಇಲ್ಲದ ಕಾಲವದು.

ಆದಿಕಾರಣನಾಗಿ ಆಗ ಮಲಗಿದ್ದು
ಮೋದಜೀವರ ತನ್ನ ಉದರದಲಿ
ಮೋದಜೀವರ ತನ್ನುದರದಲಿ ಇಂಬಿಟ್ಟ ಅ-
ನಾದಿಮೂರುತಿಯೇ ಹಸೆಗೆ ಬಾ ॥ ಶೋಭಾನೆ ॥ ॥ ೮೦ ॥

ಅರ್ಥ:— ಆದಿಕಾರಣನಾಗಿ = (ಸೃಷ್ಟಿಮೊದಲಾದ ಸರ್ವಕ್ಕೂ) ಮೂಲ-ಕಾರಣನಾಗಿದ್ದರೂ, ಆಗ = ಆ ಪ್ರಳಯಕಾಲದಲ್ಲಿ, ಮಲಗಿದ್ದು = (ಎಲ್ಲವನ್ನೂ ಬದಿ-ಗಿಟ್ಟು) ನಿರ್ವ್ಯಾಪಾರನಾಗಿ ಮಲಗಿ, ಮೋದಜೀವರ = ಮುಕ್ತರನ್ನು, (ಸ್ವರೂಪಾನಂದ-ಮಗ್ನರಾದ ಜೀವರನ್ನು), ತನ್ನ ಉದರದಲಿ = ತನ್ನ ಹೊಟ್ಟೆಯಲ್ಲಿ, ಇಂಬಿಟ್ಟ = ಆಶ್ರಯವಿತ್ತು ಇಟ್ಟುಕೊಂಡ, ಅನಾದಿಮೂರುತಿಯೇ = ಹೇ ಮೂಲ ನಾರಾಯಣ ! ಹಸೆಗೆ ಬಾ = ಪೀಠಕ್ಕೆ ದಯಮಾಡು.

ವಿಶೇಷಾಂಶ:— "ಜೀವರ ತನ್ನುದರದಲಿ ಇಂಬಿಟ್ಟ ಮೋದ" ಎಂದೂ ಓದಿಕೊಳ್ಳಬಹುದು = ಸೃಜ್ಯ, ಅಸೃಜ್ಯ, ಮುಕ್ತರೆಂಬ ತ್ರಿವಿಧ ಜೀವಸಮೂಹಗಳನ್ನೂ

ಉದರದಲ್ಲಿಟ್ಟುಕೊಂಡು ಮಲಗಿದ ಮೋದ ! = ಪೂರ್ಣಾನಂದಸ್ವರೂಪನೇ ! ಎಂದರ್ಥ.

ಚಿನ್ಮಯನೆನಿಪ ನಿಮ್ಮ ಮನೆಗಳಲ್ಲಿ ಜ್ಯೋ-
ತಿರ್ಮಯವಾದ ಪದ್ಮದಲ್ಲಿ
ರಮ್ಮೆಯರೊಡಗೂಡಿ ರಮಿಸುವ ಶ್ರೀಕೃಷ್ಣ
ನಮ್ಮ ಮನೆಯ ಹಸೆಗೆ ಬಾ ॥ ಶೋಭಾನೆ ॥ ॥ ೮೧ ॥

ಅರ್ಥ:— ನಿಮ್ಮ ಮನೆಗಳಲ್ಲಿ = (ಅನಂತಾಸನ, ನಾರಾಯಣಪುರ ಅಥವಾ ಅಪರಾಜಿತವೆಂಬ ಶ್ವೇತದ್ವೀಪದ ರಾಜಧಾನಿ, ಮತ್ತು ವೈಕುಂಠಗಳೆಂಬ) ನಿನ್ನ ನಿತ್ಯಾ-ವಾಸಗಳಲ್ಲಿಯೂ, ಜ್ಯೋತಿರ್ಮಯವಾದ ಪದ್ಮದಲ್ಲಿ = ಜ್ಯೋತೀರೂಪದ ಪದ್ಮ-ದಲ್ಲಿಯೂ (ಅರಳಿ ವಿರಾಜಿಸುವ ಕಮಲದಲ್ಲಿಯೂ), ರಮ್ಮೆಯರೊಡಗೂಡಿ = (ಅಲ್ಲ-ಲ್ಲಿರುವ) ಲಕ್ಷ್ಮೀರೂಪಗಳಿಂದ ಕೂಡಿ, ರಮಿಸುವ = ವಿಹರಿಸುವ, ಚಿನ್ಮಯನೆನಿಪ = ಅಪ್ರಾಕೃತರೂಪನೆಂದು ಪ್ರಸಿದ್ಧವಾದ (ಸರ್ವತ್ರ ಸದಾ ಚಿದಾನಂದ ದೇಹನಾದ), ಶ್ರೀಕೃಷ್ಣ = ಹೇ ಕೃಷ್ಣ !, ನಮ್ಮ ಮನೆಯ ಹಸೆಗೆ ಬಾ = (ನೀನೇ ದಯಪಾಲಿಸಿದ, ನಿನ್ನದೇ ಆದ) ಈ ನಮ್ಮ ಮನೆಯಲ್ಲಿ (ನಾವು ನಿನಗಾಗಿ ಆದರದಿಂದ ಸಿದ್ಧಗೊಳಿಸಿರುವ) ಈ ಪೀಠಕ್ಕೆ ದಯಮಾಡು.

ವಿಶೇಷಾಂಶ:— (೧) ಕಮಲಪುಷ್ಪವು ಸದಾ ಲಕ್ಷ್ಮೀಸನ್ನಿಧಾನಯುಕ್ತವಾದುದು. 'ಪದ್ಮಪ್ರಿಯೇ - ಪದ್ಮಾಲಯೇ' ಇತ್ಯಾದಿಗಳು ಲಕ್ಷ್ಮೀದೇವಿಯ ಅನ್ವರ್ಥನಾಮಗಳು. ಆಕೆಯಿದ್ದಲ್ಲಿ ಶ್ರೀಹರಿಯು ಇದ್ದೇ ಇರುವನು. ಅವರಿಬ್ಬರೂ ಪರಸ್ಪರ ಅವಿಯೋಗಿಗಳು - ದೇಶತಃ ಸಮವ್ಯಾಪ್ತಿಯುಳ್ಳವರು.

ನಾನಾವತಾರದಲಿ ನಂಬಿದ ಸುರರಿಗೆ
ಆನಂದವೀವ ಕರುಣಿ ಬಾ
ಆನಂದವೀವ ಕರುಣಿ ಬಾ ಶ್ರೀಕೃಷ್ಣ
ಶ್ರೀನಾರಿಯೊಡನೆ ಹಸೆಗೇಳು ॥ ಶೋಭಾನೆ ॥ ॥ ೮೨ ॥

ಅರ್ಥ:— ನಾನಾವತಾರದಲಿ = (ನಿನ್ನ) ವಿವಿಧವಾದ ಅವತಾರಗಳ ಲೀಲೆಗಳಿಂದ ; ನಂಬಿದ ಸುರರಿಗೆ = (ನಿನ್ನನ್ನೇ) ನಂಬಿ ಶರಣುಹೊಂದಿದ ದೇವತೆಗಳಿಗೆ, ಆನಂದವೀವ = (ಪರಿಪರಿಯ ದುಃಖಗಳನ್ನು ಪರಿಹರಿಸಿ) ಸುಖವನ್ನುಂಟುಮಾಡುವ,

ಕರುಣಿ = ಹೇ ಕೃಪಾಮೂರುತಿ ಶ್ರೀಕೃಷ್ಣಾ ! ಶ್ರೀನಾರಿಯೊಡನೆ = ಲಕ್ಷ್ಮೀಸಮೇತನಾಗಿ, ಹಸೆಗೇಳು = ಬೇಗನೆದ್ದು ಪೀಠಕ್ಕೆ ಬಾ ಸ್ವಾಮಿ.

ಬೊಮ್ಮನ ಮನೆಯಲ್ಲಿ ರನ್ನಪೀಠದಿ ಕುಳಿತು
ಒಮ್ಮನನೇಹವ ಮಾಡುವ
ನಿರ್ಮಲ ಪೂಜೆಯ ಕೈಗೊಂಬ ಶ್ರೀಕೃಷ್ಣ ಪ-
ರಮ್ಮ ಮೂರುತಿಯೇ ಹಸೆಗೆ ಬಾ ॥ ಶೋಭಾನೆ ॥ ॥ ೮೩ ॥

ಅರ್ಥ:— ಬೊಮ್ಮನ ಮನೆಯಲ್ಲಿ = ಬ್ರಹ್ಮದೇವನ ಮನೆಯಲ್ಲಿ, ರನ್ನ ಪೀಠದಿ ಕುಳಿತು = ರತ್ನಪೀಠದಲ್ಲಿ ಕೂತು, ಒಮ್ಮನ = ಒಂದೇ ಮನಸ್ಸಿನಿಂದ (ಅನ್ಯವನ್ನು ಚಿಂತಿಸದೆ ನಿನ್ನಲ್ಲಿಯೇ ಮನವಿಟ್ಟು), ನೇಹವ ಮಾಡುವ = ಸ್ನೇಹ (ಭಕ್ತಿ) ಮಾಡುವ, ನಿರ್ಮಲ-ಪೂಜೆಯ = ಕಲುಷರಹಿತನಾದ ಬ್ರಹ್ಮದೇವನ ಪವಿತ್ರವಾದ ಸೇವೆಯನ್ನು, ಕೈಗೊಂಬ = (ಸಂತೋಷದಿಂದ) ಸ್ವೀಕರಿಸುವ, ಶ್ರೀಕೃಷ್ಣ = ಹೇ ಶ್ರೀಕೃಷ್ಣ ! ಪರಮ್ಮಮೂರುತಿಯೇ = ಶ್ರೇಷ್ಠಮೂರುತಿಯೇ ! (ಸಚ್ಚಿದಾನಂದಮೂರ್ತಿ !), ಹಸೆಗೆ ಬಾ = ಪೀಠಕ್ಕೆ ದಯ-ಮಾಡು.

ಮುಖ್ಯಪ್ರಾಣನ ಮನೆಯಲ್ಲಿ ಭಾರತಿಯಾಗ-
ಲಿಕ್ಕಿ ಬಡಿಸಿದ ರಸಾಯನವ
ಸಕ್ಕರೆಗೂಡಿದ ಪಾಯಸ ಸವಿಯುವ
ರಕ್ಕಸವೈರಿಯೆ ಹಸೆಗೆ ಬಾ ॥ ಶೋಭಾನೆ ॥ ॥ ೮೪ ॥

ಅರ್ಥ:— ಮುಖ್ಯಪ್ರಾಣನ = ವಾಯುದೇವನ, ಮನೆಯಲ್ಲಿ ಭಾರತೀ-ದೇವಿಯು (ವಾಯುಪತ್ನಿ - ಗೃಹಿಣಿಯು), ಆಗಲಿಕ್ಕಿ ಬಡಿಸಿದ = ಆಗಲೇ ಸಿದ್ಧಮಾಡಿ ಬಡಿಸಿದ, ರಸಾಯನವ = ಸೀಕರಣೆಯನ್ನು, ಸಕ್ಕರೆಗೂಡಿದ = ಸಕ್ಕರೆ ಮಿಶ್ರವಾದ, ಪಾಯಸ = ಪಾಯಸವನ್ನು, ಸವಿಯುವ = ಉಣ್ಣುವ, ರಕ್ಕಸ ವೈರಿಯೆ = ರಾಕ್ಷಾಸಂತಕ-ನಾದ (ದೈತ್ಯರಿಪು) ಶ್ರೀಕೃಷ್ಣ! ಹಸೆಗೆ ಬಾ = ಪೀಠಕ್ಕೆ ದಯಮಾಡು.

ವಿಶೇಷಾಂಶ:— ಬ್ರಹ್ಮವಾಯು ಮೊದಲಾದ ದೇವಶ್ರೇಷ್ಠರಿಂದ, ಅಕ್ಕರೆಯಿಂದ ಪೂಜಿಸಲ್ಪಡುತ್ತಿರುವವನಾದರೂ, ಭಕ್ತವಾತ್ಸಲ್ಯದಿಂದ, ಅಲ್ಪರಾದ ಇತರರ ಪೂಜೆಯನ್ನೂ ಆದರದಿಂದ ಸ್ವೀಕರಿಸುವ ಕರುಣಾಶಾಲಿಯೆಂಬ ಮಹಿಮೆಯನ್ನು ಸ್ತುತಿಸುತ್ತಾರೆ. ಭಾರತೀದೇವಿಯು ಪಾಯಸ ಮಾಡುವಳು ("ಪಾಯಸಂ ಭಾರತೀ ಕುರ್ಯಾತ್") ಎಂಬ ಪ್ರಮೇಯವೂ ಸೂಚಿತವಾಗಿದೆ.

ರುದ್ರನ ಮನೆಯಲ್ಲಿ ರುದ್ರಾಣೀದೇವಿಯು
ಭದ್ರಮಂಟಪದಿ ಕುಳ್ಳಿರಿಸಿ
ಸ್ವಾದ್ವನ್ನಂಗಳ ಬಡಿಸಲು ಕೈಗೊಂಡ
ಮುದ್ದುನರಸಿಂಹ ಹಸೆಗೆ ಬಾ ॥ ಶೋಭಾನೆ ॥ ॥ ೮೫ ॥

ಅರ್ಥ:— ರುದ್ರನ ಮನೆಯಲ್ಲಿ = ಮಹೇಶ್ವರನ ಗೃಹದಲ್ಲಿ, ರುದ್ರಾಣೀ ದೇವಿಯು = ಅನ್ನಪೂರ್ಣಾದೇವಿಯು, ಭದ್ರಮಂಟಪದಿ = ಪರಿಶುದ್ಧವಾದ (ಸುಗಂಧ ದ್ರವ್ಯಾದಿಗಳಿಂದ ಅಲಂಕೃತವಾದ ದಿವ್ಯ) ಭೋಜನಶಾಲೆಯಲ್ಲಿ, ಕುಳ್ಳಿರಿಸಿ = (ದಿವ್ಯ-ಪೀಠದಲ್ಲಿ) ಕೂಡಿಸಿ, ಸ್ವಾದ್ವನ್ನಂಗಳ = ರುಚಿಕರಗಳಾದ ವಿವಿಧ ಅನ್ನಗಳನ್ನು, ಬಡಿಸಲು = ಉಣಬಡಿಸುತ್ತಿರಲು, ಕೈಗೊಂಡ = ಸ್ವೀಕರಿಸಿದ, ಮುದ್ದು ನರಸಿಂಹ = ಚೆಲುವ ನರಹರೇ ! ಹಸೆಗೆ ಬಾ = ಹಸೆಗೆ ಬಾ ಪ್ರಭುವೆ !

ವಿಶೇಷಾಂಶ:— (೧) ಅನ್ನಪೂರ್ಣಾದೇವಿಯು (ಉಮಾದೇವಿಯ ರೂಪಾಂ-ತರ) ಅನ್ನಾಭಿಮಾನಿಯು. ಆಕೆಗಿಂತ ಉತ್ತಮರೆಲ್ಲರೂ ಸಹ ಅನ್ನಾಭಿಮಾನಿಗಳೆಂಬುದನ್ನೂ ಮರೆಯಲಾಗದು. ಆಕೆಯ ಅನುಗ್ರಹದಿಂದ ಚಂದ್ರನೂ ಅವಾಂತರ ಅನ್ನಾಭಿಮಾನಿಯು. **''ಅನ್ನಾಭಿಮಾನೀ ಚಂದ್ರಸ್ತು''** ಎಂದೂ ಪ್ರಮಾಣವಿದೆ.

(೨) ನರಸಿಂಹರೂಪವು ಮಹಾ ಉಗ್ರರೂಪವೆಂಬ ಪ್ರಸಿದ್ಧಿಯಿದೆ. ಹಿರಣ್ಯಕಶಿಪುವಿನ ಸಂಹಾರಕಾಲದಲ್ಲಿ ಮಾತ್ರ ಆ ಉಗ್ರತೆ. ಪ್ರಹ್ಲಾದನು ಕೋಪವನ್ನು ತನ್ನ ಸ್ತೋತ್ರದಿಂದ, ಉಪಶಮನಗೊಳಿಸಿದ ನಂತರ ಪರಮಸೌಮ್ಯರೂಪವನ್ನು ತಾಳಿದನು. ಉಗ್ರತ್ವ – ಸೌಮ್ಯತ್ವಗಳೆಂಬ ಲೋಕವಿರುದ್ಧಗುಣಗಳನ್ನು ಏಕಕಾಲದಲ್ಲಿ ಹೊಂದಿರುವ ಅಚಿಂತ್ಯಮಹಿಮನೂ ಆಗಿದ್ದಾನೆ ಶ್ರೀಹರಿ. **'ಅಣೋರಣೀಯಾನ್ ಮಹತೋಮಹೀ-ಯಾನ್'** — ಅಣುಗಿಂತ ಅಣು, ಮಹತ್ತಿಗಿಂತ ಮಹತ್ತು ಎಂದೂ, **'ಗುಣಾಃಶ್ರುತಾಃ-ಸುವಿರುದ್ಧಾಶ್ಚ ಲೋಕೇ'** – ಲೋಕದಲ್ಲಿ ಅತ್ಯಂತವಿರುದ್ಧಗಳೆಂದು ಪ್ರಸಿದ್ಧವಾದ ಗುಣಗಳೂ (ಅಶ್ರುತಗುಣಗಳೂ) ಶ್ರೀಹರಿಯಲ್ಲಿವೆ, ಎಂದೂ, **'ಯಸ್ಮಿನ್ ವಿರುದ್ಧಗತಯೋऽಹ್ಯನಿಶಂ ಪತಂತಿ'** (ಭಾಗವತ) ಶ್ರೀಹರಿಯಲ್ಲಿ, ವಿರುದ್ಧಗಳೆಂಬ ಗತಿಗಳೆಲ್ಲವೂ ಸದಾ ಇವೆ ; ಇತ್ಯಾದಿ ಶ್ರುತಿಸ್ಮೃತಿಗಳ ಪ್ರಮಾಣಗಳು ಸಾರುತ್ತವೆ.

(೩) ಶ್ರೀಹರಿಯ ಅನಂತರೂಪಗಳಲ್ಲಿ ಪ್ರತಿಯೊಂದೂ ಸೌಂದರ್ಯಸಾರವೇ ಆಗಿದೆ. ಆದ್ದರಿಂದಲೇ **'ಮುದ್ದು ನರಸಿಂಹ'** ಎಂದುದು. ಈವರೆಗೆ ಶ್ರೀಕೃಷ್ಣನನ್ನು ಹಸೆಗೆ ಕರೆದು ಈಗ ನರಸಿಂಹನೆಂದು ಕರೆದುದು, ಶ್ರೀಕೃಷ್ಣನು ನೃಸಿಂಹನಿಂದ ಅತ್ಯಂತ ಅಭಿನ್ನ-ನೆಂದು ತಿಳಿಸಲಿಕ್ಕೆ ಮಾತ್ರವಲ್ಲದೇ **'ಒಂದು ರೂಪದೊಳನಂತ ರೂಪಗಳು ಪೊಂದಿಪ್ಪವು**

ಗುಣಗಣಸಹಿತ' ಎಂಬ ಪ್ರಮೇಯಸೂಚಕವೆಂದೂ ತಿಳಿಯಬೇಕು. ಕೃಷ್ಣರೂಪದಲ್ಲಿ ಮತ್ಸ್ಯ, ಕೂರ್ಮ, ರಾಮ, ಕಪಿಲ ಮೊದಲಾದ ಅನಂತರೂಪಗಳೂ ಇವೆ. ಒಂದೊಂದೂ ಅಸಂಖ್ಯಾತವಾಗಿವೆ. ರಾಮರೂಪದಲ್ಲಿ ಅಸಂಖ್ಯ ರಾಮರೂಪಗಳೂ ಇವೆ ; ಎಲ್ಲ ರೂಪಗಳಲ್ಲಿ ಎಲ್ಲ ಗುಣಗಳೂ ಇವೆ.

ಗರುಡನ ಮೇಲೇರಿ ಗಗನಮಾರ್ಗದಲ್ಲಿ
ತರತರದಿ ಸ್ತುತಿಪ ಸುರಸ್ತ್ರೀಯರ ।
ಮೆರೆವ ಗಂಧರ್ವರ ಗಾನವ ಸವಿಯುವ
ನರಹರೆ ನಮ್ಮ ಹಸೆಗೆ ಬಾ ॥ ಶೋಭಾನೆ ॥ ॥ ೮೬ ॥

ಅರ್ಥ:— ಗರುಡನ ಮೇಲೇರಿ = ಗರುಡನ ಮೇಲೆ ಕೂತು, ಗಗನಮಾರ್ಗ-ದಲ್ಲಿ = ಆಕಾಶಮಾರ್ಗದಲ್ಲಿ, ಮೆರೆವ = ಸಂಚರಿಸುತ್ತ ಶೋಭಿಸುವ, ಮತ್ತು ತರ-ತರದಿ = ನಾನಾ ಪ್ರಕಾರದಿಂದ, ಸ್ತುತಿಪ = ಸ್ತುತಿಸುವ, ಸುರಸ್ತ್ರೀಯರ = ದೇವತಾ ಸ್ತ್ರೀಯರ, ಹಾಗೂ ಗಂಧರ್ವರ, ಗಾನವ = ಗಂಧರ್ವರ ಗಾನವನ್ನು, ಸವಿಯುವ = ಆದರದಿಂದ ಆಲಿಸುವ, ನರಹರೆ = ಹೇ ನರಸಿಂಹ ! ನಮ್ಮ ಹಸೆಗೆ ಬಾ = ನಮ್ಮಿಂದ ನಿರ್ಮಿತವಾದ ಪೀಠಕ್ಕೆ ದಯಮಾಡು.

ನಿಮ್ಮಣ್ಣನ ಮನೆಯ ಸುಧರ್ಮಸಭೆಯಲ್ಲಿ
ಉಮ್ಮೆಯರಸ ನಮಿಸಿದ ।
ಧರ್ಮರಕ್ಷಕನೆನಿಪ ಕೃಷ್ಣ ಕೃಪೆಯಿಂದ ಪ-
ರಮ್ಮಮೂರುತಿಯೆ ಹಸೆಗೆ ಬಾ ॥ ಶೋಭಾನೆ ॥ ॥ ೮೭ ॥

ಅರ್ಥ:— ನಿಮ್ಮಣ್ಣನ ಮನೆಯ = (ಹೇಕೃಷ್ಣ ! ಹೇ ಉಪೇಂದ್ರ !) ನಿನ್ನ ಅಣ್ಣನಾದ ಇಂದ್ರನ ಮನೆಯ, ಸುಧರ್ಮಸಭೆಯಲ್ಲಿ = "**ಸುಧರ್ಮ**" ವೆಂಬ ಪ್ರಸಿದ್ಧ ಹೆಸರುಳ್ಳ ಸಭಾಮಂಟಪದಲ್ಲಿ, ಉಮ್ಮೆಯರಸ = ಉಮಾಪತಿಯು (ಮಹದೇವನು), ನಮಿಸಿದ = (ತುಂಬಿದ ದೇವಸಭಾ ಮಧ್ಯದಲ್ಲಿ ನಿನ್ನನ್ನು) ನಮಸ್ಕರಿಸಿದನು ; (ಹೀಗೆ ರುದ್ರಾದಿದೇವತೆಗಳಿಂದಲೂ ವಂದ್ಯನಾದ) ಧರ್ಮರಕ್ಷಕನೆನಿಪ = ಧರ್ಮರಕ್ಷಕನೆಂದು ಶಾಸ್ತ್ರಪ್ರಸಿದ್ಧನಾದ, ಕೃಷ್ಣ = ಹೇ ಕೃಷ್ಣ ! ಪರಮ ಮೂರುತಿಯೆ = ಹೇ ಸಚ್ಚಿದಾನಂದ ವಿಗ್ರಹ ! ಹಸೆಗೆ ಬಾ = ಪೀಠಕ್ಕೆ ಬಾ ದೇವ.

ಇಂದ್ರನ ಮನೆಗ್ಹೋಗಿ ಅದಿತಿಗೆ ಕುಂಡಲವಿತ್ತು
ಅಂದದ ಪೂಜೆಯ ಕೈಗೊಂಡು ।

ಅಂದದ ಪೂಜೆಯ ಕೈಗೊಂಡು ಸುರತರುವ
ಇಂದಿರೆಗಿತ್ತ ಹರಿಯೆ ಬಾ ॥ ಶೋಭಾನೆ ॥ ॥ ೮೮ ॥

ಅರ್ಥ:— ಇಂದ್ರನ ಮನೆಗೆ = ದೇವೇಂದ್ರನ ಅರಮನೆಗೆ, ಹೋಗಿ, ಅದಿತಿಗೆ = (ತಾಯಿಯಾದ) ಅದಿತಿದೇವಿಗೆ, ಕುಂಡಲವಿತ್ತು = ಕುಂಡಲಗಳನ್ನು ಕೊಟ್ಟು, ಅಂದದ = ಮಹಾವೈಭವಯುಕ್ತವಾದ, ಪೂಜೆಯ = ಸತ್ಕಾರವನ್ನು, ಕೈಗೊಂಡು = ಸ್ವೀಕರಿಸಿ, ಸುರ-ತರುವ = ಪಾರಿಜಾತಪುಷ್ಪವನ್ನು, ಇಂದಿರೆಗಿತ್ತ = ಲಕ್ಷ್ಮೀಸ್ವರೂಪಳಾದ ಸತ್ಯಭಾಮಾ-ದೇವಿಗೆ ಕೊಟ್ಟು ಸಂತೋಷಪಡಿಸಿದ, ಹರಿಯೇ - ಹೇ ಕೃಷ್ಣ ! ಬಾ = ಪೀಠವನ್ನು ಅಲಂಕರಿಸಲು ಬಾ.

ವಿಶೇಷಾಂಶ:— ಸತ್ಯಭಾಮಾ ಮತ್ತು ರುಕ್ಮಿಣೀ ಉಭಯರೂ ಲಕ್ಷ್ಮೀಸ್ವರೂಪರು; ಶ್ರೀಕೃಷ್ಣಪತ್ನಿಯರು, ಸತ್ಯಭಾಮೆಯೊಡನೆ ಗರುಡಾರೂಢನಾಗಿ ನರಕಾಸುರನ ಸಂಹಾರ-ಕ್ಕಾಗಿ ಪ್ರಾಗ್ಜ್ಯೋತಿಷಪುರಕ್ಕೆ ಪ್ರಯಾಣಮಾಡಿ, ದುರ್ಗಮವಾದ ಆ ಪಟ್ಟಣವನ್ನು, ಲೀಲೆಯಿಂದ ಮುರಾಸುರನೇ ಮೊದಲಾದ ಪ್ರಚಂಡ ದೈತ್ಯಸಮೂಹವನ್ನು ನಾಶಮಾಡಿ, ಪ್ರವೇಶಿಸಿದನು. ನರಕಾಸುರನು ಶ್ರೀಕೃಷ್ಣನೊಂದಿಗೆ ಉಗ್ರವಾಗಿ ಹೋರಾಡಿ ಮೃತನಾದನು. ನರಕಾಸುರನ ತಾಯಿ ಭೂದೇವಿಯು, ಮಗನಾದ ಭಗದತ್ತನನ್ನು ಶ್ರೀಕೃಷ್ಣನ ಪಾದಗಳಲ್ಲಿ ಕೆಡವಿ, ರಕ್ಷಣೆಯನ್ನು ಕೋರಿ, ನರಕಾಸುರನು ಅಪಹರಿಸಿ ತಂದಿದ್ದ ಅದಿತಿದೇವಿಯ ಕರ್ಣಕುಂಡಲಗಳನ್ನೂ, ಇಂದ್ರನ ಶ್ವೇತಛತ್ರ, ಮಣಿಪರ್ವತಗಳನ್ನು, ಶ್ರೀಕೃಷ್ಣನಿಗೆ ಅರ್ಪಿಸಿದಳು. ಇದಕ್ಕಾಗಿಯೇ ಇಂದ್ರನಿಂದ ಪ್ರಾರ್ಥಿತನಾಗಿ ಅಲ್ಲಿಗೆ ಬಂದು, ನರಕನನ್ನು ನಿಗ್ರಹಿಸಿದ ಶ್ರೀಕೃಷ್ಣನು, ಅಲ್ಲಿ ನೇರವಾಗಿ ಸ್ವರ್ಗಕ್ಕೆ ಹೋಗಿ ಕರ್ಣಕುಂಡಲಗಳನ್ನು, ಅದಿತಿದೇವಿಗೆ ಕೊಟ್ಟು ತಾಯಿಯನ್ನು ಸಂತೋಷಪಡಿಸಿದನು. ಇಂದ್ರ-ಉಪೇಂದ್ರ (ವಾಮನ)ರಿಬ್ಬರೂ ಅದಿತೀದೇವಿಯ ಮಕ್ಕಳು. ಆ ವಾಮನನೇ ಕೃಷ್ಣನಾಗಿ ಅವತರಿಸಿ-ರುವುದರಿಂದ ಅದಿತಿಯು ಮಾತೃಸ್ಥಾನೀಯಳು. ಹೀಗಲ್ಲದೇ ಶ್ರೀಕೃಷ್ಣನಿಗೆ ಬೇರೆ ತಾಯಿಯೆಂಬುವಳುಂಟೇ ! ಸ್ವರ್ಗದಿಂದ ತಿರುಗಿ ಬರುವಾಗ ಸತ್ಯಭಾಮೆಯ ಅಪೇಕ್ಷೆಯಂತೆ, ನಂದನವನದಲ್ಲಿದ್ದ ವೃಕ್ಷವನ್ನು ಕಿತ್ತಿ ಗರುಡನ ಮೇಲಿಟ್ಟು ಭೂಲೋಕಕ್ಕೆ ಹೊರಟನು. ಈ ಪ್ರಸಂಗದಲ್ಲಿ (ಅಸುರಾವೇಶ ನಿಮಿತ್ತವಾಗಿ) ಇಂದ್ರನು ದಿಕ್ಪಾಲಕರಿಂದ ಕೂಡಿ ಶ್ರೀಕೃಷ್ಣನನ್ನು ಎದುರಿಸಿ ಯುದ್ಧಮಾಡಿ ಸೋತು, ಜ್ಞಾನೋದಯವನ್ನು ಹೊಂದಿ, ಶ್ರೀಕೃಷ್ಣನನ್ನು ವಿಶೇಷವಾಗಿ ಪೂಜಿಸಿ, ಪಾರಿಜಾತಪುಷ್ಪವನ್ನು ತನ್ನ ಅವತಾರಪರಿಸಮಾಪ್ತಿ ಪರ್ಯಂತ ಭೂಲೋಕದಲ್ಲಿಟ್ಟು ಉಪಯೋಗಿಸಲೊಪ್ಪಿದನು. ಅದನ್ನು ತಂದು ಸತ್ಯಭಾಮೆಯ ಅರಮನೆಯ ಅಂಗಳದಲ್ಲಿ ನೆಟ್ಟನು.

ನಿಮ್ಮ ನೆನೆವ ಮುನಿಹೃದಯದಲಿ ನೆಲೆಸಿದ
ಧರ್ಮರಕ್ಷಕನೆನಿಸುವ
ಸಮ್ಮತವಾಗಿದ್ದ ಪೂಜೆಯ ಕೈಗೊಂಡ ನಿ-
ಸ್ಸೀಮಮಹಿಮ ಹಸೆಗೆ ಬಾ ॥ ಶೋಭಾನೆ ॥ ॥ ೮೯ ॥

ಅರ್ಥ:— ನಿಮ್ಮ ನೆನೆವ = ನಿನ್ನನ್ನು ಧ್ಯಾನಿಸುವ, ಮುನಿಹೃದಯದಲಿ = ಯೋಗಿಗಳ ಹೃದಯದಲ್ಲಿ, ನೆಲೆಸಿದ = ಸ್ಥಿರವಾಗಿ ನಿಂತಿರುವ, ಧರ್ಮರಕ್ಷಕನೆನಿಸುವ (ವೈಯಕ್ತಿಕವಾಗಿ ಮತ್ತು ಮಾನವಸಮಾಜದಲ್ಲಿ ಸಹ) ಧರ್ಮವನ್ನು ರಕ್ಷಿಸುವ ಸ್ವತಂತ್ರಪ್ರಭುವಾದ, ನಿಸ್ಸೀಮಮಹಿಮ = ಅಪಾರಮಹಿಮನೇ ! ಸಮ್ಮತವಾಗಿದ್ದ= ನಿನಗೆ ಒಪ್ಪಿಗೆಯಾಗುವ (ಭಕ್ತಿಯಿಂದ ಮಾಡಲ್ಪಡುವ), ಪೂಜೆಯನ್ನು (ಅಲ್ಪವಾಗಲಿ, ವೈಭವದ್ದಾಗಲಿ), ಕೈಗೊಂಡ = ಸ್ವೀಕರಿಸುತ್ತಿರುವ, ಹೇ ಕೃಷ್ಣ! ಹಸೆಗೆ ಬಾ = ಸತ್ಕಾರಪೀಠಕ್ಕೆ ದಯಮಾಡಿಸು.

ವಿಶೇಷಾಂಶ:— (೧) 'ಯೋಗೇಶ್ವರಾಸ್ಥಾಪಿತಪಾದಪಲ್ಲವಃ' ಧ್ಯಾನ ಯೋಗಿಗಳ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸಿದ ಕೋಮಲಪಾದಗಳುಳ್ಳವನೆಂದು ವರ್ಣಿತವಾದ ಮಹಿಮೆಯುಳ್ಳವನೆಂಬ ಸ್ತುತಿಯಿದು.

(೨) ಪ್ರತಿಯೊಬ್ಬ ಜೀವನನ್ನು ಧರ್ಮಮಾರ್ಗದಲ್ಲಿಟ್ಟು ನಡೆಸುವವನೂ ಶ್ರೀಹರಿಯೇ. ಜಗತ್ತಿನಲ್ಲಿ ಧರ್ಮವನ್ನು ರಕ್ಷಿಸುವವನೂ ಆತನೇ – ಅದಕ್ಕಾಗಿಯೇ ಅವನ ಅವತಾರಗಳು.

(೩) **'ಪೂಜೆಯ ಕೈಗೊಂಡ'** ಎಂಬುದು, ಉತ್ತಂಕ, ಶ್ರುತದೇವ ಮೊದಲಾದ ಮುನಿಗಳನ್ನು ಅನುಗ್ರಹಿಸಿ ಅವರ ಪೂಜೆಯನ್ನು ಶ್ರೀಕೃಷ್ಣನು ಸ್ವೀಕರಿಸಿದ ಕಥಾಜ್ಞಾಪಕವೆಂದೂ ತಿಳಿಯಬಹುದಾಗಿದೆ.

ಮುತ್ತಿನ ಸತ್ತಿಗೆ ನವರತ್ನದ ಚಾಮರ
ಸುತ್ತ ನಲಿವ ಸುರಸ್ತ್ರೀಯರ
ನೃತ್ಯವ ನೋಡುತ ಚಿತ್ರವಾದ್ಯಂಗಳ ಸಂ-
ಪತ್ತಿನ ಹರಿಯೇ ಹಸೆಗೆ ಬಾ ॥ ಶೋಭಾನೆ ॥ ॥ ೯೦ ॥

ಅರ್ಥ:— ಮುತ್ತಿನ ಸತ್ತಿಗೆ = ಮುತ್ತಿನ ಕೊಡೆಯಿಂದ ಅಲಂಕೃತನಾಗಿ, ನವರತ್ನದ ಚಾಮರ = ನವರತ್ನದ ಹಿಡಿಯುಳ್ಳ ಚಾಮರಗಳಿಂದ ಸೇವಿತನಾಗಿ, ಸುತ್ತನಲಿವ = ಸುತ್ತಲೂ ನಲಿದಾಡುವ, ಸುರಸ್ತ್ರೀಯರ = ದೇವಸ್ತ್ರೀಯರ, ನೃತ್ಯವ = ನೃತ್ಯವನ್ನು, ನೋಡುತ = ನೋಡುತ್ತ, ಚಿತ್ರವಾದ್ಯಂಗಳ = ವಿಚಿತ್ರವಾದ (ದಿವ್ಯವಾದ) ವಿವಿಧ

ವಾದ್ಯಗಳ, ಸಂಪತ್ತಿನ ಹರಿಯೆ = ಸಂಪತ್ತುಳ್ಳ (ಪರಿಪೂರ್ಣತೆಯುಳ್ಳ), ಹೇ ಕೃಷ್ಣ! ಹಸೆಗೆ ಬಾ = ಪೀಠಕ್ಕೆ ಬಾ.

ಎನಲು ನಗುತ ಬಂದು ಹಸೆಯ ಮೇಲೆ
ವನಿತೆ ಲಕ್ಷುಮಿಯೊಡಗೂಡಿ
ಅನಂತವೈಭವದಿ ಕುಳಿತ ಕೃಷ್ಣನ ನಾಲ್ಕು
ದಿನದುತ್ಸಹವ ನಡೆಸಿದರು ॥ ಶೋಭಾನೆ ॥ ॥ ೯೧ ॥

ಅರ್ಥ:— ಎನಲು = ಹೀಗೆ ಸುಮಂಗಳೆಯರು ಹಸೆಗೆ ಕರೆಯಲು, ನಗುತ = ಮಂದಹಾಸಯುಕ್ತನಾಗಿ, ಹಸೆಯ ಮೇಲೆ = ಪೀಠದ ಮೇಲೆ ಕೂಡಲು, ಬಂದು = (ಗಂಭೀರವಾಗಿ) ನಡೆದು ಬಂದು, ವನಿತೆ ಲಕ್ಷುಮಿಯೊಡಗೂಡಿ = (ನಿತ್ಯನೂತನ) ವಧುವಾದ ಲಕ್ಷ್ಮೀದೇವಿಯೊಂದಿಗೆ, ಅನಂತವೈಭವದಿ = ಅಪಾರವಾದ ಕಾಂತಿಯಿಂದ ಶೋಭಿಸುತ್ತ, ಕುಳಿತ = ಪೀಠವನ್ನು ಅಲಂಕರಿಸಿದ, ಕೃಷ್ಣನ = ಶ್ರೀಹರಿಯ, ನಾಲ್ಕುದಿನ-ದುತ್ಸಹವ = ನಾಲ್ಕುದಿನಗಳವರೆಗೆ ನಡೆದ ವಿವಾಹೋತ್ಸವವನ್ನು, ನಡೆಸಿದರು = (ವರುಣನೇ ಮೊದಲಾದ ದೇವತೆಗಳು) ಉತ್ಸಾಹದಿಂದ ಮಾಡಿದರು.

ಅತ್ತೇರೆನಿಪ ಗಂಗೆ ಯಮುನೆ ಸರಸ್ವತಿ ಭಾ-
ರತಿ ಮೊದಲಾದ ಸುರಸ್ತ್ರೀಯರು
ಮುತ್ತಿನಕ್ಷತೆಯನು ಶೋಭಾನವೆನುತ ತ-
ಮ್ಮರ್ತಿಯಳಿಯಗೆ ತಳಿದರು ॥ ಶೋಭಾನೆ ॥ ॥ ೯೨ ॥

ಅರ್ಥ:— ಅತ್ತೇರು = ಅತ್ತೆಯರು, ಎನಿಪ = ಲೋಕರೀತಿಯಿಂದ ಕರೆಸಿ ಕೊಳ್ಳುವ, ಗಂಗೆ ಯಮುನೆ ಸರಸ್ವತಿ ಭಾರತಿ ಮೊದಲಾದ ಸುರಸ್ತ್ರೀಯರು = ಗಂಗಾ, ಯಮುನಾ, ಸರಸ್ವತೀ, ಭಾರತೀ ಮೊದಲಾದ ಇತರ ದೇವಸ್ತ್ರೀಯರು, ಶೋಭಾನ-ವೆನುತ = ಮಂಗಳವನ್ನು ಹಾಡುತ್ತ, ತಮ್ಮರ್ತಿಯಳಿಯಗೆ = ತಮ್ಮ ಪ್ರೀತಿಯ ಅಳಿಯನಿಗೆ (ಶ್ರೀಹರಿಗೆ), ಮುತ್ತಿನಕ್ಷತೆಯನು = ಮುತ್ತಿನ ಅಕ್ಷತಾದಿಗಳನ್ನು (ಆಶೀರ್ವಾದಸೂಚಕ ಅಕ್ಷತೆಗಳನ್ನು), ತಳೆದರು = ಒಪ್ಪಿಸಿ ಆನಂದಿಸಿದರು.

ವಿಶೇಷಾಂಶ:— ಗಂಗೆಯಮುನೆಯರು ವರುಣನ ಪತ್ನಿಯರಾದ್ದರಿಂದ ಅಜಿತ ರೂಪೀ ಶ್ರೀಹರಿಯ ಅತ್ತೆಯರು - ಸಮುದ್ರದಿಂದ ಹುಟ್ಟಿದ ಲಕ್ಷ್ಮೀಯು ಸಮುದ್ರರಾಜ ನಾದ ವರುಣನ ಮಗಳ ಸ್ಥಾನದಲ್ಲಿರುವುದರಿಂದ. ಸರಸ್ವತೀ, ಭಾರತೀ ಮೊದಲಾದ ಇತರ ಹಿರಿಯ ಸ್ತ್ರೀಯರೆಲ್ಲರನ್ನು ಮಾತೃಸದೃಶರಾದ ಅತ್ತೆಯರಂತೆ ಕಂಡು ನಡೆದುಕೊಳ್ಳಬೇಕೆಂಬ ಲೋಕನೀತಿಯು ಸೂಚಕವೆಂದು ತಿಳಿಯಬೇಕು.

ರತ್ನದಾರತಿಗೆ ಸುತ್ತ ಮುತ್ತನೆ ತುಂಬಿ
ಮುತ್ತೈದೆಯರೆಲ್ಲ ಧವಳದ
ಮುತ್ತೈದೆಯರೆಲ್ಲ ಧವಳದ ಪದನ ಪಾ-
ಡುತ್ತಲೆತ್ತಿದರೆ ಸಿರಿವರಗೆ ॥ ಶೋಭಾನೆ ॥ ॥ ೯೩ ॥

ಅರ್ಥ:— ರತ್ನದಾರತಿಗೆ = ರತ್ನನಿರ್ಮಿತ ಆರತಿಗೆ (ಸೊಡ್ಲುಗಳಿಗೆ = ಚಿಕ್ಕ ಪ್ರಣತಿಗಳಿಗೆ) ಸುತ್ತ = ಸುತ್ತಲೂ, ಮುತ್ತನೆ ತುಂಬಿ = ಮುತ್ತನ್ನು ತುಂಬಿ, ಮುತ್ತೈದೆಯ-ರೆಲ್ಲ = ಸುಮಂಗಳೆಯರೆಲ್ಲರೂ, ಧವಳದ ಪದನ = ಶುದ್ಧ ಮೂರುತಿಯನ್ನು (ಚಿದಾ-ನಂದವಿಗ್ರಹನನ್ನು), ಪಾಡುತ್ತಲಿ = ಕೊಂಡಾಡುತ್ತ, ಸಿರಿವರಗೆ ಲಕ್ಷ್ಮೀಪತಿಗೆ, ಎತ್ತಿದರು = ಆರತಿಯನ್ನು ಬೆಳಗಿದರು.

ಬೊಮ್ಮ ತನ್ನರಸಿಕೂಡೆ ಬಂದೆರಗಿದ
ಉಮ್ಮೆಯರಸ ನಮಿಸಿದ
ಅಮ್ಮರರೆಲ್ಲರೂ ಬಗೆಬಗೆ ಉಡುಗೊರೆಗಳ
ರಮ್ಮೆಯರಸಗೆ ಸಲಿಸಿದರು ॥ ಶೋಭಾನೆ ॥ ॥ ೯೪ ॥

ಅರ್ಥ:— ಬೊಮ್ಮ = ಬ್ರಹ್ಮದೇವನು, ತನ್ನರಸಿಕೂಡೆ = ತನ್ನ ಪತ್ನಿಯಾದ ಸರಸ್ವತೀ ಸಹಿತನಾಗಿ, ಬಂದೆರಗಿದ = ಬಂದು ನಮಸ್ಕರಿಸಿದನು; ಉಮ್ಮೆಯರಸ = ಉಮಾಪತಿಯು (ಉಮೆಯೊಂದಿಗೆ), ನಮಿಸಿದ = ನಮಸ್ಕರಿಸಿದನು ; ಅಮ್ಮರರೆಲ್ಲರು = ದೇವತೆಗಳೆಲ್ಲರು, ಬಗೆಬಗೆ = ನಾನಾ ವಿಧವಾದ, ಉಡುಗೊರೆಗಳ = ಉಡುಗೊರೆ-ಗಳನ್ನು (ವಸ್ತ್ರಾಭರಣಾದಿ ಕಾಣಿಕೆಗಳನ್ನು), ರಮ್ಮೆಯರಸಗೆ = ರಮಾಪತಿಗೆ, ಸಲಿಸಿದರು = ಅರ್ಪಿಸಿ ನಮಸ್ಕರಿಸಿದರು.

ವಿಶೇಷಾಂಶ:— ದೇವಸ್ತ್ರೀಯರನ್ನೂ ದೇವತೆಗಳನ್ನೂ, ಹಿರಿಯರೆಂದು ಶ್ರೀಹರಿಯು ಗೌರವಿಸುವುದನ್ನು, ಲೋಕವಿಡಂಬನೆಮಾತ್ರವೆಂದು ಬಲ್ಲ ದೇವತೆ ಗಳೆಲ್ಲರೂ, ತಮಗೆ ಆನಂದವೀಯಲಿಕ್ಕಾಗಿಯೇ, ತನ್ನ ನಿತ್ಯಭಾರ್ಯಳಾದ ಲಕ್ಷ್ಮಿಯೊಂದಿಗೆ ಕಲ್ಯಾಣವನ್ನು ಕಲ್ಪಿಸುವ ''ಒಲಿದು ಭಕುತರಿಗಾಗಿ ಮದುವೆಗ್ಹವಣಿಸಿಕೊಂಡ ಸುಲಭದೇವರ ದೇವ ವಿಜಯವಿಟ್ಠಲರೇಯ'' (ಶ್ರೀವಿಜಯದಾಸರು) ಶ್ರೀಹರಿಯನ್ನು ವಂದಿಸಿ ಸ್ತುತಿಸುವುದು ಸಹಜವೇ ಆಗಿದೆ.

ಸತ್ಯಲೋಕದ ಬೊಮ್ಮ ಕೌಸ್ತುಭರತ್ನವನಿತ್ತ
ಮುಕ್ತಸುರರ ಮುದದಿಂದ

ಮುತ್ತಿನ ಕಂಠೀಸರ ಮುಖ್ಯಪ್ರಾಣನಿತ್ತ
ಮಸ್ತಕದ ಮಣಿಯ ಶಿವನಿತ್ತ॥ ಶೋಭಾನೆ ॥ ॥ ೯೫ ॥

ಅರ್ಥ:— ಸತ್ಯಲೋಕದ ಬೊಮ್ಮ = ಸತ್ಯಲೋಕದ (ಅಧಿಪತಿಯಾದ) ಬ್ರಹ್ಮ-ದೇವನು, ಕೌಸ್ತುಭರತ್ನವಿತ್ತ = ಕೌಸ್ತುಭರತ್ನವನ್ನು ಕೊಟ್ಟನು ; ಮುಕ್ತಸುರರ = ಮುಕ್ತರಾದ ದೇವತೆಗಳ, ಮುದದಿಂದ = ಆನಂದದಿಂದ, ಮುಖ್ಯಪ್ರಾಣನು = ವಾಯುದೇವನು, ಮುತ್ತಿನ ಕಂಠೀಸರ = ಮುತ್ತಿನ ಕಂಠಮಾಲೆಯನ್ನು, ಇತ್ತ = ಅರ್ಪಿಸಿದನು, ಶಿವನು = ಮಹೇಶ್ವರನು (ಕೈಲಾಸದ ಪತಿಯು) ಮಸ್ತಕದ ಮಣಿಯ = ಶಿರೋರತ್ನವನ್ನು (ಕಿರೀಟದಲ್ಲಿನ ಮಣಿಯನ್ನು), ಇತ್ತ = ಕೊಟ್ಟನು.

ವಿಶೇಷಾಂಶ:— ದೇವತೆಗಳು ಉಡುಗೊರೆಗಳನ್ನು ಕೊಟ್ಟರೆಂದು ಹಿಂದಿನ ನುಡಿಯಲ್ಲಿ ಹೇಳಿದ್ದರ ವಿವರಣೆಯಿದು. ಮುಕ್ತರಂತೆ ಆನಂದಪೂರ್ಣರು ವಾಯು-ದೇವರು – ಈ ಕಲ್ಯಾಣೋತ್ಸವದಲ್ಲಿ ಭಾಗಿಗಳಾಗಿ ಮೌಕ್ತಿಕಾನಂದವನ್ನೇ ಅನುಭವಿಸಿದ-ರೆನ್ನುತ್ತಾರೆ. ಶ್ರೀರಾಮನ ಸೂಚನೆಯಂತೆ, ಸೀತಾದೇವಿಯು, ಉಭಯರ ಪ್ರೇಮಸೂಚಕ ಮಣಿಮಂಜುಮಾಲೆಯನ್ನು ರಾಮಾವತಾರಕಾಲದಲ್ಲಿ ಹನುಮದವತಾರನಾದ ತನಗೆ ಕೊಟ್ಟಿದ್ದನ್ನು 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ಪುನಃ ಅರ್ಪಿಸಿದರೆನ್ನಬಹುದಲ್ಲವೇ !

ತನ್ನರಸಿ ಕೂಡೆ ಸವಿನುಡಿ ನುಡಿವಾಗ
ತನ್ನಲ್ಲಿದ್ದಗ್ನಿ ಕೆಡದಂತೆ
ವಹ್ನಿ ಪ್ರತಿಷ್ಠೆ ಮಾಡಿ ಅವನೊಳಗಿದ್ದ
ತನ್ನಾಹುತಿ ದಿಬ್ಬಣದ ಸುರರಿಗೆ ॥ ಶೋಭಾನೆ ॥ ॥ ೯೬ ॥

ಅರ್ಥ:— ತನ್ನರಸಿಕೂಡೆ = ತನ್ನ ಭಾರ್ಯೆಯೊಂದಿಗೆ, ಸವಿನುಡಿನುಡಿವಾಗ = ಸಲ್ಲಾಪಗಳನ್ನಾಡುವಾಗ (ಶ್ರೀಹರಿಯು ಜಲಮಧ್ಯವರುಣಾಲಯದಲ್ಲಿ ಲಕ್ಷ್ಮೀದೇವಿ-ಯೊಡನೆ ಸಲ್ಲಾಪದಲ್ಲಿರುವಾಗ), ತನ್ನಲ್ಲಿದ್ದ = ತನ್ನ ಮುಖದಲ್ಲಿರುವ, ಅಗ್ನಿ = ಅಗ್ನಿಯು, ಕೆಡದಂತೆ = ಶಾಂತವಾಗದಂತೆ (ತನ್ನ ಕಾರ್ಯವನ್ನು ನಿಲ್ಲಿಸದಂತೆ), ವಹ್ನಿ ಪ್ರತಿಷ್ಠೆಯ ಮಾಡಿ = ಅಗ್ನಿಯನ್ನು ಸುಸ್ಥಿರಗೊಳಿಸಿ, ತನ್ನಾಹುತಿ = ತನಗೆ ಅರ್ಪಿತವಾದ ಹವಿಸ್ಸು (ಭೋಜನಸಾಮಗ್ರಿ), ದಿಬ್ಬಣದ ಸುರರಿಗೆ = ವಿವಾಹೋತ್ಸವಕ್ಕಾಗಿ ನೆರೆದ ದೇವತೆಗಳಿಗೆ ಮುಟ್ಟಬೇಕು (ಎಂದು), ಅವನೊಳಗಿದ್ದ = (ಶ್ರೀಹರಿಯು) ಅಗ್ನಿಯೊಳಗಿದ್ದನು. (ಅಗ್ನಿಯು ಆರಿಹೋಗದಂತೆ ರಕ್ಷಿಸಿ, ಪಾಕವನ್ನು ಸಿದ್ಧಗೊಳಿಸಿದನು).

ವಿಶೇಷಾಂಶ:— ಶ್ರೀಹರಿಯ ಸಲ್ಲಾಪದ ನುಡಿಗಳು ಅಮೃತದಂತೆ ಶಾಂತಿಗೊಳಿ-ಸುವ ಸ್ವಭಾವವುಳ್ಳವು. ಈ ನುಡಿಗಳು ಹೊರಡುವ ಮುಖವನ್ನೇ ಅಗ್ನಿಯೂ

ಆಶ್ರಯಿಸಿರುವನು. '**ಮುಖಾದಿಂದ್ರಶ್ಚಾಗ್ನಿಶ್ಚ**' (ಪುರುಷಸೂಕ್ತ) - ಇಂದ್ರ - ಅಗ್ನಿ ಉಭಯರೂ ಶ್ರೀಹರಿಯ ಮುಖದಿಂದ ಹುಟ್ಟಿ ಮುಖವನ್ನೇ ಆಶ್ರಯಿಸಿದವರು. ವರುಣಾಲಯವು ಜಲಮಯವೆಂಬುದು ಪ್ರಸಿದ್ಧ. ಅಲ್ಲಿ ಅಗ್ನಿಯನ್ನು ಸ್ಥಿರವಾಗಿಟ್ಟು ದಿಬ್ಬಣದವರಿಗೆ (ವಿವಾಹಕ್ಕಾಗಿ ಬಂದ ಬಂಧು ತಂಡದವರಿಗೆ) ಪಾಕಸಿದ್ಧವಾಗಲು ಅವಕಾಶಮಾಡಿಕೊಟ್ಟ ಶ್ರೀಹರಿಮಹಿಮೆಯು ವರ್ಣಿತವಾಗಿದೆ.

ಕೊಬ್ಬಿದ ಖಳರೋಡಿಸಿ ಅಮೃತಾನ್ನ
ಉಬ್ಬಿದ ಹರುಷದಿ ಉಣಿಸಿದ
ಉಬ್ಬಿದ ಹರುಷದಿ ಉಣಿಸಬೇಕೆಂದು ಸಿಂಧು
ಸರ್ಬರಿಗೆಡೆಯ ಮಾಡಿಸಿದ ॥ ಶೋಭಾನೆ ॥ ॥ ೯೭ ॥

ಅರ್ಥ:— ಕೊಬ್ಬಿದ ಖಳರ = ಮದಾಂಧರಾದ ದೈತ್ಯರನ್ನು, ಓಡಿಸಿ = ದೂರ (ಅಮೃತದಿಂದ ದೂರ)ವಿಟ್ಟು, ಉಬ್ಬಿದ ಹರುಷದಿ = ಹೆಚ್ಚು ಸಂತೋಷದಿಂದ ಅಮೃತ ಸದೃಶ ಭೋಜನವನ್ನು ಮಾಡಿಸಿದನು. (ಬೇಗನೆ ದೇವತೆಗಳಿಗೆ ಅಮೃತಪಾನಕ್ಕೆ ಅವಕಾಶ ವಾಗಲೆಂದು), ಉಬ್ಬಿದ ಹರುಷದಿ = ಉತ್ಸಾಹಪೂರ್ಣ ಹರ್ಷದಿಂದ, ಉಣಿಸಬೇಕೆಂದು = ಭೋಜನ ಮಾಡಿಸಬೇಕೆಂದು (ಮದುವೆಯ ಊಟವನ್ನು ಮುಗಿಸಬೇಕೆಂದು), ಸಿಂಧು = ಸಮುದ್ರರಾಜನು (ವರುಣನು), ಸರ್ಬರಿಗೆ = ನೆರೆದ ಸರ್ವರಿಗೂ, ಎಡೆಯ ಮಾಡಿಸಿದ = ಎಲೆಗಳನ್ನು ಹಾಕಿಸಿ ಬಡಿಸಿದನು.

ವಿಶೇಷಾಂಶ:— ಕ್ಷೀರಸಮುದ್ರದ ಮಥನಕಾಲದಲ್ಲಿ ಅವತರಿಸಿದ ಲಕ್ಷ್ಮೀ-ದೇವಿಯು ಶ್ರೀಹರಿಯನ್ನು ವರಿಸಿ, ಪತಿಯನ್ನಾಗಿ ಹೊಂದಿದ ನಂತರವೇ ಅಮೃತಕಲಶ-ಹಸ್ತನಾಗಿ ಧನ್ವಂತರಿಯು ಉದ್ಭವಿಸಿದನು. ವರುಣದೇವನು ಮಹಾವೈಭವದಿಂದ ವಿವಾಹೋತ್ಸವವನ್ನು ನಡೆಸಿ, ಕೇವಲ ನಾಲ್ಕು ದಿನಗಳಲ್ಲಿ ಮುಗಿಸಿದನು - ದೇವತೆಗಳಿಗೆ ಅಮೃತಲಾಭವು ತಡವಾಗದಿರಲೆಂದು. ಕವಿಶ್ರೇಷ್ಠರಾದ ಶ್ರೀವಾದಿರಾಜರ ಉತ್ಪ್ರೇಕ್ಷೆಯು ಬಹುರಮ್ಯವಾಗಿದೆ.

ಮಾವನ ಮನೆಯಲ್ಲಿ ದೇವರಿಗೌತಣವ
ದಾನವರು ಕೆಡಿಸದೆ ಬಿಡರೆಂದು
ದಾನವರು ಕೆಡಿಸದೆ ಬಿಡರೆಂದು ಶ್ರೀಕೃಷ್ಣ-
ದೇವ ಸ್ತ್ರೀವೇಷವ ಧರಿಸಿದ ॥ ಶೋಭಾನೆ ॥ ॥ ೯೮ ॥

ಅರ್ಥ:— ಮಾವನ ಮನೆಯಲ್ಲಿ = (ತನ್ನ) ಮಾವನಾದ ವರುಣನ ಮನೆಯಲ್ಲಿ, ದೇವರಿಗೌತಣವ = ದೇವತೆಗಳಿಗಾಗುವ ಔತಣವನ್ನು, ದಾನವರು = ದೈತ್ಯರಾದವರು, ಕೆಡಿಸದೆ, ಭಗ್ನಗೊಳಿಸದೆ (ಅನಾಹೂತರಾಗಿಯೂ ನುಗ್ಗಿ ಬಂದು ದಾಳಿಮಾಡಿ ಕೆಡಿಸದೆ), ಬಿಡರೆಂದು = ಬಿಡುವುದಿಲ್ಲವೆಂದು, ಶ್ರೀಕೃಷ್ಣದೇವ = ಶ್ರೀಹರಿಯು, ಸ್ತ್ರೀವೇಷವ ಧರಿಸಿದ = ಹೆಣ್ಣುರೂಪವನ್ನು ಧರಿಸಿದನು. (ಹೊಂದಿದನು).

ತನ್ನ ಸೌಂದರ್ಯದಿಂದುನ್ನತಮಯ ಲಾ-
ವಣ್ಯದಿಂದ ಮೆರೆವ ನಿಜಪತಿಯ
ಹೆಣ್ಣುರೂಪವ ಕಂಡು ಕನ್ಯೆ ಮಹಲಕ್ಷುಮಿ ಇವ-
ಗನ್ಯರೇಕೆಂದು ಬೆರಗಾದಳು ॥ ಶೋಭಾನೆ ॥ ॥ ೯೯ ॥

ಅರ್ಥ:— ಕನ್ಯೆಮಹಲಕ್ಷುಮಿ = ವಧುವಾದ ಶ್ರೀಲಕ್ಷ್ಮೀದೇವಿಯು, ತನ್ನ ಸೌಂದರ್ಯದಿಂದ = ತನ್ನ ಸೌಂದರ್ಯಕ್ಕಿಂತಲೂ, ಉನ್ನತಮಯ ಲಾವಣ್ಯದಿಂದ ಅತ್ಯುತ್ಕೃಷ್ಟವಾದ, ಸೌಂದರ್ಯದಿಂದ, ಮೆರೆವ = ಶೋಭಿಸುವ, ನಿಜಪತಿಯ = ತನ್ನ ಪತಿಯ, ಹೆಣ್ಣು ರೂಪವ ಕಂಡು = ಸ್ತ್ರೀರೂಪವನ್ನು ನೋಡಿ, ಇವಗೆ = ಈತನಿಗೆ, ಅನ್ಯರೇಕೆಂದು = ನಾನೇ ಮೊದಲಾದ ಅನ್ಯ ಸುಂದರಸ್ತ್ರೀಯರಿಂದೇನು ಪ್ರಯೋಜನ ವೆಂಬುದಾಗಿ (ಈತನನ್ನು ವಶಮಾಡಿಕೊಳ್ಳುವ ಸೌಂದರ್ಯ ಯಾವಳಿಗೂ ಇಲ್ಲ, ಎಂದು), ಬೆರಗಾದಳು = ಆಶ್ಚರ್ಯಚಕಿತಳಾದಳು.

ಲಾವಣ್ಯಮಯವಾದ ಹರಿಯ ಸ್ತ್ರೀವೇಷಕ್ಕೆ
ಭಾವಕಿಯರೆಲ್ಲ ಮರುಳಾಗೆ
ಮಾವರ ಸುಧೆಯ ಕ್ರಮದಿಂದ ಬಡಿಸಿ ತನ್ನ
ಸೇವಕಸುರರಿಗುಣಿಸಿದ ॥ ಶೋಭಾನೆ ॥ ॥ ೧೦೦ ॥

ಅರ್ಥ:— ಲಾವಣ್ಯಮಯವಾದ = ಶೃಂಗಾರಮೂರ್ತಿಯಾದ, ಹರಿಯ = ಶ್ರೀಹರಿಯ, ಸ್ತ್ರೀವೇಷಕ್ಕೆ = ಸ್ತ್ರೀರೂಪಕ್ಕೆ, ಭಾವಕಿಯರೆಲ್ಲ = ವಿಲಾಸಿನಿಯರೆಲ್ಲರೂ ಹಾವ ಭಾವಗಳಿಂದ ಶೋಭಿಸುವ ಸಕಲ ಪ್ರಮದೆಯರು, ಮರುಳಾಗೆ = ಮುಗ್ಧರಾಗುತ್ತಿರಲು, ತನ್ನ ಸೇವಕಸುರರಿಗೆ = (ಶ್ರೀಹರಿಯು) ತನ್ನ ಭೃತ್ಯರಾದ ದೇವತೆಗಳಿಗೆ, ಮಾವರ ಸುಧೆಯ = ವರುಣನ ಸುಧೆಯನ್ನು ತನ್ನ ಮಾವನು ಔತಣಕ್ಕಾಗಿ ಸಿದ್ಧಗೊಳಿಸಿದ್ದ ಅಮೃತದಂತೆ ರುಚಿಕರವಾದ ಭೋಜನಪದಾರ್ಥಗಳನ್ನು ಕ್ರಮದಿಂದ ಬಡಿಸಿ = (ಸ್ತ್ರೀಯರೊಂದಿಗೆ ತಾನೂ ಬೆರೆತು) ಬಡಿಸಿ, ಉಣಿಸಿದ = ಊಟಮಾಡಿಸಿದನು.

ನಾಗನ ಮೇಲೆ ತಾ ಮಲಗಿದ್ದಾಗ
ಆಗಲೆ ಜಗವ ಜತನದಿ
ಆಗಲೆ ಜಗವ ಜತನದಿ ಧರಿಸೆಂದು
ನಾಗಬಲಿಯ ನಡಿಸಿದರು ॥ ಶೋಭಾನೆ ॥ ॥ ೧೦೧ ॥

ಅರ್ಥ:— ನಾಗನ ಮೇಲೆ = ಶೇಷದೇವನ ಮೇಲೆ, ತಾ ಮಲಗಿದ್ದಾಗ = ಮಲಗಿರುವಾಗ, ಆಗಲೆ = ಆ ಕಾಲದಲ್ಲಿ ಸಹ (ಹಾಗೆ ಯೋಗನಿದ್ರೆಯಲ್ಲಿರುವಾಗ ಸಹ), ಜಗವ = ಜಗತ್ತನ್ನು, ಜತನದಿ = ಜೋಪಾನವಾಗಿ (ಎಚ್ಚರಿಕೆಯಿಂದ), ಧರಿಸೆಂದು = ರಕ್ಷಿಸೆಂದು, ನಾಗಬಲಿಯ = '**ನಾಕಬಲಿಯನ್ನು**', ನಡೆಸಿದರು = ಮಾಡಿಸಿದರು.

ವಿಶೇಷಾಂಶ:— ಶ್ರೇಷ್ಠರಾದವರಿಗೆ (ಅಂದರೆ ದೇವತೆಗಳಿಗೆ) ಮಾಡುವ ಪೂಜೆಯು (ನಾಗ = ಶ್ರೇಷ್ಠ ಬಲಿ = ಪೂಜೆ) ನಾಗಶಯನನಾದ ಶ್ರೀಹರಿಗೇ ಮುಖ್ಯ ಪೂಜೆ. ಅದನ್ನೇ "**ನಾಕಬಲಿ**" ನಾಕ = ಸ್ವರ್ಗದ, ಎಂದರೆ ಸ್ವರ್ಗದಲ್ಲಿನ ದೇವತೆಗಳ, ಬಲಿ = ಪೂಜೆ, ಆದ್ದರಿಂದ '**ನಾಕಬಲಿ**' ಎಂತಲೂ ಹೇಳುತ್ತಾರೆ. ನೂತನದಂಪತಿಗಳಿಗೆ ಸದಾ ರಕ್ಷಕನಾಗಿರಲು ಹರಿಪ್ರಾರ್ಥನೆ ಅದು.

ಕ್ಷುಧೆಯ ಕಳೆವ ನವರತ್ನದ ಮಾಲೆಯ
ಮುದದಿಂದ ವಾರಿಧಿ ವಿಧಿಗಿತ್ತ
ಚದುರ ವರವ ವಾಯುದೇವರಿಗಿತ್ತ
ವಿಧುವಿನ ಕಲೆಯ ಶಿವಗಿತ್ತ ॥ ಶೋಭಾನೆ ॥ ॥ ೧೦೨ ॥

ಅರ್ಥ:— ವಾರಿಧಿ = ವರುಣನು, ಕ್ಷುಧೆಯ ಕಳೆವ = ಹಸಿವನ್ನು ಪರಿಹರಿಸುವ, ನವರತ್ನದ ಮಾಲೆಯ = ನವರತ್ನಗಳಿಂದ ರಚಿತವಾದ ಹಾರವನ್ನು, ವಿಧಿಗಿತ್ತ = ಬ್ರಹ್ಮದೇವನಿಗೆ ಕೊಟ್ಟನು ; ಚದುರ = ವಿವೇಕಿಯಾದ ವರುಣನು, ವರವ = ವರವನ್ನು, ವಾಯುದೇವರಿಗಿತ್ತ = ವಾಯುದೇವನಿಗೆ ಕೊಟ್ಟನು ; ಶಿವಗೆ = ಶಿವನಿಗೆ, ವಿಧುವಿನ ಕಲೆಯ = ಚಂದ್ರನ ಏಕಾಂಶವನ್ನು, ಇತ್ತ = ಕೊಟ್ಟನು.

ವಿಶೇಷಾಂಶ:— (೧) ವಿವಾಹೋತ್ಸವಕ್ಕಾಗಿ ನೆರೆದ ಬಂಧುವರ್ಗದವರಿಗೆ ಯಥೋಚಿತವಾಗಿ ಉಡುಗೊರೆಗಳನ್ನಿತ್ತು ಸತ್ಕರಿಸಬೇಕೆಂಬ ಲೋಕನೀತಿಯನ್ನು ಬೆಂಬಲಿಸುತ್ತ ವರುಣದೇವನು, ಬ್ರಹ್ಮಾದಿಗಳನ್ನು ಸತ್ಕರಿಸಿದ ಪ್ರಕಾರವು ವಿವರಿಸಲಾಗಿದೆ.

(೨) ವರುಣನು — ರತ್ನಾಕರನು — ಮಗಳ ವಿವಾಹಮಹೋತ್ಸವ - ಅಳಿಯ ಶ್ರೀಹರಿ, ಕೇಳುವುದೇನು ? ಅನರ್ಘ್ಯ ವಸ್ತುಗಳನ್ನು ಉಡುಗೊರೆ ಮಾಡಿದ್ದಾನೆ.

ಬ್ರಹ್ಮದೇವನಿಗೆ ನವರತ್ನಮಾಲೆಯನ್ನು ಇತ್ತ. ನವರತ್ನ ರಚಿತಮಾತ್ರವಲ್ಲ — ಹಸಿವೆಯನ್ನು ಪರಿಹರಿಸುವ ಅಸಾಧಾರಣಮಹಿಮೆಯುಳ್ಳದ್ದು. ಕಾಲಾಂತರದಲ್ಲಿ ಈ ಮಾಲೆಯನ್ನು ತನ್ನನ್ನು ಕ್ಷುತ್ಪರಿಹಾರಕ್ಕಾಗಿ ಪ್ರಾರ್ಥಿಸಿ ತಪಸ್ಸು ಮಾಡಿದ ಶ್ವೇತರಾಜನಿಗೆ ಕೊಟ್ಟು ವರುಣಪುತ್ರನಾದ ಅಗಸ್ತ್ಯಋಷಿಗಳ ಕೈಯಿಂದ ಶ್ರೀರಾಮನಿಗೆ ಕೊಡಿಸಿ, ಕ್ಷುತ್ಪೀಡೆಯಿಂದ ಮುಕ್ತನಾಗಬೇಕೆಂದು ಹೇಳಿದನು. ಈ ಶ್ವೇತರಾಜನು ತನ್ನ ದುಷ್ಕರ್ಮದಿಂದ, ತನ್ನ ಶರೀರದ ಮಾಂಸವನ್ನು ತಾನೇ ತಿನ್ನುವಂಥ ಹಸಿವೆಯಿಂದ ಪೀಡಿತನಾಗಿದ್ದನು. ವರುಣನಿಂದ ಬಂದ ಈ ಮಾಲೆಯನ್ನು ಅವನ ಪುತ್ರನಾದ ಅಗಸ್ತ್ಯನ ದ್ವಾರಾ, ವರುಣಾದಿ ಸರ್ವರ ಸಕಲ ಸಂಪತ್ತಿನ ಮುಖ್ಯಸ್ವಾಮಿಯಾದ ಶ್ರೀಹರಿಯಲ್ಲಿಯೇ, ಬ್ರಹ್ಮದೇವನು, ಅರ್ಪಿಸಿದನು.

(೩) ವಾಯುದೇವನಿಗೆ ವರವನ್ನಿತ್ತನೆಂದು ಹೇಳಿರುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ದೇವಶ್ರೇಷ್ಠನಾದ ವಾಯುದೇವನು, ತನ್ನ ಅವತಾರಗಳಲ್ಲಿ ಪ್ರಕಟಿಸುವ (ಇಚ್ಛಾಮರಣವೇ ಮೊದಲಾದ) ಮಹಿಮೆಗಳು, ಇಂದ್ರವರುಣಾದಿ-ದೇವತೆಗಳಿಂದ ಕೊಡಲ್ಪಟ್ಟ ವರಬಲದಿಂದಾದವುಗಳೆಂಬ ಮೋಹವನ್ನು ಅಯೋಗ್ಯರಲ್ಲಿ ಉಂಟುಮಾಡಲಿಕ್ಕಾಗಿ, ಅವರಿಂದ ವರಗಳನ್ನು ಸ್ವೀಕರಿಸುತ್ತಾನೆ - ಯಾರ ವರಗಳಿಂದಲೂ ವಾಯುದೇವನಿಗೆ ಯಾವ ಬಲವೂ ಬರಬೇಕಾದುದಿಲ್ಲ ; ಸ್ವಯಂ ಬಲಪೂರ್ಣನಾಗಿ-ದ್ದಾನೆ. ಹೀಗೆಯೇ ಶಿವನು, (ಅವರನಾದ) ವರುಣನಿಂದ ದತ್ತವಾದ್ದರಿಂದ, ಚಂದ್ರನನ್ನು (ಪೂರ್ಣಬಿಂಬವನ್ನಲ್ಲ- ಕಳೆಯನ್ನು ಮಾತ್ರ) ಧರಿಸಿರುವನೆಂದು ಅಜ್ಞರನ್ನು ಮೋಹಿಸಲಿ-ಕ್ಕಾಗಿ, ಸ್ವೀಕರಿಸಿದನೆಂದು ತಿಳಿಯಬೇಕು.

ಶಕ್ರಮೊದಲಾದ ದಿಕ್ಪಾಲಕರಿಗೆ
ಸೊಕ್ಕಿದ ಚೌದಂತಗಜಂಗಳ
ಉಕ್ಕಿದ ಮನದಿಂದ ಕೊಟ್ಟವರುಣ ಮದು-
ಮಕ್ಕಳಾಯುಷ್ಯವ ಬೆಳೆಸೆಂದ ॥ ಶೋಭಾನೆ ॥ ॥ ೧೦೩ ॥

ಅರ್ಥ:— ಶಕ್ರಮೊದಲಾದ ದಿಕ್ಪಾಲಕರಿಗೆ = ಇಂದ್ರಾದಿದಿಕ್ಪಾಲಕರಿಗೆ ಸೊಕ್ಕಿದ ಚೌದಂತಗಜಂಗಳ = ನಾಲ್ಕು ದಂತಗಳುಳ್ಳ ಮದಗಜಗಳನ್ನು, ಉಕ್ಕಿದ ಮನದಿಂದ = ಉತ್ಸಾಹದಿಂದ ಉಬ್ಬಿದ ಮನಸ್ಸುಳ್ಳವನಾಗಿ, ವರುಣ = ವರುಣದೇವನು, ಕೊಟ್ಟ = ಕೊಟ್ಟನು ; ಮದುಮಕ್ಕಳ = ವಧೂವರರ, ಆಯುಷ್ಯವ = ಆಯುಷ್ಯವನ್ನು, ಬೆಳೆಸೆಂದ = ವೃದ್ಧಿಗೊಳಿಸಿರೆಂದು ಕೇಳಿಕೊಂಡ (ದೀರ್ಘಾಯುಷ್ಮಂತರಾಗಿ ಬಾಳಿರೆಂದು ಆಶೀರ್ವದಿ-ಸಲು ಒಬ್ಬೊಬ್ಬರನ್ನೂ ಕೇಳಿಕೊಂಡನು).

ವಿಶೇಷಾಂಶ:— ಇಂದ್ರ, ಅಗ್ನಿ, ಯಮ, ನಿರ್‌ಋತಿ, ವಾಯು, ಕುಬೇರ, ಈಶಾನ, ಇವರು ಕ್ರಮವಾಗಿ, ಪೂರ್ವದಿಂದ ಈಶಾನ್ಯದವರೆಗಿನ ದಿಕ್ಕುಗಳಿಗೆ ಅಧಿಪತಿಗಳು ; ಸ್ವಯಂ ವರುಣನು ಪಶ್ಚಿಮ ದಿಕ್ಕಿನ ಅಧಿಪತಿಯು. ನಾಲ್ಕು ದಂತಗಳುಳ್ಳ ಗಜಗಳು ಅಸದೃಶವಾದ ದಿಗ್ಗಜಗಳು.

ಮತ್ತೆ ದೇವೇಂದ್ರಗೆ ಪಾರಿಜಾತವನಿತ್ತ
ಚಿತ್ತವ ಸೆಳೆವಪ್ಸರಸ್ತ್ರೀಯರ
ಹತ್ತು ಸಾವಿರ ಕೊಟ್ಟ ವರುಣದೇವ ಹರಿ-
ಭಕ್ತಿಯ ಮನದಿ ಬೆಳೆಸೆಂದ ॥ ಶೋಭಾನೆ ॥ ॥ ೧೦೪ ॥

ಅರ್ಥ:— ಮತ್ತೆ = (ಗಜವನ್ನು ಕೊಟ್ಟಿದ್ದಲ್ಲದೆ) ಪುನಃ, ದೇವೇಂದ್ರಗೆ = ದೇವೇಂದ್ರನಿಗೆ, ಪಾರಿಜಾತವನ್ನಿತ್ತ = ಪಾರಿಜಾತವೃಕ್ಷವನ್ನು ಕೊಟ್ಟನು ; (ಇಷ್ಟು ಮಾತ್ರ-ವಲ್ಲ), ಚಿತ್ತವ ಸೆಳೆವ = (ತಮ್ಮ ಸೌಂದರ್ಯದಿಂದ ಮನಸ್ಸನ್ನು ಆಕರ್ಷಿಸುವ) ಮನೋ-ಹರರಾದ, ಹತ್ತುಸಾವಿರ ಅಪ್ಸರಸ್ತ್ರೀಯರ = ಹತ್ತುಸಾವಿರ ಅಪ್ಸರೆಯರನ್ನು, ಕೊಟ್ಟ = ಇತ್ತವನಾದ, ವರುಣದೇವ = ವರುಣನು, ಮನದಲ್ಲಿ = ತನ್ನ ಮನಸ್ಸಿನಲ್ಲಿ, ಹರಿಭಕ್ತಿಯ = ಹರಿಭಕ್ತಿಯನ್ನು, ಬೆಳೆಸೆಂದ = ವೃದ್ಧಿಗೊಳಿಸೆಂದು ಪ್ರಾರ್ಥಿಸಿದನು.

ಪೊಳೆವ ನವರತ್ನದ ರಾಶಿಯ ತೆಗೆತೆಗೆದು
ಉಳಿದಮರರಿಗೆ ಸಲಿಸಿದ
ಉಳಿದಮರರಿಗೆ ಸಲಿಸಿದ ಸಮುದ್ರ
ಕಳುಹಿದನವರವರ ಮನೆಗಳಿಗೆ ॥ ಶೋಭಾನೆ ॥ ॥ ೧೦೫ ॥

ಅರ್ಥ:— ಸಮುದ್ರ = ವರುಣನು, ಪೊಳೆವ = ಹೊಳೆಯುವ, ನವರತ್ನದ ರಾಶಿಯ = ನವರತ್ನಗಳ ರಾಶಿಯನ್ನು, ತೆಗೆತೆಗೆದು = ಮತ್ತೆ ಮತ್ತೆ ತೆಗೆದು, ಉಳಿದ ಅಮರರಿಗೆ = ಇತರ ದೇವತೆಗಳಿಗೆಲ್ಲ, ಸಲಿಸಿದ = ಯಥಾಯೋಗ್ಯವಾಗಿಟ್ಟು ಸತ್ಕರಿಸಿದನು ; ಅವುಗಳನ್ನೆಲ್ಲ ಅವರವರ ಮನೆಗಳಿಗೆ, ಕಳುಹಿಸಿದನು = ತನ್ನ ಸೇವಕರ ಮೂಲಕ ಕಳಿಸಿಕೊಟ್ಟನು (ಹೀಗೆ ಮರ್ಯಾದೆಮಾಡಿ) ಬೀಳ್ಕೊಟ್ಟನು.

ಉನ್ನತ ನವರತ್ನಮಯವಾದ ಅರಮನೆಯ
ಚನ್ನೇಮಗಳಿಂದ ವಿರಚಿಸಿ
ತನ್ನ ಅಳಿಯಗೆ ಸ್ಥಿರವಾಗಿ ಮಾಡಿಕೊಟ್ಟು
ಇನ್ನೊಂದು ಕಡೆಯಡಿ ಇಡದಂತೆ ॥ ಶೋಭಾನೆ ॥ ॥ ೧೦೬ ॥

ಅರ್ಥ:— ಉನ್ನತ = ಉತ್ಕೃಷ್ಟವಾದ, ನವರತ್ನಮಯವಾದ = ನವರತ್ನಗಳಿಂದ ನಿರ್ಮಿತವಾದ, ಅರಮನೆಯ = ಅರಮನೆಯನ್ನು (ರಾಜಗೃಹವನ್ನು), ಚನ್ನೇಮಗಳಿಂದ = ಬಹು ಎಚ್ಚರಿಕೆವಹಿಸಿದ ನಿಯಮಗಳನ್ನನುಸರಿಸಿ, ವಿರಚಿಸಿ = ಕಟ್ಟಿಸಿ, ತನ್ನ ಅಳಿಯಗೆ = ಅಳಿಯನಾದ ಲಕ್ಷ್ಮೀಪತಿಗೆ, ಸ್ಥಿರವಾಗಿ ಮಾಡಿಕೊಟ್ಟು = ಅಲ್ಲಿಯೇ ನೆಲೆಸಲು ಅವಕಾಶ ಮಾಡಿಕೊಟ್ಟು, ಇನ್ನೊಂದುಕಡೆ = ಬೇರೆ ಸ್ಥಳಕ್ಕೆ, ಅಡಿ ಇಡದಂತೆ = ಹೆಜ್ಜೆ ಇಡದಂತೆ (ಹೊಂದದಂತೆ) ಏರ್ಪಡಿಸಿದನು. (ಅಳಿಯನನ್ನು ತನ್ನಲ್ಲಿಯೇ ಸ್ಥಿರವಾಗಿ ಉಳಿಸಿಕೊಳ್ಳುವ ಆದರವನ್ನು ಸೂಚಿಸುತ್ತದೆ.)

ಹಯವದನ ತನ್ನ ಪ್ರಿಯಳಾದ ಲಕುಮಿಗೆ
ಜಯವಿತ್ತ ಕ್ಷೀರಾಂಬುಧಿಯಲ್ಲಿ
ಜಯವಿತ್ತ ಕ್ಷೀರಾಂಬುಧಿಯಲ್ಲಿ ಶ್ರೀಕೃಷ್ಣ
ದಯದಿ ನಮ್ಮೆಲ್ಲರ ಸಲಹಲಿ ॥ ಶೋಭಾನೆ ॥ ॥ ೧೦೭ ॥

ಅರ್ಥ:— ಹಯವದನ = (ತನ್ನ ಶ್ರೀಹಯಗ್ರೀವರೂಪಕ್ಕೆ ಅಭಿನ್ನನಾದ) ಶ್ರೀಹರಿಯು, ಕ್ಷೀರಾಂಬುಧಿಯಲ್ಲಿ = ಕ್ಷೀರಸಮುದ್ರದಲ್ಲಿ, ತನ್ನ ಪ್ರಿಯಳಾದ = ತನ್ನ ಪ್ರೀತಿ-ಪಾತ್ರಳಾದ (ನಿತ್ಯಭಾರ್ಯಳಾದ), ಲಕುಮಿಗೆ = ಲಕ್ಷ್ಮೀದೇವಿಗೆ, ಜಯವಿತ್ತ = ಜಯ-ವನ್ನು ಕೊಟ್ಟನು ; ಕ್ಷೀರಾಂಬುಧಿಯಲ್ಲಿ ಜಯವಿತ್ತ = ಹೀಗೆ ಕ್ಷೀರಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಗೆ, ತನ್ನನ್ನೇ ಪತಿಯನ್ನಾಗಿ ಪಡೆಯಬೇಕೆಂಬ ಆಕೆಯ ಸಂಕಲ್ಪಕ್ಕೆ ಜಯವಿತ್ತ (ಆಕಾಂಕ್ಷೆಯನ್ನು ಪೂರೈಸಿ) ಕ್ಷೀರಸಮುದ್ರದಲ್ಲಿ (ವರುಣಾಲಯದಲ್ಲಿ) ವಿವಾಹಮಾಡಿ-ಕೊಂಡ, ಶ್ರೀಕೃಷ್ಣ = ಶ್ರೀಕೃಷ್ಣನು, ದಯದಿ = ಕೃಪೆದೋರಿ, ನಮ್ಮೆಲ್ಲರ = ನಮ್ಮೆಲ್ಲರನ್ನು (ಭಕ್ತವರ್ಗವನ್ನು), ಸಲಹಲಿ = ರಕ್ಷಿಸಲಿ.

ಈ ಪದನ ಮಾಡಿದ ವಾದಿರಾಜಮುನಿಗೆ
ಶ್ರೀಪತಿಯಾದ ಹಯವದನ
ತಾಪವ ಕಳೆದು ತನ್ನ ಶ್ರೀಚರಣ ಸ-
ಮೀಪದಲ್ಲಿಟ್ಟು ಸಲಹಲಿ ॥ ಶೋಭಾನೆ ॥ ॥ ೧೦೮ ॥

ಅರ್ಥ:— ಈ ಪದನ = ಈ ಲಕ್ಷ್ಮೀಶೋಭನಹಾಡನ್ನು, ಮಾಡಿದ = ರಚಿಸಿದ, ವಾದಿರಾಜಮುನಿಗೆ = ವಾದಿರಾಜನೆಂಬ ಈ ಯತಿಗೆ, ಶ್ರೀಪತಿಯಾದ = ಲಕ್ಷ್ಮೀಪತಿ-ಯಾದ ಶ್ರೀಹರಿಯು (ತನ್ನ ಉಪಾಸ್ಯಮೂರ್ತಿಯಾದ ಶ್ರೀಹಯಗ್ರೀವ ಸ್ವಾಮಿಯು), ತಾಪವ ಕಳೆದು = (ಭಕ್ತರ) ಮನೋದ್ವೇಗವನ್ನು ಪರಿಹರಿಸಿದ, ತನ್ನ ಶ್ರೀಚರಣದ = ತನ್ನ ಪರಮಮಂಗಳ ಪಾದಪದ್ಮಂಗಳ, ಸಮೀಪದಲ್ಲಿಟ್ಟು = ಹತ್ತಿರದಲ್ಲಿ ಸ್ಥಾಪಿಸಿ, (ನಿರಂತರ

ಸ್ಮರಣೆಯನ್ನಿತ್ತು ಅಥವಾ ಹೃದಯದಲ್ಲಿ ಸದಾ ಪ್ರಕಾಶಿಸುವವನಾಗಿ ಸಲಹಲಿ = ರಕ್ಷಿಸಲಿ (ಅನುಗ್ರಹಿಸಲಿ).

ಇಂತು ಸ್ವಪ್ನದಿ ಕೊಂಡಾಡಿಸಿಕೊಂಡ ಲಕ್ಷ್ಮೀ-
ಕಾಂತನ ಕಂದನೆನಿಸುವ
ಸಂತರ ಮೆಚ್ಚಿನ ವಾದಿರಾಜೇಂದ್ರಮುನಿ
ಪಂಥದಿ ಪೇಳಿದ ಪದವಿದು ॥ ಶೋಭಾನೆ ॥ ॥ ೧೦೯ ॥

ಅರ್ಥ:— ಇಂತು = ಹೀಗೆ, ಸ್ವಪ್ನದಿ = ಸ್ವಪ್ನದಲ್ಲಿ, ಕೊಂಡಾಡಿಸಿಕೊಂಡ = ಸ್ತುತಿಸಿಕೊಳ್ಳಲ್ಪಟ್ಟ, ಲಕ್ಷ್ಮೀಕಾಂತನ = ಶ್ರೀಪತಿಯ, ಕಂದನೆನಿಸುವ = ಪುತ್ರನಾದ (ಏಕಾಂತ ಭಕ್ತನಾದ), ಸಂತರ = ಸಜ್ಜನರ, ಮೆಚ್ಚಿನ = ಪ್ರೀತಪಾತ್ರನಾದ (ಸಜ್ಜನರು ಭಕ್ತಿಪೂರ್ವಕ ಸೇವಿಸುವ), ವಾದಿರಾಜೇಂದ್ರಮುನಿ = ಶ್ರೀವಾದಿರಾಜ ಯತಿಶ್ರೇಷ್ಠನು, ಪಂಥದಿ = ಪ್ರತಿಜ್ಞಾಪೂರ್ವಕ, ಪೇಳಿದ ಪದವಿದು = ನುಡಿದ ಹಾಡು, ಇದು.

ವಿಶೇಷಾಂಶ:— (೧) ಇಲ್ಲಿ ಹೇಳಲಾಗಿರುವ ಶ್ರೀಲಕ್ಷ್ಮೀದೇವಿಯ ಬ್ರಹ್ಮಾದಿ ವಂದ್ಯತ್ವಮೊದಲಾದ ಮಹಿಮೆಗಳೂ, ಆಕೆಯನ್ನೂ ಆಳುವ ಪ್ರಭುವಾದ ಶ್ರೀಹರಿಯ ಸರ್ವೋತ್ತಮತ್ವಾದಿ ಮಹಿಮೆಗಳೂ, ಉಭಯರ ಪರಸ್ಪರ ಪ್ರೇಮಾತಿಶಯಗಳೂ, ಜಗತ್ಕಲ್ಯಾಣಕರಗಳಾದ ಸತ್ಯಪ್ರಮೇಯಗಳೆಂದು ಪ್ರತಿಜ್ಞೆಮಾಡಿ ಹೇಳಿದ್ದೇವೆ - ಈ **ಶ್ರೀರಮಾನಾರಾಯಣರ ಕಲ್ಯಾಣೋತ್ಸವಚರಿತ್ರೆಯನ್ನು** ಆದರದಿಂದ ಪಠಿಸಿ, ಸಜ್ಜನಲೋಕವು ಸಕಲಸನ್ಮಂಗಳವನ್ನು ಪಡೆಯಲಿ ಎನ್ನುತ್ತಾರೆ ಗ್ರಂಥಕರ್ತರು.

ಶ್ರೀಯರಸಹಯವದನಪ್ರಿಯವಾದಿರಾಜ-
ರಾಯ ರಚಿಸಿದ ಪದವಿದು
ಆಯುಷ್ಯ ಭವಿಷ್ಯ ದಿನದಿನಕೆ ಹೆಚ್ಚುವುದು ನಿ-
ರಾಯಾಸದಿಂದ ಸುಖಿಪರು ॥ ಶೋಭಾನೆ ॥ ॥ ೧೧೦ ॥

ಅರ್ಥ:— ಶ್ರೀಯರಸಹಯವದನಪ್ರಿಯವಾದಿರಾಜರಾಯ = ಲಕ್ಷ್ಮೀಪತಿ-ಯಾದ ಶ್ರೀಹಯಗ್ರೀವನ ಪ್ರಿಯಭಕ್ತನಾದ **ವಾದಿರಾಜರಾಯನು,** ರಚಿಸಿದ = ಮಾಡಿದ (ಕವನಮಾಡಿ ಹಾಡಿದ), ಪದವಿದು = ಈ ಹಾಡು(ಭಕ್ತಿಯಿಂದ ನಿತ್ಯವೂ ಹೇಳಿಕೊಳ್ಳುವ-ವರಿಗೆ), ದಿನದಿನಕೆ = ದಿನದಿನಕ್ಕೆ, ಆಯುಷ್ಯಭವಿಷ್ಯ = ಆಯುಷ್ಯವೂ ಭವಿಷ್ಯವೂ (ಮುಂದಿನ ದಿನಗಳ ಸ್ಥಿತಿಗತಿಗಳೂ), ಹೆಚ್ಚುವುದು = ವೃದ್ಧಿ(ಉತ್ತಮ)ಗೊಳ್ಳುತ್ತವೆ; ನಿರಾ-ಯಾಸದಿಂದ = ಆಯಾಸವಿಲ್ಲದೆ (ಪ್ರಯಾಸವಿಲ್ಲದೆ) ಸುಖಿಪರು = ಸುಖಪಡುವರು.

ಬೊಮ್ಮನ ದಿನದಲ್ಲಿ ಒಮ್ಮೊಮ್ಮೆ ಈ ಮದುವೆ
ಕ್ರಮ್ಮದಿ ಮಾಡಿ ವಿನೋದಿಸುವ
ನಮ್ಮ ನಾರಾಯಣಗೂ ಈ ರಮ್ಮೆಗಡಿಗಡಿಗು
ಅಸುರಮೋಹನವೇ ನರನಟನೆ ॥ ಶೋಭಾನೆ ॥ ॥ ೧೧೧ ॥

ಅರ್ಥ:— ಬೊಮ್ಮನ ದಿನದಲ್ಲಿ = ಬ್ರಹ್ಮದೇವನ ಹಗಲಿನಲ್ಲಿ, ಒಮ್ಮೊಮ್ಮೆ = ಒಂದೊಂದುಸಲ (ಪ್ರತಿಹಗಲಿನಲ್ಲಿ ಒಂದಾವರ್ತಿ), ಈ ಮದುವೆ = ಈ (ಕ್ಷೀರಸಾಗರ-ಕನ್ಯೆಯ) ಮದುವೆಯನ್ನು, ಕ್ರಮ್ಮದಿ = ಕ್ರಮದಿಂದ (ತಪ್ಪದೇ), ಮಾಡಿ = ನಡೆಸಿಕೊಂಡು, ವಿನೋದಿಸುವ = ಕ್ರೀಡಿಸುವ, ನಮ್ಮ ನಾರಾಯಣಗೂ = ನಮ್ಮ ಪರಮಸ್ವಾಮಿಯಾದ ಶ್ರೀನಾರಾಯಣಗೂ, ಈ ರಮ್ಮೆಗೆ = ಈತನ ನಿತ್ಯ ಭಾರ್ಯಳಾದ ರಮಾದೇವಿಗೂ, ಅಡಿಗಡಿಗು = ಮೇಲಿಂದ ಮೇಲೆ, ನರನಟನೆ = ಮನುಷ್ಯರಂತೆ ನಟಿಸುವುದು, ಅಸುರಮೋಹನವೇ = ತಮೋಯೋಗ್ಯರನ್ನು ಮೋಹಿಸುವುದಕ್ಕಾಗಿಯೇ (ಆಗಿದೆ).

ಮದುವೆಯ ಮನೆಯಲ್ಲಿ ಈ ಪದವ ಪಾಡಿದರೆ
ಮದುಮಕ್ಕಳಿಗೆ ಮುದವಹುದು
ವಧುಗಳಿಗೆ ಓಲೆಭಾಗ್ಯ ದಿನದಿನಕೆ ಹೆಚ್ಚುವುದು
ಮದನನಯ್ಯನ ಕೃಪೆಯಿಂದ ॥ ಶೋಭಾನೆ ॥ ॥ ೧೧೨ ॥

ಅರ್ಥ:— ಮದುವೆಯ ಮನೆಯಲ್ಲಿ ಈ ಪದನ ಪಾಡಿದರೆ = ಮದುವೆಯ ಮನೆಯಲ್ಲಿ ಈ ಹಾಡನ್ನು ಹಾಡಿದರೆ, ಮದುಮಕ್ಕಳಿಗೆ = ವಧೂವರರಿಗೆ, ಮುದವಹುದು =ಶ್ರೇಯಸ್ಸಾಗುವುದು ; ವಧುಗಳಿಗೆ = ಕನ್ಯೆಯರಿಗೆ (ವಿವಾಹವಾಗುತ್ತಿರುವ ಹುಡುಗಿಯ-ರಿಗೆ), ಓಲೆಭಾಗ್ಯವು (ಮುತ್ತೈದೆತನವು), ದಿನದಿನಕೆ = ಪ್ರತಿದಿನದಲ್ಲಿ, ಹೆಚ್ಚುವುದು = ವೃದ್ಧಿಯಾಗುತ್ತದೆ (ದಂಪತಿಗಳಿಬ್ಬರಿಗೂ ಆಯುಷ್ಯವು ಬೆಳೆಯುತ್ತದೆ) ; ಮದನನಯ್ಯನ ಕೃಪೆಯಿಂದ = ಈ ಪದವನ್ನು ಹಾಡುವುದರಿಂದ ಲಭಿಸುವ ಈ ಫಲವು ಮನ್ಮಥಪಿತನಾದ ಶ್ರೀಕೃಷ್ಣನ ಕೃಪೆಯಿಂದಲೇ ಸರಿ. [ಓಲೆಯೆಂಬುದು ಕಿವಿಗಳಿಗಿಡುವ ಸೌಮಾಂಗಲ್ಯಸೂಚಕ ಆಭರಣವು.]

ಶೋಭನವೆನ್ನಿರೆ ಸುರರೊಳು ಸುಭಗನಿಗೆ
ಶೋಭನವೆನ್ನೀ ಸುಗುಣನಿಗೆ
ಶೋಭನವೆನ್ನಿರೆ ತ್ರಿವಿಕ್ರಮರಾಯಗೆ
ಶೋಭನವೆನ್ನೀ ಸುರಪ್ರಿಯಗೆ ॥ ಶೋಭಾನೆ ॥ ॥ ಪಲ್ಲವಿ ॥

॥ ಇತಿ ಶ್ರೀಮದ್ವಾದಿರಾಜಯತಿವಿರಚಿತ ಲಕ್ಷ್ಮೀಶೋಭನಪದ ಸಂಪೂರ್ಣ ॥

ಶ್ರೀಜಗನ್ನಾಥದಾಸಾರ್ಯ ವಿರಚಿತ

ಶ್ರೀ ಭಾರತೀದೇವಿಯ ಸ್ತುತಿ

(ವ್ಯಾಖ್ಯಾನ ಸಹಿತ)

ಎನ್ನ ಚರಣೋದಕವ ಶಿವ ಪಾ–
ವನ್ನವೆನುತಾದರದಿ ಧರಿಸಿದ–
ನೆನ್ನ ಕರುಣಾಬಲದಲಾವಿಧಿ ವೇದ ವೋದಿದನು ।
ಎನ್ನರಸಿ ರಮೆ ಸಕಲಗುಣಸಂ–
ಪನ್ನ ಸುರಮುನಿಮಾನ್ಯ ಶ್ರುತಿತತಿ–
ಗಣ್ಯನೆನುತಲಿ ಮನದಿ ಮನ್ನಿಸಿ ಮುನ್ನ ವರಿಸಿದಳು ॥

–ವಾದಿರಾಜಕೃತ : ಸ್ವಪ್ನ ಪದ

ಶ್ರೀಜಗನ್ನಾಥದಾಸಾರ್ಯ ವಿರಚಿತ

ಶ್ರೀ ಭಾರತೀದೇವಿಯ ಸ್ತುತಿ

ರಾಗ : ಶಂಕರಾಭರಣ   ಅಟ್ಟತಾಳ

ಭಾರತಿ - ಮಜ್ಜನನಿ - ಭಾರತಿ   ॥ ಪ ॥

ಭಾರತಿ ಭರತನರ್ಧಾಂಗಿ ಕರು-
ಣಾರಸಪೂರಿತಾಪಾಂಗಿ - ಆಹ ।
ತಾರಕ್ಷ್ಯಪ್ರಮುಖವೈಕಾರಿಕದೇವಗ-
ಣಾರಾಧಿತಾಂಘ್ರಿಸರೋರುಹೆ ಪಾಲಿಸೆ   ॥ ಅ ॥

ಗಮನೀಯಾಂಶ:— 'ರತತ್ವಾದ್ಧಾತ್ಮಕೇ ವಿಷ್ಣಾವಥವಾಽಪಿಜಗದ್ಭೃತೇಃ ಭರತೋ ವಾಯುರುದ್ದಿಷ್ಟೋಭಾರತೀತತ್ಸರಸ್ವತೀ ॥ (ಭಾಗ - ತಾ) ಜ್ಞಾನಸ್ವರೂಪನಾದ ಶ್ರೀವಿಷ್ಣು-ವಿನಲ್ಲಿ ಸದಾ ಆಸಕ್ತನಾಗಿರುವುದರಿಂದ ಅಥವಾ ಜಗತ್ತನ್ನು ಧರಿಸಿ ರಕ್ಷಿಸುವುದರಿಂದ, ಶ್ರೀವಾಯುವು (ಮುಖ್ಯಪ್ರಾಣನು) ಭರತನೆನಿಸುತ್ತಾನೆ = ಆತನ ಪತ್ನಿಯು ಭಾರತೀ ಎನಿಸುತ್ತಾಳೆ. 'ಪ್ರಾಣೋ ಹಿ ಭರತೋನಾಮ ಸರ್ವಸ್ಯ ಭರಣಾತ್‌ಶ್ರುತಃ । ತದ್ಭಾರ್ಯಾ ಭಾರತೀನಾಮ ವೇದರೂಪಾ ಸರಸ್ವತೀ । ರೂಪಮಾಶ್ರಿತಾ ವಾಯುಂ ಶ್ರೀರಿತ್ಯೇವ ಚ ಕೀರ್ತಿತಾ ॥ (ಭಾ-ತಾ) ಸರ್ವಜಗತ್ತಿನ ರಕ್ಷಕನಾದ್ದರಿಂದ ಮುಖ್ಯಪ್ರಾಣನು ಭರತನೆಂಬ ಅನ್ವರ್ಥನಾಮವುಳ್ಳವನು ; ವೇದಪ್ರತಿಪಾದ್ಯಳೂ (ವೇದಾಭಿಮಾನಿನಿಯೂ) ಭಾವೀ ಸರಸ್ವತಿಯೂ ಆದ ಮುಖ್ಯಪ್ರಾಣನ ಭಾರ್ಯಳೇ 'ಭಾರತೀ'ದೇವಿಯು ; ಸುಖಸ್ವರೂಪ-ನಾದ ವಾಯುದೇವರನ್ನು ಆಶ್ರಯಿಸಿರುವುದರಿಂದ ಭಾರತಿಯು 'ಶ್ರೀ' ಎಂದೂ ಕರೆಯಲ್ಪಡುವಳು, ಈ ಮೊದಲಾದ ಪ್ರಮಾಣಗಳಿಂದ, ಭಾರತಿಯು 'ಭರತನರ್ಧಾಂಗಿ' ಎಂಬ ಅರ್ಥಪೂರ್ಣವೂ ಅನ್ವರ್ಥವೂ ಆದ ನಾಮವುಳ್ಳವಳಾಗಿರುವಳು.

'ಮಜ್ಜನನೀ' = ನಾನೇ ಮೊದಲಾದ ಸರ್ವಜಗತ್ತಿನ ತಾಯಿಯು ; ಅರ್ಧಾಂಗಿ = ಭಾರ್ಯಳು ; ಪತಿಯಾದ ಮುಖ್ಯಪ್ರಾಣನೊಂದಿಗೆ ಅರ್ಧನಾರೀ ನರರೂಪದಲ್ಲಿದ್ದು ಶ್ರೀನಾರಾಯಣನ ಅರ್ಧಾಂಗಿಯಾದ ಶ್ರೀ (ಲಕ್ಷ್ಮೀ) ದೇವಿಯಂತೆ (ದಕ್ಷಿಣಾನಾಮಕ ಶ್ರೀಮಹಾಲಕ್ಷ್ಮೀದೇವಿಯಂತೆ), ತನ್ನ ನಾನಾ ರೂಪಗಳಲ್ಲಿ ಉತ್ತಮಳೆನಿಸುವಳು. 'ಅರ್ಧ-ನಾರೀ ನರತ್ವೇನ ಯದಾ ಭರ್ತ್ರಾ ಸಹ ಸ್ಥಿತಾ । ತದೋತ್ತಮಾ ದಕ್ಷಿಣಾವತ್ ....'

ಎಂಬ (ಸತ್ತತ್ತ್ವರತ್ನಮಾಲಾ) ವಾಕ್ಯವು 'ಅರ್ಧಾಂಗಿ' ಎಂಬುದರ ಮಹಿಮೆಯನ್ನು ನಿರೂಪಿಸುತ್ತದೆ ; ಕರುಣಾರಸಪೂರಿತಾಪಾಂಗಿ = ದಯಾಪೂರ್ಣವಾದ ಕಟಾಕ್ಷವುಳ್ಳವಳು (ಅಪಾಂಗಿ = ಕಡೆಗಣ್ಣನೋಟವುಳ್ಳವಳು) ; ತಾರಕ್ಷ್ಯ ಪ್ರಮುಖವೈಕಾರಿಕ ದೇವಗಣಾ-ರಾಧಿತಾಂಘ್ರಿ ಸರೋರುಹೆ = ತಾರ್ಕ್ಷ್ಯ (ಗರುಡ) ಮೊದಲಾದ (ವೈಕಾರಿಕ ಅಹಂಕಾರ-ತತ್ತ್ವ ನಿರ್ಮಿತ ದೇಹಗಳುಳ್ಳ) ತತ್ತ್ವಾಭಿಮಾನಿ ದೇವಸಮೂಹದಿಂದ ಪೂಜಿತವಾದ ಪಾದಪದ್ಮಗಳುಳ್ಳವರು.

ವಿದ್ಯುನ್ನಾಮಕೆ ವಿಧಿಜಾತೆ । ಕೃತಿ
ಪ್ರದ್ಯುಮ್ನ ಜಠರಸಂಭೂತೆ । ಅನ
ವದ್ಯ ಸದ್ಗುಣಗಣವ್ರಾತೆ । ಬ್ರಹ್ಮ
ವಿದ್ಯವ ಪಾಲಿಸು ಮಾತೆ । ಆಹ ॥
ಬುದ್ಧ್ಯಭಿಮಾನಿಯೆ ಸದ್ಯೋಜಾತನ ಪೆತ್ತ
ಶ್ರದ್ಧಾನಾಮಕೆ ಅನಿರುದ್ಧನ ತೋರಿಸೆ ॥ ೧ ॥

ಗಮನೀಯಾಂಶ:— ವಿದ್ಯುನ್ನಾಮಕೆ = 'ವಿದ್ಯುತ್' ಎಂಬ ನಾಮವುಳ್ಳವಳು ಮತ್ತು ವಿದ್ಯುತ್ತಿನ ಅಭಿಮಾನಿಯೂ, ಶ್ರೀಭಾರತೀದೇವಿ. ವಿಶೇಷವಾದ ಕಾಂತಿಯುಕ್ತಳೂ, ತಟಿತ್ ಲೋಕಾಭಿಮಾನಿಯೂ ಆದ್ದರಿಂದ ಅನ್ವರ್ಥನಾಮವುಳ್ಳವಳು. 'ಓಂ ವೈದ್ಯುತೇ-ನೈವ ತತಸ್ತಚ್ಛ್ರುತೇಃ ಓಂ' ಎಂಬಲ್ಲಿ (ಬ್ರಹ್ಮಸೂತ್ರ) ಜೀವನನ್ನು ಬ್ರಹ್ಮನನ್ನು ಹೊಂದಿಸು-ವನೆಂಬ ಮುಖ್ಯ ವಾಯುದೇವನು 'ವಿದ್ಯುತ್ಪತಿ' ಎಂದು ಹೇಳಲ್ಪಟ್ಟಿರುವನು. ಪಾದಾಂಗುಷ್ಠನಖದಿಂದ ವಿದ್ಯುತ್ಪ್ರಕಾಶವನ್ನು ಬೀರಿ ದೀಪವು ಶಾಂತವಾದಾಗ ಪಾಠವನ್ನು ಹೇಳಿದ, ಶ್ರೀವಾಯುದೇವರ ಮೂರನೇ ಅವತಾರದ ಶ್ರೀಮಧ್ವಾಚಾರ್ಯರು, ವಿದ್ಯುತ್ಪತಿಗಳೆಂಬುದನ್ನು ನಿದರ್ಶನಮಾಡಿಕೊಡುವುದಿಲ್ಲವೇ ?

ವಿಧಿಜಾತೆ = ಚತುರ್ಮುಖಬ್ರಹ್ಮನಿಂದ, ಬೇರೊಂದು ರೂಪದಿಂದ ಹುಟ್ಟಿದ, ಕೃತಿಪ್ರದ್ಯುಮ್ನಜಠರಸಂಭೂತೆ = ಭಾರತಿಯು 'ಕೃತಿರಮಣ ಪ್ರದ್ಯುಮ್ನನ' ಮಗಳು (ನಂದನೆ); ಪ್ರದ್ಯುಮ್ನರೂಪಿ ಶ್ರೀಹರಿಯ ಮಗಳು ಆಗಿದ್ದು ಬ್ರಹ್ಮನ ಮಗಳು ಹೇಗಾಗು-ವಳೆಂದು ಶಂಕಿಸಲಾಗದು. ದೇವತೆಗಳು ಬಹುರೂಪದಿಂದ ಹುಟ್ಟುತ್ತಾರೆ ಅವರ ಉತ್ಪತ್ತಿಲಯಗಳನ್ನು ಸ್ಪಷ್ಟವಾಗಿ ತಿಳಿಯುವುದು ಬಹುವಿವೇಕಯುಕ್ತ ಸೂಕ್ಷ್ಮಜ್ಞಾನಸಾಧ್ಯ-ವಾದುದು. ಪುರುಷನಾಮಕ ಚತುರ್ಮುಖ ಬ್ರಹ್ಮನ ಪತ್ನಿಯು, ಪ್ರಕೃತಿನಾಮಕಳು ; ಆಕೆಯು (ಲಕ್ಷ್ಮೀದೇವಿಯ ನಂತರ) ಪ್ರಕೃತ್ಯಭಿಮಾನಿಯೂ ಆಗಿರುತ್ತಾಳೆ. ಈಕೆಯಲ್ಲಿ ರೂಪಾಂತರದಿಂದ 'ಸೂತ್ರ' ನಾಮಕನು ಹುಟ್ಟುತ್ತಾನೆ — ಆದರೂ ಗುಣದಿಂದ 'ಪ್ರಕೃತಿ'

ಗಿಂತ ಅಧಿಕನೇ. ಹೀಗೆ ಹುಟ್ಟುವುದು ಅವರ (ಆ ದೇವತೆಗಳ) ತಾರತಮ್ಯದ್ಯೋತಕವಲ್ಲ. ಹೀಗೆಯೇ ಒಂದು ರೂಪದಿಂದ ಭಾರತೀದೇವಿಯೂ ಬ್ರಹ್ಮಪುತ್ರಿಯಾಗಿ ಹುಟ್ಟುತ್ತಾಳೆ.

ಅನವದ್ಯಸದ್ಗುಣಗಣವ್ರಾತೆ =ನಿರ್ದೋಷಗಳಾದ ಸದ್ಗುಣಗಣಗಳ ಪುಂಜದಂತಿದ್ದಾಳೆ. 'ಸಮಸ್ತಗುಣಸಂಪೂರ್ಣಾ ಭಾರತೀ ಚ ಸರಸ್ವತೀ । ರುದ್ರಾದಿ ಸರ್ವದೇವಾನಾಂ ಮನೋವಾಚಾಮಗೋಚರಾ ॥' (ಸ.ರ.ಮಾ.) ಭಾರತೀ ಮತ್ತು ಸರಸ್ವತೀ ಗುಣಪೂರ್ಣರು ಮತ್ತು ರುದ್ರಾದಿ ಸಕಲ ದೇವತೆಗಳಿಗೆ ವಾಙ್ಮನಗಳಿಗೆ ಸಾಕಲ್ಯೇನ ಅಗೋಚರಳು, ಎಂದೂ ಈಕೆಯ ಮಹಿಮೆಯು ನಿರೂಪಿಸುತ್ತದೆ.

ಬ್ರಹ್ಮವಿದ್ಯವ ಪಾಲಿಸು - ಶ್ರೀಹರಿಮಹಾತ್ಮ್ಯಜ್ಞಾನವನ್ನು ಅನುಗ್ರಹಿಸು (ಜನ್ಮಾಂತರ ಪುಣ್ಯವಿಶೇಷದಿಂದ ಲಭಿಸಿರಬಹುದಾದ ಅಲ್ಪಜ್ಞಾನವನ್ನು ರಕ್ಷಿಸು = ನಶಿಸಿಹೋಗದಂತೆಯೂ ಅನುಗ್ರಹಿಸು).

ಆಹ = ಏನೆಂದು ಹೇಳಲಿ ! ಆಶ್ಚರ್ಯ ! ಎಷ್ಟೆಂದು ಹೇಳಲಿ ! ಬುದ್ಧ್ಯಭಿಮಾನಿಯೆ = ಬುದ್ಧಿತತ್ವದ ಅಭಿಮಾನಿಯು (ಮನಃಪ್ರವೃತ್ತಿಯ ಪ್ರಭೇದವಾದ ಬುದ್ಧಿಗಲ್ಲ — ಅದಕ್ಕೆ ಉಮಾದೇವಿಯು ಅಭಿಮಾನಿಯು - ಬುದ್ಧಿತತ್ವವೆಂದರೆ, ಮಹತತ್ತ್ವದ ಪ್ರಭೇದವಾದ ವಿಜ್ಞಾನತತ್ವವು).

ಸದ್ಯೋಜಾತನ ಪೆತ್ತ= ಶಿವನನ್ನು ಹಡೆದ (ಪ್ರಸವಿಸಿದ) ; ಶ್ರದ್ಧಾ ನಾಮಕೆ = 'ಶ್ರದ್ಧಾ' ನಾಮಕ ಭಾರತಿಯ ಮಗನು ಸದ್ಯೋಜಾತರೂಪದ ಶಿವನು, ಅನಿರುದ್ಧನ ತೋರಿಸೆ = ಶ್ರೀಹರಿಯ ಅಪರೋಕ್ಷವನ್ನು ಕೃಪೆಮಾಡು.

ಗುಣತ್ರಯಾತ್ಮಕವಾದ ಲಿಂಗ - ದೊಳ-
ಗಣುರೂಪಳಾಗಿ ತುರಂಗ - ಮುಖ
ಅನಲಾಂತರ್ಗತ ಪಾಂಡುರಂಗ - ನಂಘ್ರಿ-
ವನಜಯುಗಳಮತ್ತಭೃಂಗ - ಆಹ ॥
ಎನಿಸಿ ತತ್ವಕಾರ್ಯ ಅನಿರುದ್ಧ ದೇಹಸ್ಥ
ಅನಿಮಿಷರೊಳು ಪೊಕ್ಕು ದ್ವಿನವರೂಪದಿ ಮಾಳ್ಪೆ ॥ ೨ ॥

ಗಮನೀಯಾಂಶ:— ಗುಣತ್ರಯಾತ್ಮಕವಾದ ಸತ್ವ-ರಜ-ತಮಗಳೆಂಬ ಮೂರು ಗುಣಗಳಿಂದ ರಚಿತವಾದ (ತ್ರಿಗುಣಗಳಿಂದ ಹುಟ್ಟಿದ - ಜಡಪ್ರಕೃತಿಯ ವಿಕಾರಗಳಾದ, ಶಬ್ದಾದಿತನ್ಮಾತ್ರೆಗಳು ೫, ಕರ್ಮೇಂದ್ರಿಯಗಳು ೫, ಜ್ಞಾನೇಂದ್ರಿಯಗಳು ೫ ಮತ್ತು ಮನಸ್ಸು, ಹೀಗೆ ೧೬ ತತ್ವಗಳ ಸೂಕ್ಷ್ಮಾಂಶಗಳಿಂದ ನಿರ್ಮಿತವಾದ) ಲಿಂಗದೇಹವು ಸಕಲ ಜೀವರ ಸ್ವರೂಪವನ್ನು ಅನಾದಿಯಿಂದ ಆಚ್ಛಾದಿಸಿರುತ್ತದೆ. ಮುಕ್ತಿಯೋಗ್ಯಜೀವನಿಗೆ, ಶ್ರೀಹರಿಯ

ಸಾಕ್ಷಾತ್ಕಾರವಾದ ನಂತರ, ಪ್ರಾರಬ್ಧಶೇಷವೂ ನಷ್ಟವಾಗುತ್ತಿರಲು, ಲಕ್ಷ್ಮ್ಯಾತ್ಮಕವಾದ ವಿರಜಾನದೀಸ್ನಾನದಿಂದ, ಜೀವಸ್ವರೂಪವನ್ನು ಬಿಟ್ಟು ತೊಲಗುತ್ತದೆ.

ಲಿಂಗದೊಳಗೆ ಅಣುರೂಪಳಾಗಿ = ಸಕಲಜೀವರ ಅತಿಸೂಕ್ಷ್ಮವಾದ ಲಿಂಗದೇಹ-ದಲ್ಲಿ ಸಹ ಶ್ರೀಭಾರತೀದೇವಿಯು (ತನ್ನ ಪತಿಯೊಂದಿಗೆ) ಅಣುತರಳಾಗಿ (ಅತ್ಯಂತ ಸೂಕ್ಷ್ಮರೂಪದಿಂದ) ಆ ೧೬ ತತ್ವಾಂಶಗಳ (ಕಲೆಗಳ) ನಿಯಾಮಕಳಾಗಿರುತ್ತಾಳೆ.

ಅನಲಾತರ್ಂಗತ = ಅಗ್ನ್ಯಂತರ್ಗತ ; ಪಾಂಡುರಂಗನಂಘ್ರಿವನಜಯುಗಳ = ಶ್ರೀಪರಶುರಾಮನ ಪದಪದ್ಮದ್ವಂದ್ವಗಳ ; 'ಅಗ್ನ್ಯಂತರ್ಗತ ಭಾರತೀರಮಣಮುಖ್ಯ ಪ್ರಾಣಾಂತರ್ಗತನಾದ ಹರಿಣೇಪತಿ ಶ್ರೀಪರಶುರಾಮ ಪ್ರೇರಣಯಾ ಶ್ರೀಪರಶುರಾಮ-ಪ್ರೀತ್ಯರ್ಥಂ' ಎಂದಷ್ಟೇ, ಕರ್ಮಯೋಗಿಗಳೆನಿಸುವ ಮನುಷ್ಯರೆಲ್ಲರೂ, ತಮ್ಮ ಸರ್ವ-ಕರ್ಮಗಳನ್ನು ಶ್ರೀಹರಿಗೆ ಅರ್ಪಿಸತಕ್ಕದ್ದು. ಶ್ರೀಭಾರತೀದೇವಿಯು ತನ್ನ ಪತಿಯೊಡನೆ ಅಗ್ನಿಯಲ್ಲಿ ಸಹ ಇರುವಳೆಂಬ ಅನುಸಂಧಾನದ ಅವಶ್ಯಕತೆಯನ್ನು ಇಲ್ಲಿ ಸೂಚಿಸಲಾಗಿದೆ. ಮತ್ತಭೃಂಗ – ಶ್ರೀಪರುಶುರಾಮನ ಪಾದಪದ್ಮಗಳಲ್ಲಿ ವಿಹರಿಸುವ ಭೃಂಗದಂತೆ, ಅಲ್ಲಿರುವ ಗುಣಸಾರವೆಂಬ ಅಮೃತವನ್ನು (ಮಧುವನ್ನು) ಪಾನಮಾಡಿ, ಅದರಿಂದ ಮತ್ತಳಾಗಿರು-ವಳು (ಪರವಶಳಾಗಿರುವಳು). ಅನಿರುದ್ಧ ದೇಹಸ್ಥ ಅನಿಮಿಷರೊಳು – ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲಗಳೆಂಬ ನಾಲ್ಕು ದೇಹಗಳುಳ್ಳವರು ಜೀವರು ; ಅನಿರುದ್ಧ ದೇಹವೆಂಬುದೇ ಸೂಕ್ಷ್ಮ (ಲಿಂಗದೇಹಕ್ಕಿಂತ ಕಿಂಚಿತ್ ಸ್ಥೂಲ) ದೇಹವು ; ಈ ದೇಹದಲ್ಲಿ ಎಲ್ಲ ತತ್ವಾಭಿಮಾನಿದೇವತೆಗಳು ಅವಾಂತರ ತತ್ವಾಭಿಮಾನಿ ದೇವತೆಗಳೊಂದಿಗೆ, ಆ ದೇಹದ ತತ್ವಗಳ ನಿಯಾಮಕರಾಗಿರುತ್ತಾರೆ ; ಲಿಂಗದೇಹದಲ್ಲಿ ಈ ಎಲ್ಲರಿಗೂ ಕೆಲಸವಿಲ್ಲ – ಆದ್ದರಿಂದ ಎಲ್ಲರೂ ಅಲ್ಲಿರುವುದಿಲ್ಲ. ಶ್ರೀವಾಯುಭಾರತಿಯರು ಮಾತ್ರ ಈ ನಾಲ್ಕು ದೇಹಗಳಲ್ಲಿ ನಿಯಾಮಕರಾಗಿ ವಾಸಿಸುತ್ತಾರೆ. ತಮಗಿಂತ ಅವರರಾದ ಸರ್ವತತ್ವಾಭಿ-ಮಾನಿಗಳಲ್ಲಿ, ವಾಯುಭಾರತಿಯರು, ಅಂತರ್ಯಾಮಿಗಳಾಗಿದ್ದು ಅವರವರ ಕಾರ್ಯ-ಗಳನ್ನು ಮಾಡಿಸುತ್ತಾರೆ. ಪ್ರಕೃತ ಅನಿರುದ್ಧ ದೇಹದಲ್ಲಿರುವ ಸಕಲ ಸ್ವಾವರತತ್ವಾಭಿಮಾನಿ-ದೇವತೆಗಳಲ್ಲಿ ಶ್ರೀಭಾರತೀದೇವಿಯು ಇದ್ದು, ಅವರ ಕಾರ್ಯಪ್ರೇರಕಳಾಗಿರುವಳು – ತಾನೂ ಮಾಡಿ ಅವರಿಂದ ಮಾಡಿಸುತ್ತಾಳೆ.

ದ್ವಿನವರೂಪದಿ ಮಾಳ್ಪ – ವಾಸುದೇವಾದಿ ನಾಲ್ಕು ರೂಪಗಳಲ್ಲಿ ವಾಸುದೇವನು ೩೦ ರೂಪಗಳಿಂದಲೂ, ಪ್ರದ್ಯುಮ್ನನು ೨೭ ರೂಪಗಳಿಂದಲೂ, ಸಂಕರ್ಷಣನು ೨೫ ರೂಪಗಳಿಂದಲೂ, ಅನಿರುದ್ಧನು ೧೮ ರೂಪಗಳಿಂದಲೂ, ಸ್ವಕಾರ್ಯಗಳನ್ನು ಯಥಾ-ಕಾಲದಲ್ಲಿ ನಿರ್ವಹಿಸುತ್ತವೆ ; ಜೀವನಿಗಿರುವ ನಾಲ್ಕು ದೇಹಗಳಲ್ಲಿ ಅನಿರುದ್ಧ ದೇಹದಲ್ಲಿ-ರುವವನು ಅನಿರುದ್ಧನು. ಲಿಂಗದೇಹದಲ್ಲಿ ಹಯಗ್ರೀವನೂ (ತುರಂಗಮುಖನೂ),

ಸ್ವರೂಪದೇಹದಲ್ಲಿ ವಿಶ್ವನಾಮಕನೂ, ಸ್ಥೂಲದೇಹದಲ್ಲಿ ನಾರಾಯಣನೂ ನಿಯಾಮ-ಕರು. ಅನಿರುದ್ಧ ದೇಹದಲ್ಲಿರುವ ಅನಿರುದ್ಧರೂಪೀ ಶ್ರೀಹರಿಯನ್ನು ಅಂತರ್ಯಾಮಿ-ಯಾಗಿ ಧರಿಸಿರುವ ಶ್ರೀಭಾರತೀದೇವಿಯು, **ಅನಿರುದ್ಧನ, (ದ್ವಿನವ) ೧೮ ರೂಪಗಳನ್ನು** ಸೇವಿಸುವ ೧೮ ರೂಪಗಳುಳ್ಳವಳಾಗಿರುತ್ತಾಳೆ. ಅವ್ಯಕ್ತಾದಿ ೨೪ ತತ್ವಗಳಲ್ಲಿ ಅವ್ಯಕ್ತತತ್ವದ ಮುಖ್ಯ ಅಭಿಮಾನಿ ಲಕ್ಷ್ಮೀದೇವಿಯನ್ನು ಬಿಟ್ಟು ಉಳಿದ ೨೩ ತತ್ವಗಳಲ್ಲಿ ಪಂಚಭೂತಗಳಿಗೆ ಅನಿರುದ್ಧ ದೇಹದಲ್ಲಿ ಕಾರ್ಯವಿಲ್ಲದ ಪ್ರಯುಕ್ತ ಉಳಿಯುವ ೧೮ **ತತ್ವಗಳ ಅಭಿಮಾನಿ-ದೇವತೆಗಳೆಲ್ಲರಲ್ಲಿಯೂ ನಿಂತು ಭಾರತೀದೇವಿಯು ಆಯಾ** ತತ್ವಗಳ ಕಾರ್ಯಗಳನ್ನು ಮಾಡಿ ಮಾಡಿಸುತ್ತಾಳೆ. ಈ ಪ್ರಮೇಯಗಳ ವಿವರಗಳನ್ನು ಶ್ರೀಹರಿಕಥಾಮೃತಸಾರದ ಪಂಚತನ್ಮಾತ್ರಾಸಂಧಿಯ ಅಧ್ಯಯನದಿಂದ ತಿಳಿಯಬಹುದು.

ಕಾಳಿ ದ್ರೌಪದಿ ಶಿವಕನ್ಯಾ-ಮನ್ಮ-
ನಾಲಯದೊಳು ನಿಲ್ಲೆ ಘನ್ನ - ಪ್ರಾಜ್ಞ -
ಮೌಳಿಮಣಿಯೆ ಸುಪ್ರಸನ್ನ - ಪರಿ -
ಪಾಲಿಸು ನಂಬಿದೆ ನಿನ್ನ - ಆಹ ||
ಶೈಲಜೆ ಶ್ಯಾಮಲೆ ಪೌಲೋಮಿ ಉಷೇರಿಂದ
ಓಲಗ ಕೈಕೊಂಬ ಕಾಲಾಭಿಮಾನಿಯೆ || ೩ ||

ಗಮನೀಯಾಂಶ:— ಮುಂದಿನ ನುಡಿಯನ್ನು ನೋಡಿರಿ.

ವಂದಿಪೆ ನಿನಗಿಂದ್ರಸೇನಾ - ನಳ -
ನಂದಿನಿ ಕರುಣಿಸು ಜ್ಞಾನ - ಶ್ರೀಮು-
ಕುಂದನ ಪರಮಕಲ್ಯಾಣ - ಗುಣ-
ಸಿಂಧುವಿನೊಳಗೆ ಪಾಠೀನ - ಆಹ ||
ದಂದದಿ ಚರಿಸುವ ಗಂಧವಾಹನ ರಾಣಿ
ಸಿಂಧುರಗಮನೆ ಪುರಂದರರಾರಾಧಿತೆ || ೪ ||

ಗಮನೀಯಾಂಶ:— (೧) ಘನ್ನಪ್ರಾಜ್ಞಮೌಳಿಮಣಿಯೆ = ಘನವಾದ (ನಿಬಿಡ = ಪೂರ್ಣ = ಮೂರ್ತಿವೆತ್ತ) ಜ್ಞಾನರತ್ನಳಂತಿರುವ ; ಸುಪ್ರಸನ್ನ = ಅಧಿಕವಾಗಿ ಪ್ರಸನ್ನಳಾದ ; ಶೈಲಜೆ = ಪಾರ್ವತೀ (ಹಿಮವಂತನ ಕುಮಾರಿ), ಶ್ಯಾಮಲೆ = ಯಮಧರ್ಮನ ಭಾರ್ಯಳು, ಪೌಲೋಮಿ = ಶಚೀ (ಇಂದ್ರನ ರಾಣಿ = ಪುಲೋಮನ ಮಗಳು), ಉಷೇರಿಂದ = ಅಶ್ವಿನೀ ದೇವತೆಗಳ ಪತ್ನಿ 'ಉಷಾ' ಇವರುಗಳಿಂದ, ಓಲಗಕೈಕೊಂಬ -

ಸೇವಿತಳಾದ (ಪೂಜಿಸಲ್ಪಡುವ) ಕಾಲಾಭಿಮಾನಿಯೆ = ಕಾಲಾಭಿಮಾನಿಯಾದ ಶ್ರೀವಾಯುದೇವನ ಭಾರ್ಯಳಾಗಿದ್ದು ತಾನು ಕಾಲಾಭಿಮಾನಿಯಾಗಿರುವ ಭಾರತೀದೇವಿ.

(೨) ಮುಕುಂದನ ಪರಮಕಲ್ಯಾಣಗುಣಸಮುದ್ರದಲ್ಲಿ, ಪಾಠೀನದಂದದಿ ಚರಿಸುವ – ಮೀನಿನಂತೆ ಸಂಚರಿಸುವ (ಲೀಲೆಯಿಂದ – ಆಯಾಸವಿಲ್ಲದೇ, ಶ್ರೀಹರಿಯ ಅನಂತಗುಣಗಳನ್ನು ಧ್ಯಾನಿಸಿ ವಿಹರಿಸುವ – ಕ್ರೀಡೆಯಿಂದ ಹರ್ಷಿಸುವ).

(೩) ಒಂದಾನೊಂದು ದಿನ, ಪಾರ್ವತೀ, ಶಚೀ, ಶ್ಯಾಮಲಾ ಮತ್ತು ಉಷಾದೇವಿಯರು ತಮ್ಮ ಪತಿಗಳಿಂದ ಕೂಡಿ ಬ್ರಹ್ಮದೇವನು ನೋಡುತ್ತಿದ್ದಂತೆಯೇ, ಸ್ತ್ರೀಸಹಜವಿಲಾಸವನ್ನು ಅಧಿಕವಾಗಿ ಪ್ರಕಟಿಸಿದರು ; ಬ್ರಹ್ಮನು ಮಾನುಷದೇಹವನ್ನು ಹೊಂದಿರಿ ಮತ್ತು ಅಲ್ಲಿ ನಿಮಗೆ ಪರಪುರುಷರ ಸ್ಪರ್ಶವೂ ಆಗಲಿ ಎಂದು ಶಪಿಸಿದನು. ಆ ಮೊದಲು, ಈ ಪಾರ್ವತ್ಯಾದಿ ದೇವಿಯರು ಒಂದೇ ದೇಹವನ್ನು ಪ್ರವೇಶಿಸಿ, ಬ್ರಹ್ಮದೇವನನ್ನು ವಂಚಿಸಲು ಕ್ರೀಡಾರ್ಥವಾಗಿ ಯತ್ನಿಸಿದರು. ಇದಕ್ಕಾಗಿ ಮೂರಾವರ್ತಿ ಯತ್ನಿಸಿದರು. ಸಿಟ್ಟಾದ ಬ್ರಹ್ಮನು, ಅವರಿಗೆ ಮೂರಾವರ್ತಿ ಒಂದೇ ಮನುಷ್ಯ ಶರೀರವನ್ನು ಹೊಂದಿರೆಂದೂ ಶಾಪವನ್ನಿತ್ತಿದ್ದನು. ಈ ಎರಡು ಶಾಪಗಳು ಅಪರಿಹಾರ್ಯವಾದ್ದರಿಂದ, ಈ ನಾಲ್ಕು ದೇವಿಯರೂ, ಸಹಸ್ರವರ್ಷಪರ್ಯಂತ ಭಾರತೀದೇವಿಯನ್ನು ಸೇವಿಸಿ, ಪ್ರಸನ್ನೀಕರಿಸಿಕೊಂಡು, ನಾಲ್ಕು ಮನುಷ್ಯ ಜನ್ಮಗಳಲ್ಲಿ ತಮ್ಮನ್ನು ಆಕೆಯೊಂದಿಗೆ ತನ್ನ ದೇಹದಲ್ಲಿಟ್ಟುಕೊಂಡು ರಕ್ಷಿಸುವಂತೆ ಪ್ರಾರ್ಥಿಸಿದರು. ಒಂದು ಶಾಪದಂತೆ ಮಾತ್ರ ಅನ್ಯ ಪುರುಷಸ್ಪರ್ಶ (ರಮಣವಲ್ಲ) ವನ್ನು ಅನುಭವಿಸತಕ್ಕದ್ದಿದ್ದರೂ, ಇನ್ನೊಂದು ಶಾಪದಂತೆ ಎತ್ತಬೇಕಾದ ಮೂರು ಮನುಷ್ಯ ಜನ್ಮಗಳಲ್ಲಿ ದೇವಸ್ತ್ರೀ ಸಹಜವಾದ ತಮ್ಮ ಸೌಂದರ್ಯದಿಂದ ಆಕರ್ಷಿತರಾಗುವ ದುಷ್ಟಕಾಮುಕರಿಂದ ರಕ್ಷಣೆ ಪಡೆಯುವ ಇಚ್ಛೆಯಿಂದ ಭಾರತೀದೇವಿಯೊಂದಿಗೆ ನಾಲ್ಕು ಮನುಷ್ಯ ಜನ್ಮಗಳಲ್ಲಿ ಒಂದೇ ದೇಹದಲ್ಲಿರುವಿಕೆಯನ್ನು ಯಾಚಿಸಿದರು; ಮತ್ತು ಒಂದು ದೇಹದಲ್ಲಿ ಅನ್ಯಸ್ಪರ್ಶವಾದರೂ, ಭಾರತಿಯನ್ನು ವಾಯುದೇವನಲ್ಲದೇ ಬೇರಾರೂ ಸ್ಪರ್ಶಿಸುವಂತಿಲ್ಲವಾದ್ದರಿಂದ (ಹೀಗೆಂಬುದು ಶ್ರೀಹರಿಯ ಅನಾದಿನಿತ್ಯ ಸಂಕಲ್ಪದಿಂದ ನಿಯತವಾದ್ದರಿಂದ) ವಾಯುದೇವ ಸ್ಪರ್ಶಮಾತ್ರವು ತಮಗೆ ದೋಷಕರವಾಗದೆಂದು ಭಾವಿಸಿ, ಹೀಗೆ ನಾಲ್ಕು ಮನುಷ್ಯ ಜನ್ಮಗಳಲ್ಲಿ ಆಕೆಯೊಂದಿಗಿರುವುದನ್ನು ಬೇಡಿದರು. ಭಾರತೀದೇವಿಯೂ ಸ್ವಪತಿಯ ಅನುಜ್ಞೆಯಿಂದ, ಹಾಗೆ ವರವಿತ್ತಳು.

ಮೊದಲು, ಪಾರ್ವತ್ಯಾದಿ ನಾಲ್ಕು ದೇವಸ್ತ್ರೀಯೊಂದಿಗೆ, **ವಿಪ್ರಕನ್ಯಾರೂಪದಿಂದ** (ಶಿವಕನ್ಯಾ) ಭಾರತೀದೇವಿಯು ಮನುಷ್ಯಶರೀರದಿಂದ ಅವತರಿಸಿದಳು. ಪಾರ್ವತ್ಯಾದಿ-ಗಳು ಮನುಷ್ಯ ದೇಹದಲ್ಲಿದ್ದಾಗ ತಂತಮ್ಮ ಪತಿಗಳ ಸಂಗವನ್ನು ಹೊಂದುವ ಉದ್ದೇಶದಿಂದ

ರುದ್ರದೇವನನ್ನು ಕುರಿತು ತಪಸ್ಸು ಮಾಡಿದರು. ಆ ದೇಹಸ್ಥಳಾದ ಭಾರತಿಯು ಆ ದೇಹದಿಂದಾಗುವ ನಮಸ್ಕಾರ, ಧ್ಯಾನಾದಿಕರ್ಮಗಳ ಫಲಸಿದ್ಧಿಯಿಂದ ಕರ್ಮೈಕ್ಯವು ಸಾಧಿಸಲೆಂದು, ರುದ್ರಾ = ಅಂತರ್ಯಾಮಿ ರುದ್ರನಾಮಕ ಶ್ರೀಹರಿಯನ್ನುದ್ದೇಶಿಸಿ ತಾನೂ ತಪವನ್ನಾಚರಿಸಿದಳು. ರುದ್ರಾಂತರ್ಗತ ಶ್ರೀಹರಿಯು, ಶಿವಕನ್ಯೆಗೆ, ಎಲ್ಲ ಜನ್ಮಗಳಲ್ಲಿ ನಿನ್ನ ಪತಿಸಹಿತಳಾಗಿ ಸುಖಿಸಿ, ನನ್ನನ್ನು ಅತಿಶಯವಾಗಿ ತೃಪ್ತಿಗೊಳಿಸುವಿಯೆಂದು ವರವಿತ್ತನು. ರುದ್ರದೇವನು ಪಾರ್ವತ್ಯಾದಿಗಳಿಗೆ, ತಮ್ಮ ನಾಲ್ಕು ಮನುಷ್ಯ ಜನ್ಮಗಳ ಪೈಕಿ ಒಂದರಲ್ಲಿ ಅವರವರ ಪತಿಸಂಗವಾಗಲೆಂದು ವರವಿತ್ತನು.

ನಂತರ ವಿಪ್ರಕನ್ಯಾದೇಹವನ್ನು ತ್ಯಜಿಸಿ, ಭಾರತೀದೇವಿಯು **'ನಳನಂದಿನೀ'** ಎಂಬ ತನ್ನ ಎರಡನೇ ಜನ್ಮವನ್ನು ಹೊಂದಿದಳು. ಕೆಲವು ಕಾಲದ ನಂತರ ಸ್ವೇಚ್ಛೆಯಿಂದಲೇ ಆ ದೇಹವನ್ನು ಬಿಟ್ಟು ಮೂರನೇ ಜನ್ಮದಲ್ಲಿ **'ಇಂದ್ರಸೇನಾ'** ಆದಳು. ಅಲ್ಲಿಯೂ ಪಾರ್ವತ್ಯಾದಿಗಳನ್ನು ತನ್ನೊಂದಿಗೆ ಇಟ್ಟುಕೊಂಡೇ ಜನಿಸಿದಳು.

ಒಂದು ವೇಳೆ ಮುದ್ಗಲ ಋಷಿಯು, ಚತುರ್ಮುಖನು ತನ್ನ ಮಗಳನ್ನೇ ಕಾಮಿಸಿ-ದನೆಂಬ ಕಥೆಯನ್ನು ಕೇಳಿ, ಬ್ರಹ್ಮದೇವನನ್ನು ಅಪಹಾಸ್ಯ ಮಾಡಿದನು. ಆಗ ಬ್ರಹ್ಮನು, ನರ-ಕಾದಿ ಅನರ್ಥಕ್ಕೆ ಕಾರಣವಾದ, ಭಾರತ್ಯಾದಿ ಪಂಚದೇವಿಯರ ಅಂಗಸಂಗವಾಗಲೆಂದು, ಮುದ್ಗಲನನ್ನು ಶಪಿಸಿದನು. ಭಯಗ್ರಸ್ತನಾದ ಮುದ್ಗಲನು ತಪಸ್ಸಿನಿಂದ ಬ್ರಹ್ಮನನ್ನು ಪ್ರಸನ್ನೀಕರಿಸಿಕೊಂಡು, ವಿಶಾಪವನ್ನು ಪ್ರಾರ್ಥಿಸಿದನು. ಆಗ ಬ್ರಹ್ಮನು ಆ ಪಂಚದೇವಿಯರು ಒಂದೇ ಶರೀರದಲ್ಲಿರುವ ಸ್ತ್ರೀಯು ನಿನ್ನ ಪತ್ನಿಯಾಗುತ್ತಾಳೆ = ಆದರೆ ಆಕೆಯನ್ನು ಭೋಗಿ-ಸುವ ಕಾಲದಲ್ಲಿ ನೀನು ಮೂರ್ಛಾವಸ್ಥೆಯಲ್ಲಿರುತ್ತೀ – ವಾಯುದೇವನು ನಿನ್ನ ದೇಹವನ್ನು ಪ್ರವೇಶಿಸಿ, ಆ ಸ್ತ್ರೀಯನ್ನು ಲಗ್ನಮಾಡಿಕೊಂಡು, ನಿನ್ನನ್ನು ಮೂರ್ಛಾವಸ್ಥೆಯಲ್ಲಿಯೇ ಇಟ್ಟು ದೀರ್ಘಕಾಲ ಆಕೆಯೊಂದಿಗೆ (ಆ ಇಂದ್ರಸೇನೆಯೊಂದಿಗೆ) ಗಾರ್ಹಸ್ಥ್ಯವನ್ನು ನಡೆಸಿ, ನಿನ್ನನ್ನು ಎಚ್ಚರಿಸಿ ತಾನೂ ಹೊರಟು ಹೋಗುತ್ತಾನೆ ; ನಂತರ ನೀನು ತಪಸ್ಸಿಗೆ ಹೋಗು, ಎಂದು, ಉತ್ತಮದೇವಿಯರ ಅಂಗಸಂಗದ ಅನರ್ಥವನ್ನು ಪರಿಹರಿಸಿದನು. ಹಾಗೆಯೇ ನಡೆಯಿತು. ಇಂದ್ರಸೇನಾ ಮುದ್ಗಲನನ್ನು ಲಗ್ನವಾದಳು. ಮುದ್ಗಲನ ದೇಹದಿಂದ ವಾಯುದೇವನು ಹೊರಟುಹೋಗಲು, ಮುದ್ಗಲನು ತಪಸ್ಸಿಗೆ ಹೋದನು. ಪತಿವಿಯೋಗದಿಂದಲೋ ಎಂಬಂತೆ ಇಂದ್ರಸೇನೆಯು ಮಹತ್ತಾದ ತಪಸ್ಸನ್ನು ಮಾಡಿದಳು. ವಿಪ್ರಕನ್ಯಾದೇಹದಲ್ಲಿದ್ದಾಗ ಮಾಡಿದಂತೆ ಶಂಕರನನ್ನು ಕುರಿತು ತಪಸ್ಸು ನಡೆಯಿತು.

ನಳನಂದಿನಿಯೇ ಇಂದ್ರಸೇನಾ ಎಂದು ಕೆಲವರು ತಿಳಿಯುತ್ತಾರೆ. ನಳ-ದಮ-ಯಂತಿಯರ ಮಗಳು ಇಂದ್ರಸೇನೆ, ಎಂಬುವಳು ಇದ್ದದ್ದು ನಿಜ. **ಮುದ್ಗಲಋಷಿಯನ್ನು ಲಗ್ನವಾದ ಇಂದ್ರಸೇನೆಯು ಬೇರೆಯೇ ಎಂದು ತಿಳಿದು ಬರುತ್ತದೆ.** ನಳನಂದಿನಿಯಾಗಿ

ಭಾರತೀದೇವಿಯು ಜನ್ಮವೆತ್ತಿದಾಗಿನ ಕಥಾ ವಿವರಗಳು, ದ್ರೌಪದಿಯಾಗಿ ಹುಟ್ಟಿ ಪಂಚ-ಪಾಂಡವರನ್ನು ಲಗ್ನವಾಗುವುದಕ್ಕೆ ಸಂಬಂಧಿಸುವ ಪ್ರಮೇಯಗಳನ್ನು ಗ್ರಹಿಸಲು ಸಹಾ-ಯಕವಲ್ಲದ್ದರಿಂದ, ವಿಸ್ತರಿಸಲ್ಪಟ್ಟಿಲ್ಲ. ಪಾರ್ವತ್ಯಾದಿಗಳನ್ನು ತನ್ನೊಳಗಿಟ್ಟುಕೊಂಡು ಭಾರತಿಯು ಹುಟ್ಟಿದ ನಾಲ್ಕು ಜನ್ಮಗಳೆಂದರೆ, **ವಿಪ್ರಕನ್ಯಾ, ನಳನಂದಿನೀ, ಇಂದ್ರಸೇನಾ ಮತ್ತು ದ್ರೌಪದೀ.** ಕಾಶೀರಾಜನ ಮಗಳಾದ **'ಕಾಳೀ'** ದೇವಿಯು ಸಾಕ್ಷಾತ್ ಭಾರತೀದೇವಿಯೇ ; **ಆಕೆಯಲ್ಲಿ ಬೇರಾವ ದೇವಸ್ತ್ರೀಯರ ಆವೇಶವಿಲ್ಲ** ; ಆಕೆಯನ್ನು ಭೀಮಸೇನನು ಲಗ್ನವಾದನು. ನಳನಂದಿನೀ ಇಂದ್ರಸೇನೆಯರು ಒಂದೇ ಆದರೆ ಭಾರತಿಯು ಪಾರ್ವತ್ಯಾದಿಗಳಿಗೆ ವರದಾನ ಮಾಡಿದ ನಾಲ್ಕು ಜನ್ಮಗಳು ಸಿದ್ಧಿಸುವುದಿಲ್ಲ.

ಪ್ರಕೃತ, ವಿಪ್ರಕನ್ಯಾದೇಹದಲ್ಲಿ ಹೇಗೋ ಹಾಗೆ, ಕರ್ಮೈಕ್ಯಕ್ಕಾಗಿ ಭಾರತೀದೇವಿಯೂ, ಶಿವನಲ್ಲಿರುವ ಕೇಶವನನ್ನು ಮೆಚ್ಚಿಸಿದಳು. ಶಿವನು ಪಂಚದೇವಿಯರ ತಪಸ್ಸಿನಿಂದ ತುಷ್ಟನಾಗಿ ಪ್ರತ್ಯಕ್ಷನಾದನು. ಆಗ, ಒಂದೇ ದೇಹದಲ್ಲಿದ್ದ ಈ ಐವರು ದೇವಸ್ತ್ರೀಯರು, **'ಪತಿಂ ದೇಹಿ, ಪತಿಂ ದೇಹಿ'** ಎಂದು ಯಾಚಿಸಿದರು. ಗಂಡನಾಗಲಿ, ಎಂಬ ಮಾತು ಶಿವನಿಗೆ ಐದಾವರ್ತಿ ಶ್ರುತವಾಯಿತು. ಶಿವದೇಹಸ್ಥ ವಿಷ್ಣುವು ಭಾರತಿಗೆ, ಮೊದಲಿನಂತೆ, ನಿರಂತರ ಸ್ವಪತಿ ಸಹಿತಳಾಗಿ, ತನ್ನನ್ನು ಅತಿಶಯವಾಗಿ ತೃಪ್ತಿಗೊಳಿಸೆಂದು ವರವನ್ನಿತ್ತನು ; ಪಾರ್ವತ್ಯಾದಿಗಳಿಗೆ ನಿಮ್ಮ ಪತಿಗಳನ್ನು ಶೀಘ್ರವಾಗಿ ಹೊಂದಿರೆಂದು ಶಿವನು ವರವಿತ್ತನು. ಹೀಗೆಂಬ ಶಿವನ ಮಾತು ನಾಲ್ಕಾವರ್ತಿ (ಶಿವಸ್ಥ ವಿಷ್ಣುವನ್ನೂ ಕೂಡಿ ಐದಾ-ವರ್ತಿ) ಇಂದ್ರಸೇನೆಗೆ ಕೇಳಿತು. ಒಬ್ಬಳಿಗೆ ಐದು ಜನ ಗಂಡಂದಿರಾಗುವರೆಂದು (ಪಾರ್ವ-ತ್ಯಾದಿಗಳು, ತಂತಮ್ಮ ಗಂಡನಲ್ಲದೇ, ಪ್ರತ್ಯೇಕವಾಗಿ ನಾಲ್ಕು ಜನ ಗಂಡಂದಿರಾಗುವರೆಂದು ತಿಳಿದರು. ಏಕದೇಹಸ್ಥರಾದ ಈ ದೇವಿಯರು (ಭಾರತಿಯಿಂದ ಇತರರು) ಒಬ್ಬಳಿಗೆ ಪಂಚಪತಿಗಳೆಂದು ತಿಳಿದು ರೋದನಮಾಡಿದರು. ಆಗ ದೇವೇಂದ್ರನು ಅಲ್ಲಿಗೆ ಬಂದು, ಶಿವನನ್ನು ನೋಡಿ ಶಿವನೆಂದು ತಿಳಿಯದೆ, ತನ್ನ ಅಧಿಪತ್ಯಕ್ಕೆ ಒಳಪಟ್ಟ ಮೂರು ಲೋಕಗಳಲ್ಲಿ, ಹೀಗೆ ಅನ್ಯಾಯದ ಶಾಪವನ್ನು ಕೊಟ್ಟಿರುವ ನೀನು ದುರ್ಮತಿಯೆಂದು, ಗಟ್ಟಿಯಾಗಿ ಹೇಳಲು, ಸ್ವರ್ಗದಿಂದ ಬಿದ್ದು ಮನುಷ್ಯನಾಗಿ ಹುಟ್ಟೆಂದೂ, ನೀನೇ ಈಕೆಗೆ ಗಂಡನಾಗೆಂದೂ, ಹೇಳಿದನು. ನನ್ನನ್ನು ತಿಳಿಯದ ಅಜ್ಞಾನಿಗಳು, ನನ್ನನ್ನು ತಿರಸ್ಕರಿಸಿ, ಹೊಂದುವ ಗತಿಯನ್ನು ನೋಡು, ಎಂದು, ಈ ಪರ್ವತದ ಕೆಳಗೆ ಬಿದ್ದಿರುವ ನಿನ್ನಂಥವರನ್ನು ನೋಡೆಂದು ಹೇಳಿದನು. ಇಂದ್ರನು ಪರ್ವತವನ್ನು ಕಿತ್ತಿ ಕೆಳಗೆ ನೋಡಲು, ಅಲ್ಲಿ, ತಮ್ಮ ಅವತಾರದ ಬಗ್ಗೆ ಪರಸ್ಪರ ಆಲೋಚಿಸುತ್ತಿದ್ದ, ಹಿಂದಿನ ಮನ್ವಂತರಗಳಲ್ಲಿ ಇಂದ್ರಪದವಿ-ಯನ್ನು ಆಳಿದ, ವಾಯು, ಯಮ, ಅಶ್ವಿನೀದೇವತೆಗಳನ್ನು ಕಂಡನು. ನಂತರ ಇಂದ್ರನು ಶ್ರೀವಿಷ್ಣುವನ್ನು ಸ್ತುತಿಸಿ, ಆತನ ಪ್ರಸಾದದಿಂದ **ನರಾಂಶ** (ಹರಿವಾಯುಶೇಷಾಂಶ) ಯುಕ್ತನಾಗಿ ಭೂಮಿಯಲ್ಲಿ ಹುಟ್ಟಿದನು.

ಇತ್ತ, ಬ್ರಹ್ಮದೇವನೂ ಅಲ್ಲಿಗೆ ಬಂದು, ವಾಯ್ವಾದಿ ದೇವತೆಗಳು ತನ್ನ ಅವಜ್ಞತೆಯಿಂದ ಪರ್ವತದ ಕೆಳಗೆ ಬಿದ್ದಿರುವರೆಂದು ಸುಳ್ಳು ಹೇಳಿದ್ದರಿಂದ, ಶಿವನಿಗೆ, ನೀನೂ ಮನುಷ್ಯನಾಗಿ ಹುಟ್ಟಿ; ನರಾಂಶಯುಕ್ತ ಇಂದ್ರನಿಂದ (ನರಜನ್ಮದಲ್ಲಿರುವ ಅರ್ಜುನನಿಂದ) ಪರಾಜಯವನ್ನು ಹೊಂದೆಂದು ಶಾಪವಿತ್ತನು. ಅಲ್ಲದೇ ನನ್ನಿಂದ ಶಪ್ತರಾದ ದೇವಿಯರಿಗೆ, ಪತಿಸಂಗವಾಗಲೆಂದು ವರಕೊಟ್ಟಿರುವಿಯಾದ್ದರಿಂದ, ಮನುಷ್ಯನಾಗಿ ಹುಟ್ಟಿದ ನಿನಗೆ ನಿನ್ನ ಹೆಂಡತಿಯ (ಪಾರ್ವತಿಯ) ಸಂಗವನ್ನು ಹೊಂದಬೇಡವೆಂದೂ ಶಪಿಸಿದನು. ಆದರೆ, ದ್ರೌಪದೀರೂಪದಿಂದಿರುವ ಭಾರತಿಯು ತನ್ನ ದೇಹದಿಂದ ಹೋದ ಮೇಲೆ, ಕೈಲಾಸದಲ್ಲಿ ರುದ್ರನಾಗಿರುವ ನಿನ್ನನ್ನು ಆಕೆಯು ಹೊಂದಲಿ ; ಶೀಘ್ರವಾಗಿ ಪತಿಯನ್ನು ಹೊಂದು, ಎಂಬ ನಿನ್ನ ವರವು ವ್ಯರ್ಥವಾಗಲಿ, ಎಂದೂ ಆದರಿಸಿದನು.

ಪಾರ್ವತೀ, ಶಚೀ, ಉಷಾ, ಶ್ಯಾಮಲಾ ಇವರನ್ನೊಳಗೊಂಡು **ಭಾರತೀದೇವಿಯ ನಾಲ್ಕನೇ ಜನ್ಮವೇ ದ್ರೌಪದಿಯಾಗಿ ಅಗ್ನಿಕುಂಡದಿಂದ** ಉದ್ಭವಿಸಿದ (ಅಯೋನಿಜ) ಪ್ರಸಿದ್ಧ ಪವಿತ್ರದೇಹವು, ಅಲ್ಲಿರುವ ಪಾರ್ವತಿಗೆ ಬ್ರಹ್ಮಶಾಪ ನಿಮಿತ್ತವಾಗಿ ಪತಿಸಮಾಗಮವಿಲ್ಲ. ಇತರರಿಗೆ ಶಂಕರನ ವರದಿಂದ, ದ್ರೌಪದೀ ದೇಹದಲ್ಲಿದ್ದೂ, ಶ್ಯಾಮಲೆಗೆ ಯಮನೂ (ಧರ್ಮರಾಜನೂ), ಶಚೀದೇವಿಗೆ ಇಂದ್ರನೂ (ಅರ್ಜುನನೂ), ಉಷೆಗೆ ಅಶ್ವಿನೀದೇವತೆಗಳೂ (ನಕುಲಸಹದೇವರೂ) ಪತಿಗಳಾಗಿ ದೊರೆತರು. ಅವರು, ಸ್ವಪ್ನವೂ ಅಲ್ಲದ ಮೂರ್ಛೆಯೂ ಅಲ್ಲದ ಮರಣಸದೃಶವಾದ ಅವಸ್ಥೆಯನ್ನು ಹೊಂದಿಸಲ್ಪಟ್ಟಾಗ, ಭಾರತಿಯು ಭೀಮಸೇನನೊಂದಿಗೆ ಕ್ರೀಡಿಸುತ್ತಿದ್ದಳು. ಅರ್ಜುನಾದಿಗಳು ಒಬ್ಬೊಬ್ಬರು ದ್ರೌಪದಿಯ ದೇಹವನ್ನು ಭೋಗಿಸುವಾಗ, ತತ್ಕಾಲದಲ್ಲಿ ಭಾರತೀದೇವಿಯು ವಿಶೇಷಾಭಿಮಾನವನ್ನು ತ್ಯಜಿಸಿ, ಅರ್ಜುನಾದಿಗಳಲ್ಲಿ ಆವಿಷ್ಟವಾಗಿದ್ದ ವಾಯ್ವಂಶದಿಂದ ಸಂಗವನ್ನು ಹೊಂದಿ, ಇತರ ದೇವಿಯರಿಗೆ ಸಂಭೋಗಾವಕಾಶವನ್ನು ಒದಗಿಸುತ್ತಿದ್ದಳು. ಒಂದು ಸೂಕ್ಷ್ಮವಿವಕ್ಷೆಯಿಂದ, ದೇಹಾಭಿಮಾನತ್ಯಾಗವೇ ಮರಣವು ; ಪುನಃ ಅಭಿಮಾನದ ಉತ್ಪತ್ತಿಯೇ ಜನನವು. ಈ ಕಾರಣದಿಂದ ದ್ರೌಪದಿಯು, ಪ್ರತಿದಿನವೂ ಕನ್ಯೆಯಾಗಿಯೇ ಇರುತ್ತಿದ್ದು ಮನಸಾ ಸ್ವಪತಿಯನ್ನು ವಿವಾಹವಾಗಿ, ವಿಹರಿಸುತ್ತಿದ್ದಳೆಂದೂ ನಿರ್ಣಯಿಸಲಾಗಿದೆ. (ಈ ವಿವರಗಳು ದೇವಗಮ್ಯವಾದವುಗಳೆಂದೂ ಹೇಳಲಾಗಿದೆ).

ಈ ಉಕ್ತ ಪ್ರಮೇಯಗಳು ಮಹಾಭಾರತತಾತ್ಪರ್ಯನಿರ್ಣಯದ ೧೮ನೇ ಅಧ್ಯಾಯದಲ್ಲಿನ ಪ್ರಸಕ್ತ ಶ್ಲೋಕಗಳ ಸರಳಾನುವಾದವಾಗಿದೆ. ಶ್ರೀವಾದಿರಾಜರ **ಭಾವಪ್ರಕಾಶಿಕಾ** ವ್ಯಾಖ್ಯಾನದ ಯುಕ್ತಿಗಳನ್ನೂ ಅಲ್ಲಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ದ್ರೌಪದಿಯಲ್ಲಿ, ಪಾರ್ವತೀ ಮೊದಲಾದ ಪಂಚದೇವಿಯರು (ಭಾರತೀಯೂ ಸೇರಿ) ಇದ್ದದ್ದನ್ನು ಶ್ರೀವೇದವ್ಯಾಸರು, ದ್ರುಪದರಾಜನಿಗೆ ದಿವ್ಯದೃಷ್ಟಿಯನ್ನು ಅನುಗ್ರಹಿಸಿ

ಪ್ರತ್ಯಕ್ಷವಾಗಿ ತೋರಿಸಿ, ಆಕೆಯನ್ನು ಪಂಚಪಾಂಡವರಿಗೆ ಕೊಟ್ಟು ಲಗ್ನಮಾಡಲು ಒಪ್ಪಿಸಿ, ತಾವೇ ನಿಂತು ದ್ರೌಪದಿಯೊಂದಿಗೆ ಧರ್ಮರಾಜಾದಿ ಐವರ ಪಾಣಿಗ್ರಹಣ ಮಾಡಿಸಿದ್ದಾರೆ. ಶ್ರೀಮದಾಚಾರ್ಯರು, **'ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ । (ಉಕ್ತೋSರ್ಥಃಸರ್ವ ಏವಾಯಂ ತಥಾ ಪೂರ್ವೋದಿತಾಶ್ಚಯೇ ॥')** ಎಂದು (ಭಾರತ - ತಾ) ಉಪಸಂಹಾರದಲ್ಲಿ, 'ಪುರಾಣಸಹಿತಗಳಾದ ವೇದಗಳಲ್ಲಿಯೂ ಭಾರತದಲ್ಲಿಯೂ ಈವರೆಗೆ ಹೇಳಲ್ಪಟ್ಟ (ದೇವಿಯರಿಗೆ ಬಂದ ಶಾಪಾದಿಗಳು ಏಕದೇಹ ಜನ್ಮಾದಿಗಳೂ) ಎಲ್ಲ ಅರ್ಥವಿಶೇಷಗಳೂ ಕಂಡು ಬರುತ್ತವೆ (ತಿಳಿಯಲ್ಪಡುತ್ತವೆ) ; ಮತ್ತು ಸೃಷ್ಟ್ಯಾದಿ, ವಿಷ್ಣು ಮಹಿಮೆಗಳ ನಿರ್ಣಯಗಳೂ ಅಲ್ಲಿಯೇ ಸಿದ್ಧವಾಗುತ್ತವೆ, ಎಂದೂ ಸಪ್ರಮಾಣವಾಗಿ ಘೋಷಿಸಿದ್ದಾರೆ.

(೪) ಗಂಧವಹನ ರಾಣಿ - ವಾಯುದೇವನ ಪತ್ನಿ ; ಸಿಂಧುರಗಮನೆ (ಸಿಂಧುರ - ಗಜ) ಗಜಗಮನೆ ; ಪುರಂದರಾರಾಧಿತೆ - ಇಂದ್ರಾದಿ ದೇವತೆಗಳಿಂದ ಸೇವ್ಯಳು.

ನಿಗಮತತಿಗಳಭಿಮಾನಿ - ನಿನ್ನ
ಪೊಗಳಲೆನ್ನೊಶವೆ ಕಲ್ಯಾಣಿ - ಆ ಪ-
ನ್ನಗರಾಜಸಹಸ್ರವಾಣಿ - ಯಿಂದ
ಬಗೆ ಬಗೆ ತುತಿಪ ಸುಶ್ರೋಣಿ - ಆಹ ॥
ಮುಗಿವೆ ಕರಗಳೆನ್ನವಗುಣಗಳೆಣಿಸದೆ
ಜಗನ್ನಾಥವಿಠಲನಂಘ್ರಿಗಳ ಧ್ಯಾನವನೀಯೆ ॥ ೫ ॥

ಗಮನೀಯಾಂಶ:— (೧) (ನೀನು) ನಿಗಮತತಿಗಳಭಿಮಾನಿ = ವೇದ ಸಮೂಹಗಳ ಅಭಿಮಾನಿದೇವತೆ ; ಪೊಗಳಲೆನ್ನೊಶವೆ - (ನಿನ್ನನ್ನು) ಸ್ತುತಿಸಲು ನನ್ನಿಂದ ಸಾಧ್ಯವೇ ? (ವಾಗಭಿಮಾನಿಯಾದ ನಿನ್ನ ಪ್ರೇರಣೆಯಿಲ್ಲದೇ ಸ್ತುತಿಸುವ ಸ್ವಾತಂತ್ರವುಳ್ಳ-ವನೇ ನಾನು ? ಎಂದೂ ಅಲ್ಲ).

(೨) ಕಲ್ಯಾಣಿ - ಮಂಗಳಸ್ವರೂಪಳು.

(೩) ಪನ್ನಗರಾಜ - ಶೇಷದೇವನು, ಸಹಸ್ರವಾಣಿಯಿಂದ - ತನ್ನ ಸಾವಿರ ಮುಖದಿಂದ ; 'ರುದ್ರಾದಿಸರ್ವದೇವಾನಾಂ ಮನೋವಾಚಾಮಗೋಚರಾ ।' ಎಂದು ವಾಣೀಭಾರತಿಯರ ಗುಣಪೂರ್ತಿಯು ವರ್ಣಿಸಲಾಗಿದೆ.

(೪) ಸುಶ್ರೋಣಿ - ಸುಂದರವಾದ (ಕೃಶವಾದ) ಸೊಂಟವುಳ್ಳವಳು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರೀವಾದಿರಾಜರ ಕೃತಿ

ರಾಗ: ಭೂಪಾಳಿ **ತಾಳ: ಏಕತಾಳ**

ಜಿಷ್ಣುಸಖನೆ ಕೃಷ್ಣನೆ ಕೃಷ್ಣ ಕರಿಯ ಕಾಯ್ದ ಕರುಣಿ ಪ

ಕೃಷ್ಣ ಪೊರೆಯೊ ಎನ್ನ ವಿಷಯ-
ತೃಷ್ಣೆಯಿಂ ಸಾಯಲೆ ದಮ್ಮಯ್ಯ ಅ.ಪ.

ಹಿಂದೆ ಮಾಡಿದ ಕರ್ಮದಡವಿಯೆಂದಿಗೆ ಸವರುವೆನೊ ಗೋ-
ವಿಂದ ನಿನ್ನ ಕರುಣಸುಧೆ ಇನ್ನೆಂದು ಪಡೆದು ಸುಖಿಪೆನೊ
ಇಂದುಮಾಡಿದ ಅಘಗಳು ಬಲು ದಂದುಗಕೊಳಗಾದೆ ನೀನು
ಕುಂದು ಕುಜನ ದೂರ ನಿನ್ನ ಕಂದನೆಂದು ಸಲಹೊ ತಂದೆ ೧

ಕಾಮವೆನ್ನ ಕಮಲನಾಭ ಸೀಮೆಗಾಣಲಿಯ್ಯದೊ ನಿ-
ಸ್ಸೀಮ ಮಹಿಮ ಕ್ರೋಧ ಎನ್ನ ಸಾಮವ ನಡುಗಿಸುತಿದೆ
ಭ್ರಮಿತನಾದೆ ಬಲು ಪ್ರೇಮವ ತಪ್ಪಿಸಿ ಸುರಕ್ರಾನು ಹೇ ದೈವ ಎನ್ನ
ಆ ಮಹಾಭಯವ ನಿವಾರಿಸೊ ೨

ಸುಖದುಃಖ ಜೀವನಕ್ಕೆ ಕಕ್ಕು ಬಕ್ಕು ಭಯದ ಬೇಸ-
ರಕ್ಕೆ ಬಿಡದೆ ಬಿಡದೆ ನಿನ್ನ ಲೆಕ್ಕ ಮಾಡಲಿಯ್ಯದೊ
ಚಿಕ್ಕತನದಿ ಸಿಕ್ಕಿ ದುರ್ವಿಷಯದಿ ನೊಂದೆ ಮೈ-
ಯಿಕ್ಕದಂತೆ **ಹಯವದನ** ದಕ್ಕಿಸೆನ್ನ ಅನುದಿನ ೩

(ಮು. ೨೭, ಪು. ೬೫)

ಶ್ರೀವಾದಿರಾಜರ ಕೃತಿ

ರಾಗ: (ಹಂಸಾನಂದಿ) **ತಾಳ: (ಛಾಪು)**

ಭಾರತಿ ದೇವಿಯೆ ಮಾರುತಿ ರಾಣಿಯೆ ಪ

ಮಂದಿ ನಾಲ್ವರನು ಹೊಂದಿಸಿ ಉದರದಿ
ಒಂದೆ ರೂಪದಿ ಜನರಿಗೆ ತೋರುವ ಸತಿ ೧

ಸೀತಾಕಾಂತನ ದೂತನಾಗಿ ಪ್ರ-
ಖ್ಯಾತಿಯ ಪಡೆದನ ಪ್ರೀತಿಯ ಸತಿಯಳೆ ೨

ದುಷ್ಟ ಕಲಿಯ ಕುಲ ಕುಟ್ಟಿ ಕೆಡಹಿದ ಭಲ
ಕಟ್ಟಾಳು ಭೀಮನ ಪಟ್ಟದ ಸತಿಯಳೆ ೩

ಮೂರು ಏಳು ಕುಲ ಮಾಯಿಗಳನು ಗೆದ್ದು
ಬೋರೆಮರದ ಕೆಳಗಿರುವನ ಸತಿಯಳೆ ೪

ಹಗಲಿರುಳೆನ್ನದೆ **ಹಯವದನನ** ಪದ
ಹೃದಯಕಮಲದೊಳು ಭಜಿಪನ ಸತಿಯಳೆ ೫

(ಎಂ,೫೩a, ಪು. ೩)

ಶ್ರೀಸರ್ವಜ್ಞಾಚಾರ್ಯ ಸೇವಾ ಸಂಘ

[illegible] ಮಂದಿರ, [illegible], [illegible], ದಾವಣಗೆರೆ - 577002
ದೂರವಾಣಿ : 08192 - 230340

ಸಂಘದಿಂದ ಪ್ರಕಾಶಿತವಾದ ಗ್ರಂಥಗಳ ಪಟ್ಟಿ

1) ಶ್ರೀಸತ್ತತ್ವರತ್ನಮಾಲಾ	ರೂ. 210-00
2) ಶ್ರೀವಿಷ್ಣುರಹಸ್ಯ	ರೂ. 450-00
3) ಶ್ರೀಮದ್ಭಾಗವತ ಸಾರೋದ್ಧಾರ	ರೂ. 60-00
4) ಪ್ರಾತಃ ಸಂಕಲ್ಪ ಗದ್ಯಂ	ಮರುಮುದ್ರಣಗೊಳ್ಳಬೇಕಿದೆ
5) ನಾರಾಯಣ ಶಬ್ದಾರ್ಥ	ರೂ. 30-00
6) ಶ್ರೀಮದ್‌ಬ್ರಹ್ಮಸೂತ್ರಾಣು ಭಾಷ್ಯಂ	ರೂ. 15-00
7) ಶ್ರೀವೇದವ್ಯಾಸರು	ರೂ. 3-00
8) ಶ್ರೀ ಮುಕುಂದ ಗುಣಮಾಲ	ರೂ. 4-00
9) ಸಭಾಸಾರ ಸಂಗ್ರಹ (ಭಾಗ -1)	ರೂ. 7-00
10) ಮಾಧ್ವಭೂಷಣ ಶ್ರೀ ಬಿ, ಭೀಮರಾಯರು ಮತ್ತು ಅವರ ಗ್ರಂಥಗಳ ಸಂಕ್ಷಿಪ್ತ ಪರಿಚಯ	ರೂ. 10-00
11) ಶ್ರೀಮತ್‌ಸುಂದರಕಾಂಡಮ್	ರೂ. 5-00
12) ಶ್ರೀಮತ್ ಭಾಗವತ ಪ್ರದೀಪಿತ ಸೂತ್ರಾರ್ಥಸಾರ (ಹಿಂದಿನ 4 ಸಂಪುಟಗಳು ಒಂದೇ ಸಂಪುಟದಲ್ಲಿ)	ರೂ. 400-00
13) ಶ್ರೀಕೃಷ್ಣಾರ್ಜುನ ಸಂವಾದ	ರೂ. 140-00
14) ತತ್ವಸುವಾಲಿ -ವ್ಯಾಖ್ಯಾನ ಸಹಿತ	ರೂ.120-00
15) ಲಕ್ಷ್ಮೀಶೋಭಾನೆ ಪದ -ವ್ಯಾಖ್ಯಾನ ಸಹಿತ	ರೂ.60-00

ಸಂಘದಿಂದ ಪ್ರಕಟಿತ ಎಲ್ಲಾ ಗ್ರಂಥಗಳು ಇಲ್ಲಿ ದೊರೆಯುತ್ತವೆ

ವೇದಾಂತ ಬುಕ್‌ಹೌಸ್, ಚಾಮರಾಜಪೇಟೆ, ಬೆಂಗಳೂರು. ಫೋ :080 - 26507590

ವಂದನಾ ಬುಕ್‌ಹೌಸ್, ಎನ್.ಆರ್.ಕಾಲೋನಿ, ಬೆಂಗಳೂರು. ಫೋ :080-26770826

ರಮಾ-ನಾರಾಯಣರ ವಿವಾಹ ಮಹೋತ್ಸವದ ಪ್ರಸಂಗವನ್ನು ಮುಂದಿಟ್ಟುಕೊಂಡು 'ವಿಷ್ಣು ಸರ್ವೋತ್ತಮತ್ವ'ವನ್ನು ಹೃದಯಂಗಮವಾಗಿ ಶ್ರೀ ವಾದಿರಾಜ ಗುರುಸಾರ್ವಭೌಮರು ಚಿತ್ರಿಸಿದ್ದಾರೆ. ಅವುಗಳ ಅರ್ಥ ಮತ್ತು ವಿಶೇಷಾಂಶಗಳ ಜೊತೆಗೆ ವ್ಯಾಖ್ಯಾನಕಾರರು ತಿಳಿಸಿರುವ ಮಾತು ಗಮನಾರ್ಹ – 'ಸ್ವಯಂವರ ಪ್ರದರ್ಶನಾರ್ಥ ಮೇವ ಉಭಯತಃ ಪಂಙ್ಕ್ತ್ಯ ಕೃತ ಸ್ಥಿತಾಃ ನತು ಲಕ್ಷ್ಮ್ಯಾಪ್ರೇಕ್ಷಯಾ ಇತಿ ಸೂಚಯತಿ'.

ಈ ಕೃತಿಯ ನಿರಂತರ ಪಠಣ ಮಂಗಳದಾಯಕ.

ವಧುವಿಗೆ ಓಲೆ ಭಾಗ್ಯ ಸ್ಥಿರ, ವಧುವರರಿಗೆ ಕಲ್ಯಾಣ ಭಾಗ್ಯ, ಸಕಲ ಸಂಪತ್ತಿನ ಲಾಭ.

* * * * *

ಶ್ರೀವಾದಿರಾಜ ಗುರುಸಾರ್ವಭೌಮರು 'ವಾಯುಜೀವೋತ್ತಮ' ತತ್ತ್ವವನ್ನು ಪ್ರತಿಪಾದಿಸುವವರಲ್ಲಿ ಅಗ್ರಗಣ್ಯರು. ಶ್ರೀಮಹಾಭಾರತದಲ್ಲಿಯ ಒಂದು ಪ್ರಸಂಗ 'ಕೀಚಕ ವಧೆ' ಅರ್ಥಾತ್ 'ಭೀಮಸೇನ ವಿಜಯ'ವನ್ನು ಚಿತ್ರಣ ಮಾಡುತ್ತ ಈ ತತ್ತ್ವವನ್ನು ಬಿಂಬಿಸಿದ್ದಾರೆ. ನಮ್ಮಲ್ಲಿರುವ ಅರಿಷಡ್ವರ್ಗಗಳು ಆರುವೈರಿಗಳಾಗಿದ್ದಾರೆ – ಶ್ರೀಭೀಮಸೇನದೇವರ ಕೃಪಾಪಾತ್ರರಾಗಿ, ಈ ಆರುವೈರಿಗಳನ್ನು ಮರ್ದಿಸುವ ಕಾರ್ಯದಲ್ಲಿ ಪ್ರವೃತ್ತರಾಗಬೇಕು – ಎಂದು ಅಪ್ಪಣೆ ಕೊಡಿಸಿದ್ದಾರೆ.

ಶ್ರೀ ಭೀಮರಾಯರು ತಮ್ಮ ವ್ಯಾಖ್ಯಾನದಲ್ಲಿ ಈ ಪ್ರಸಂಗವನ್ನು ಅರ್ಥಮಾಡಿಕೊಳ್ಳುವ ಕ್ರಮವನ್ನು ತೋರಿಸುತ್ತ ವಿಷಯಾಸಕ್ತಿ ಜಯಿಸಲು ಶ್ರೀವಾಯುದೇವರ ಅನುಗ್ರಹ ಅವಶ್ಯಕವೆಂದು ವಿಶದೀಕರಿಸಿದ್ದಾರೆ.

* * * * *

ಶ್ರೀ ಜಗನ್ನಾಥದಾಸರ 'ಭಾರತೀ ಮಜ್ಜನನಿ'ಯಲ್ಲಿ ಕೆಲವೇ ನುಡಿಗಳಿದ್ದರೂ, ಋಜುಗಣವರ್ಗದವರ ಮಹಾತ್ಮ್ಯೆ ಅಡಗಿದೆ. ಅವರು 'ಹರಿಕಥಾಮೃತಸಾರ'ದ ದ್ರಷ್ಟಾರರು. ಅವರ ಕೃತಿಗಳು ಮಹತ್ತ್ವಪೂರ್ಣವಾಗಿವೆ.

ಇವುಗಳನ್ನು ವ್ಯಾಖ್ಯಾನಕಾರರು ವಿವರಿಸಿ ಭಾರತೀದೇವಿಯರ ಮೂಲರೂಪದ ವ್ಯಾಪಾರಾದಿಗಳ ಪ್ರಮೇಯ ಅರುಹಿದ್ದಾರೆ.

* * * * *

ರಮಾ-ನಾರಾಯಣರ ಶ್ರೇಷ್ಠತ್ವ; ನಂತರದಲ್ಲಿ ವಾಯು-ಭಾರತೀದೇವಿಯರು ವಿಷ್ಣುವಿನಲ್ಲಿ ಸರ್ವದಾ ಮಾಡುತ್ತಿರುವ ಭಕ್ತಿಯ ವೈವಿಧ್ಯ... ಇವುಗಳು ಮುಖ್ಯ ಪ್ರಮೇಯವೆಂಬುದನ್ನು ವ್ಯಾಖ್ಯಾನಕಾರರು ಮನಮುಟ್ಟುವಂತೆ ಬೆಳಗಿಸಿದ್ದಾರೆ..

ಲಕ್ಷ್ಮೀಶೋಭನ ಪದ ಶುಭಪ್ರದ